
SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:8, Pages:56
March - 2023, Price Rs.20/-
ತಿರುಮಲೆ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಮಾರ್ಚ್ 2023
ಬೆಲೆ ರೂ. 20/-
ತಿರುಪತಿ
ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
20-03-2023 ರಿಂದ 28-03-2023 ರ ವರೆಗೆ

ತಿರುಮಲ ತಿರುಪತಿ ದೇವಸ್ಥಾನಗಳು

# ಶ್ರೀ ಬಾಲಾಜಿ ದಿವ್ಯಾಂಗರ ಶಸ್ತ್ರಚಿಕಿತ್ಸೆ, ಪರಿಶೋಧನೆ ಮತ್ತು ಪುನರಾವಾಸ ಕೇಂದ್ರ

# (ಬರ್ಡ್)









ಪೋಲಿಯೋ ಮೆಲ್ಲಿಟಸ್,ಸೆರೆಬ್ರಲ್ ಪಾಲ್ಸಿ, ಜನ್ಮತಃ ಅಸ್ವಸ್ಥತೆಗಳು, ಬೆನ್ನು ಮೂಳೆಯ ಗಾಯಗಳು ಮತ್ತು ಮೂಳೆಗಳು, ಕೀಲು ನೋವಿನಿಂದ ಬಳಲುತ್ತಿರುವವರು ಮತ್ತು ಅಂಗವೈಕಲ್ಯ ರೋಗಿಗಳಿಗೆ ಸಂಪೂರ್ಣ ಉಚಿತ ಸೇವೆಗಳನ್ನು ಒದಗಿಸಲು ಅತ್ಯಾಧುನಿಕ ವೈದ್ಯಕೀಯ ಉಪಕರಣಗಳೊಂದಿಗೆ ಬರ್ಡ್ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಈ ವೈದ್ಯ ಕೇಂದ್ರಕ್ಕೆ ಮಾನವೀಯ ದೃಷ್ಟಿಕೋನದಿಂದ ಈ ವೈದ್ಯಕೀಯ ಸಂಸ್ಥೆಗೆ ಸಹಾಯ ಮಾಡಲು ನಿಮ್ಮ ಕೈಲಾದಷ್ಟು ಸಹಾಯದ ರೂಪದಲ್ಲಿ "ಮಾನವ ಸೇವೆ ಮಾಧವಸೇವೆ"

ಆರ್ಟಿಕಲ್ 80 (ಜಿ) ಅಡಿಯಲ್ಲಿ ಆದಾಯ ತೆರಿಗೆ ವಿನಾಯಿತಿ ನೀಡಲಾಗಿದೆ.

**ನಿಮ್ಮ ವಿವರಗಳನ್ನು:** ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ಹೆಸರಿನಲ್ಲಿ ಡಿಮಾಂಡ್ ಡ್ರಾಫ್ಟ್/ ಚೆಕ್ಕುಗಳನ್ನು ಕಳುಹಿಸಬಹುದು.

**ವಿಳಾಸ:** ಉಪಕಾರ್ಯನಿರ್ವಹಣಾಧಿಕಾರಿ (ದಾನಿಗಳ ಇಲಾಖೆ),
ಕೇಂದ್ರೀಕೃತ ದಾನಿ ನಿರ್ವಹಣಾ ಶಾಖೆ,ಆದಿಶೇಷು ವಿಶ್ರಾಂತಿ ಗೃಹ,
ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ,
ಕ್ಯಾಂಪ್ ಆಫೀಸ್ ಪಕ್ಕದಲ್ಲಿ ತಿರುಮಲೆ,
ದೂರವಾಣಿ ಸಂಖ್ಯೆ 0877- 2263472

ಅಥವಾ

ನಿರ್ದೇಶಕರು, ಬರ್ಡ್‌ಟ್ರಸ್ಟ್, ತಿರುಮಲೆ ತಿರುಪತಿ ದೇವಸ್ಥಾನಗಳು,
ತಿರುಪತಿ - 517 501
ದೂರವಾಣಿ ಸಂಖ್ಯೆ: 0877 - 2264025
ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 0877 -2264619

website: www.tirumala.org.
e-mail :- officebirrd@gmail.com
MOBILE APP: BIRRD HOSPITAL



ರಾಮ ಗೋವಿಂದ ಹರಿ ಕೃಷ್ಣ ಗೋವಿಂದ
ದಾಮೋದರ ಹರಿ ವಿಷ್ಣು ಮುಕುಂದ

ಮತ್ಸ್ಯಾವತಾರದೊಳಾಡಿದನೆ
ಮಂದರಾಚಲವ ಬೆನ್ನೊಳಾಂತವನೇ
ಅಚ್ಚ ಸೂಕರನಾಗಿ ಬಾಳಿದನೆ
ಮದ ಹೆಚ್ಚಿ ಹಿರಣ್ಯನ ಸೀಳಿದನೇ

ಬಲಿಯೊಳು ದಾನವ ಬೇಡಿದನೆ
ಕ್ಷತ್ರಕುಲವ ಬಿಡದೆ ಕ್ಷಯ ಮಾಡಿದನೆ
ಜಲನಿಧಿಗೆ ಬಿಲ್ಲ ಹೂಡಿದನೆ
ಕಾಮಗೊಲಿದು ಗೊಲ್ಲತಿಯೊಳು ಆಡಿದನೆ

ಸಾಧಿಸಿ ತ್ರಿಪುರರ ಗೆಲಿದವನೆ
ಪ್ರತಿವಾದಿಸಿ ಹಯವೇರಿ ಮೆರೆದವನೆ
ಭೇದಿಸಿ ವಿಶ್ವವ ಗೆಲಿದವನೆ
ಬಡದಾದಿ ಕೇಶವ ನಮಗೊಲಿದವನೆ

ರಾಧಾಕೃಷ್ಣ ಜಯ ಕುಂಜವಿಹಾರಿ
ಮುರಳೀಧರ ಗೋವರ್ಧನಧಾರೀ
ಶಂಖ ಚಕ್ರ ಪೀತಾಂಬರಧಾರೀ
ಕರುಣಾಸಾಗರ ಕೃಷ್ಣಮುರಾರಿ

- ಶ್ರೀ ಕನಕದಾಸರು

# ಭಗವದ್ಗೀತೆ

ಸಂಜಯ ಉವಾಚ -

ತಂ ತಥಾ ಕೃಪಯೊಽಽವಿಷ್ಟಂ ಅಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದಂತ ಮಿದಂ ವಾಕ್ಯಂ ಉವಾಚ ಮಧುಸೂದನಃ ॥


(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ - 1)

ಸಂಜಯಃ -

ಹಾಗೆ ಮರುಕ ತುಂಬಿ ಕಣ್ಣೀರು ತುಂಬಿ ಮುಂದು ಗಾಣದೆ ವ್ಯಥೆಗೊಳ್ಳುತ್ತಿರುವ ಅರ್ಜುನನನ್ನು ಕುರಿತು ಕೃಷ್ಣನು ಈ ಮಾತನ್ನು ಹೇಳಿದನು.



# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಕ್ಷಣವಿಲಯಿನಾಂ ಶಾಸ್ತ್ರಾರ್ಥಾನಾಂ ಫಲಾಯ ನಿವೇಶಿತೇ ಸುರಪಿತೃಗಣೇ ನಿರ್ವೇಶಾತ್ ಪ್ರಾಗಪಿ ಪ್ರಲಯಂ ಗತೇ।
ಅಧಿಗತವೃಷಕ್ಷ್ಮಾ ಭೃನ್ನಾಥಾಮ ಕಾಲವಶಂವದಾಂ ಪ್ರತಿಭುವಮಿಹ ವ್ಯಾಚಖ್ಯುಸ್ತ್ವಾಂ ಕೃಪೇ ನಿರುಪಪ್ಲವಾಮ್ ॥ 78॥

ಹಿಂದಿನ ಪದ್ಯದಲ್ಲಿ ಮೋಕ್ಷಕ್ಕಾಗಿಯೇ ಪ್ರಪತ್ತಿಯನ್ನು ಮಾಡಿದವನ ವಿಷಯದಲ್ಲಿ ದಯಾದೇವಿಯು ಫಲವನ್ನು ಪಡೆಯುವುದಕ್ಕೆ ಮೊದಲು ಅವನಿಗೆ ಉಂಟಾಗುವ ವಿಘ್ನಗಳನ್ನು ಪರಿಹರಿಸಿ ನಿರ್ದಿಷ್ಟವಾದ ಕಾಲದಲ್ಲಿ ಫಲವು ದೊರಕುವಂತೆ ಮಾಡುವಳೆಂದು ವರ್ಣಿಸಿರುತ್ತಾರೆ. ಈ ಪದ್ಯದಲ್ಲಿ ಹಾಗೆಯೇ ಸ್ವರ್ಗವೇ ಮೊದಲಾದ ಪುರುಷಾರ್ಥಗಳನ್ನು ಉದ್ದೇಶಿಸಿ ಯಾಗ, ದಾನ ಹೋಮವೇ ಮೊದಲಾದ ಪುಣ್ಯಕರ್ಮಗಳನ್ನು ಮಾಡುವವರ ವಿಷಯದಲ್ಲಿಯೂ ಕೆಲವು ವಿಘ್ನಗಳುಂಟಾದರೆ ಅವುಗಳನ್ನೂ ದಯಾದೇವಿಯೇ ನಾಶ ಮಾಡುವಳೆಂದು ನಿರೂಪಿಸುತ್ತಾರೆ.

ಯಾಗವೇ ಮೊದಲಾದ ಪುಣ್ಯಕರ್ಮಗಳನ್ನು ಮಾಡಿದವರಿಗೂ ಕೂಡ ಫಲವನ್ನು ಕೊಡುವುದಕ್ಕಾಗಿ ಸರ್ವೇಶ್ವರನಿಂದ ಇಂದ್ರನೇ ಮೊದಲಾದ ದೇವತೆಗಳೂ ಪಿತೃಗಳೇ ಮೊದಲಾದವರೂ ಏರ್ಪಟ್ಟಿರುವರು. ಯಾಗವೇ ಮೊದಲಾದ ಪುಣ್ಯ ಕರ್ಮಗಳೇ ಫಲಗಳನ್ನು ಕೊಡುತ್ತವೆ ಎಂಬುದು ಒಪ್ಪಿಕೊಳ್ಳುವಂತಹುದಲ್ಲ. ಕರ್ಮಗಳು ಕೆಲವು ಕ್ಷಣಗಳಲ್ಲಿಯೇ ನಾಶವಾಗಿ ಹೋಗುವುದರಿಂದ ಬಹುಕಾಲ ಕಳೆದ ನಂತರ ಇವನಿಗೆ ಬರಬಹುದಾದ ಸ್ವರ್ಗವೇ ಮೊದಲಾದ ಫಲಗಳಿಗೆ ಕಾರಣವಾಗಲಾರವಲ್ಲವೆ! ಇದಕ್ಕಾಗಿ ಅಪೂರ್ವವೆಂಬುದನ್ನು ಒಪ್ಪಿಕೊಳ್ಳುವುದರಲ್ಲಿಯೂ ಅನೇಕ ದೋಷಗಳುಂಟು. ಆದ್ದರಿಂದ ಆಯಾಯ ಕರ್ಮಗಳಲ್ಲಿ ಉದ್ದೇಶ್ಯರಾದ ಇಂದ್ರನೇ ಮೊದಲಾದ ದೇವತೆಗಳ ಅನುಗ್ರಹದಿಂದಲೇ ಫಲವುಂಟಾಗುವುದು, ಇದು ಹೀಗಿರುವಾಗ ,ಆ ದೇವತೆಗಳೂ ಪರಮಪುರುಷನ ಅನುಗ್ರಹದಿಂದ ಆಯಾಯ ಪದವಿಗಳಲ್ಲಿ ನಿರ್ದಿಷ್ಟಕಾಲಪರ್ಯಂತವಾಗಿ ಏರ್ಪಟ್ಟಿರುವುದರಿಂದ ಅವರಿಗೂ ನಾಶವುಂಟು ಅವರೂ ಅನಿತ್ಯರೇ ಎಂದಾಯಿತು. ಸ್ವರ್ಗವನ್ನು ಉದ್ದೇಶಿಸಿ ಯಾಗವನ್ನು ಮಾಡಿದವನು ತನ್ನ ಕಾಲವು ಮುಗಿದು ಅನಂತರ ಆ ಫಲವನ್ನು ಪಡೆಯುವ ಸಮಯದಲ್ಲಿ ಇಂದ್ರನೇ ಮೊದಲಾದ ದೇವತೆಗಳಿಗೂ, ಪಿತೃಗಳಿಗೂ ನಿಯತವಾಗಿರುವ ಸಮಯವು ಮುಗಿದು ಅವರು ನಾಶವಾದರೆ ಆ ಫಲವನ್ನು ಕೊಡುವರಾರೆಂದು ಸಂದೇಹವುಂಟಾದಾಗ ಶಾಸ್ತ್ರವನ್ನು ಬಲ್ಲ ಹಿರಿಯರು ಹೀಗೆ ಹೇಳುತ್ತಾರೆ. ಕಾಲಕ್ಕೆ ವಶವಾಗದೆ ನಿತ್ಯಳಾಗಿರುವವಳೂ, ತನಗಿಂತಲೂ ಮೇಲೆ ಅಧಿಕಾರವನ್ನು ನಡೆಸುವವರು ಯಾರೂ ಇಲ್ಲದ್ದರಿಂದ ತನ್ನ ಇಷ್ಟಕ್ಕೆ ವಿರೋಧವಾಗಿ ಬೇರೊಬ್ಬರಿಂದ ಉಪದ್ರವವು ಇಲ್ಲದವಳೂ ಆದ ಶ್ರೀನಿವಾಸನ ದಯೆಯೇ ನಾಶವಾದ ಅಧಿಕಾರಿಗಳ ಬದಲಾಗಿ ನಿಂತು ಆಯಾಯ ಫಲಗಳನ್ನು ಕೊಡುವಳು. ಅಂದರೆ, ಶ್ರೀನಿವಾಸನೆಂಬ ಪರಮಪುರುಷನೇ ಪರಮದಯೆಯಿಂದ ಇಂದ್ರಾದಿಗಳು ನಾಶವನ್ನು ಹೊಂದಿದರೂ ಕೂಡ ಅವರು ಕೊಡಬೇಕಾದ ಫಲಗಳನ್ನು ಕೊಡುವನು. ಅವನು ನಿತ್ಯನು ಕಾಲಕ್ಕೆ ವಶವಾಗದವನು. ಅವನಿಗಿಂತಲೂ ಮೇಲೆ ಯಾರೂ ಇಲ್ಲದ್ದರಿಂದ ವಿಘ್ನವುಂಟಾಗುವುದಕ್ಕೆ ಅವಕಾಶವೇ ಇಲ್ಲ.

ಇಂದ್ರಾದಿಗಳು ಸಾಕ್ಷಾತ್ತಾಗಿ ಫಲವನ್ನು ಕೊಡುವುದೂ ಕೂಡ ಪರಮಪುರುಷನು ಅವರಲ್ಲಿ ಅಂತರ್ಯಾಮಿಯಾಗಿದ್ದು ಅವನಿಂದ ಕೊಡಲ್ಪಟ್ಟ ಶಕ್ತಿಯಿಂದಲೇ ಎಂದೂ ಯಾಗವೇ ಮೊದಲಾದವುಗಳಿಂದಲೇ ಆರಾಧಿಸುವವರೂ ಕೂಡ ತಮಗೆ ತಿಳಿಯದಿದ್ದರೂ ಇಂದ್ರನನ್ನು ಉದ್ದೇಶಿಸಿಯೇ ಆರಾಧಿಸಿದರೂ ಅಂತರ್ಯಾಮಿಯಾದ ಪರಮಪುರುಷನನ್ನೇ ಆರಾಧಿಸುವರೆಂದೂ ಗೀತೆಯೇ ಮೊದಲಾದ ಶಾಸ್ತ್ರಗಳಲ್ಲಿ ಪ್ರಸಿದ್ಧವಾದುದಾಗಿದೆ. ಹೀಗಿರುವುದರಿಂದ, ಇಂದ್ರಾದಿಗಳು ನಶಿಸಿಹೋದರೆ ಪರಮಪುರುಷನೇ ನಶಿಸಿ ಹೋದರೆ ಇಂದ್ರಾದಿಗಳಿಗೆ ಜಾಮಿನಾಗಿ ಮೊದಲಿನ ಇಂದ್ರನ ಸ್ಥಾನಕ್ಕೆ ಮತ್ತೊಬ್ಬ ಇಂದ್ರನು ಬಂದರೂ ಅವನ ಮೂಲಕವಾಗಿ ಫಲವನ್ನು ಕೊಡಿಸುವನು. ಬೇರೆ ಇಂದ್ರನ ಮೂಲಕವಾಗಿ ಕೊಡಿಸಿದರೂ ಜವಾಬ್ದಾರಿಯು ಪರಮಪುರುಷನಿಗೆ ಸೇರಿರುವುದರಿಂದ ಅವನೇ ಫಲದಾತೃವೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ / ಶ್ರೀ ಶೋಭಕೃತ್
ನಾಮಸಂವತ್ಸರ
ಫಾಲ್ಗುಣ - ಚೈತ್ರ
ಮಾಸ ಸಂಚಿಕೆ

ಸಂಪುಟ : 02 ಮಾರ್ಚ್ - 2023 ಸಂಚಿಕೆ : 08



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಶ್ರೀರಾಮ ನಾಮದ ಶ್ರೇಷ್ಠತೆ | - ಕು॥ ಅಖಿಲ ಮಧು | 7 |
| ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ | -ವಿ. ನಾಗೇಂದ್ರ ಪ್ರಸಾದ್ | 11 |
| ಮರಳಿ ಬಂದಿದೆ ಯುಗಾದಿ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 13 |
| ಹರಿದಾಸಿ ಯದುಗಿರಿಯಮ್ಮನವರ ಶ್ರೀಮದ್ರಾಮಾಯಣ ಕೃತಿಗಳು | -ಡಾ॥ ಸುಮನ ಬ್ರದರೀನಾಥ್ | 15 |
| ಶುಭ ತರುವ ಶೋಭನ ನಾಮ ಸಂವತ್ಸರ - ಯುಗಾದಿ | - ವೇದವಿದ್ವಾನ್.ಶಿವರಾಮ ಜೋಗಳೇಕರ | 17 |
| ಹೊಸ ವರ್ಷದ ಯುಗಾದಿ ಸೌರಮಾನ - ಚಂದ್ರಮಾನ ಯುಗಾದಿ | - ಹನುಮಂತ.ಮ. ದೇಶಕುಲಕರ್ಣಿ | 20 |
| ತುರುವೇಕೆರೆಯ ಕೇಶವ ಮತ್ತು ಬೇಟೆರಾಯಸ್ವಾಮಿ ದೇವಾಲಯ | - ಕೆಂಗೇರಿ ಚಕ್ರಪಾಣಿ | 24 |
| ಹೋಳಿ ಹುಣ್ಣಿಮೆ | -ಶ್ರೀಮತಿ. ಮಾಧುರಿ ದೇಶಪಾಂಡೆ | 26 |
| ಶ್ರೀರಾಮಚಂದ್ರ ಚರಣೌ ಶರಣಂ ಪ್ರಪದ್ಯೆ | -ಕೆ. ಎಸ್. ರಾಮಮೂರ್ತಿ | 27 |
| ಭಾವಿ ಸಮೀರ ಶ್ರೀವಾದಿರಾಜ ಸ್ವಾಮಿಗುರು ಸಾರ್ವಭೌಮರ ರಥೋತ್ಸವ | - ಶ್ರೀಧರ ರಾಯಸಂ | 31 |
| ಗಜ್ಜುಗದ ಕಾಯಲ್ಲಿ ಔಷಧೀಯ ಗುಣಗಳು ಹೇರಳ | - ಶ್ರೀಮತಿ | 34 |
| ಆದರ್ಶಮಾತಾಕೌಶಲ್ಯದೇವಿ | -ಎಸ್.ಆರ್. ಪೂಜಾರ್ ಕಾಕನೂರು | 36 |
| 108 ವೈಷ್ಣವ ದಿವ್ಯದೇಶಗಳು ತಿರುಕ್ಕೊಡಲೂರ್ | -ಸೂರ್ಯವಂಶಿ | 38 |
| ಲಕ್ಷ್ಮೀಲೀಲಾಮೃತ | - ಡಾ॥ ಎ. ಕುಮುದ | 40 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 43 |
| ಹರಿದಾಸ ಯತಿ ಶ್ರೇಷ್ಠ ಶ್ರೀ ವಾದಿರಾಜರು | -ಡಾ॥ ಆರ್. ವಾದಿರಾಜು | 44 |
| ನಮೋವ್ಯಾಸಮುನೀಂದ್ರ | - ಭರತ್ ಎಂ.ಎ. | 46 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 47 |
| ನೀತಿ ಕಥೆ - ಪ್ರೀತಿಸೋಣ ಎಲ್ಲರನ್ನೂ ಗೆಲ್ಲೋಣ | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ಮತ್ಸ್ಯಾವತಾರ | - ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ - ಶ್ರೀಕೋದಂಡರಾಮಸ್ವಾಮಿಯವರು, ತಿರುಪತಿ

ಹಿಂಬದಿಚಿತ್ರ - ಉಭಯದೇವಿಯರೊಂದಿಗೆ ಶ್ರೀವೇದನಾರಾಯಣಸ್ವಾಮಿ, ನಾಗಲಾಪುರಂ


**ಗೌರವ ಸಂಪಾದಕರು**

ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ, ತಿರುಪತಿ-517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



# ಸಂಪಾದಕೀಯ

## ಮೊದಲಿಗೆ ಮಹಿಳಾ ಓದುಗರಿಗೆಲ್ಲಾ ಮಹಿಳಾದಿನಾಚರಣೆಯ ಶುಭಾಶಯಗಳು

ಮಹಿಳೆಯರ ಸಾಧಿಕಾರಕ ಶಕ್ತಿಯ ಬಗೆಗೆ ವೇದಗಳು, ಪುರಾಣಗಳ ಕಾಲದಿಂದಲೂ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ. ಇಂತಹಾ ಮಹಿಳಾಶಕ್ತಿಯನ್ನು ಇಂದು ಪುನರುಜ್ಜೀವಗೊಳಿಸುವ ಸಂದರ್ಭ ಒದಗಿದೆ. ಈಗಿನ ಕಾಲದ ಮಹಿಳೆಯರು ಎಲ್ಲಾ ರಂಗಗಳಲ್ಲೂ ತಮ್ಮದೇ ಆದ  ಛಾಪು ಮೂಡಿಸಿದ್ದಾರೆ. ಆದರೆ ಒಂದೆಡೆ ನಾವು ಹೆಣ್ಣನ್ನು ಶಕ್ತಿಯೆಂದು, ತಾಯಿಯೆಂದು ಪೂಜಿಸುತ್ತಲೇ ಮತ್ತೊಂದೆಡೆ ಆಕೆಯ ಮೇಲೆ ದೌರ್ಜನ್ಯಗಳು ಅನಾಚಾರಗಳು ನಡೆಯುತ್ತಲೇ ಇರುವುದನ್ನು ನೋಡುತ್ತಿದ್ದೇವೆ.ಹೆಣ್ಣು ಎಲ್ಲವನ್ನೂ ಚೆನ್ನಾಗಿ ಸಂಭಾಳಿಸಿಕೊಂಡು ಹೋಗುತ್ತಾಳೆ  ಎನ್ನುವುದು ಪ್ರಪಂಚವೇ ಅರಿತಿರುವ ಸತ್ಯವಾಗಿದೆ. ಇವೆಲ್ಲಾ ಶಕ್ತಿಗಳು ನಮಗೆ ನಮ್ಮ ಪ್ರಾಚೀನರಿಂದ ಬಂದಿದೆಯೆಂದರೆ ತಪ್ಪಾಗಲಾರದು. ವೇದಗಳು,ಪುರಾಣದ ಕಾಲದಲ್ಲಿ ಹೆಣ್ಣನ್ನು ಶಕ್ತಿಗೆ ಹೋಲಿಸುತ್ತಿದ್ದರು. ಹೆಣ್ಣುದೇವತೆಗಳನ್ನು ಶಕ್ತಿ ದೇವತೆಗಳೆಂದು ಪೂಜಿಸುತ್ತಿದ್ದರು. ಈಗಲೂ ನಾವು ಪೂಜಿಸುತ್ತೇವೆ. ಅದಕ್ಕೆ ಉದಾಹರಣೆ ಸೌಭಾಗ್ಯದೇವತೆ ಲಕ್ಷ್ಮೀದೇವಿ. ವಿದ್ಯಾದೇವತೆ ಸರಸ್ವತೀ ದೇವಿ, ಶಕ್ತಿದೇವತೆ ದುರ್ಗಾದೇವಿ. ಇವರೆಲ್ಲಾ ಆ ಕಾಲದಿಂದಲೂ ಇಂದಿಗೂ ಪೂಜನೀಯರು ಹಾಗೇ ಪ್ರಾತಃಸ್ಮರಣೀಯರು.

ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರೇ ತಮ್ಮ ತಮ್ಮ ಅರ್ಧಾಂಗಿಯರನ್ನು ನಡೆಸಿಕೊಂಡಿರುವ ರೀತಿ ಅವರ ಭಕ್ತರಿಗೆ ಆದರ್ಶನೀಯವೆಂದೇ ಹೇಳಬೇಕು. ಬ್ರಹ್ಮ ಸರಸ್ವತಿಯನ್ನು ನಾಲಿಗೆಯ ಮೇಲಿರಿಸಿಕೊಂಡರೆ, ವಿಷ್ಣು ತನ್ನ ದೇವಿಯನ್ನು ಹೃದಯದಲ್ಲಿರಿಸಿಕೊಂಡಿದ್ದಾನೆ ಪರಶಿವನು ತನ್ನ ಅರ್ಧಶರೀರವನ್ನೇ ಅರ್ಧಾಂಗಿಗೆ ನೀಡಿ ಅರ್ಧನಾರೀಶ್ವರನಾದ ವಿಷಯ ಎಲ್ಲರಿಗೂ  ವಿದಿತವಾದುದೇ! ವೇದಗಳ ಕಾಲದಲ್ಲೂ ಹೆಣ್ಣು ಮಕ್ಕಳಿಗೆ, ಗಂಡುಮಕ್ಕಳಿಗೆ ಯಾವುದೇ ರೀತಿಯ ಭೇದವಿರುತ್ತಿರಲಿಲ್ಲ. ಎಲ್ಲರಿಗೂ ವಿದ್ಯೆ ಒಂದೇ ರೀತಿಯಲ್ಲಿರುತ್ತಿತ್ತು. ಅವರಿಬ್ಬರಿಗೂ ಸರಿಸಮಾನವಾದ ಹಕ್ಕುಗಳಿದ್ದುವು. ಎಲ್ಲೂ ಹೆಣ್ಣನು ಕೀಳಾಗಿ ಕಂಡ ಸಂದರ್ಭವಿಲ್ಲ ಅವರೂ ಗಂಡಸರಂತೆ ವೇದಗಳನ್ನು ಕಲಿತು ಅನೇಕ ಹವನ, ಹೋಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರಿಗೂ ಅತ್ಯಂತ ಗೌರವಾದರಗಳು ದೊರೆಯುತ್ತಿತ್ತು ಆಗವರಿಗೆ ಬಾಲ್ಯವಿವಾಹ, ಸತೀಪದ್ಧತಿ, ವರದಕ್ಷಿಣೆಯಂತಹಾ ದುರಾಚಾರಗಳ ಕರಾಳ ಪದ್ಧತಿಗಳು ತಿಳಿದಿರಲಿಲ್ಲ.

ಅವರೆಲ್ಲರೂ ಮಂತ್ರೋಚ್ಚಾರಣೆ, ವೇದಗಳಲ್ಲಿ ಪರಿಣತಿಯನ್ನು ಹೊಂದಿದ್ದವರಾಗಿದ್ದರು. ಇಂದಿನ ಪೀಳಿಗೆ ಕಂಡೂ ಕೇಳರಿಯದ ಪ್ರಮುಖ ಸ್ತ್ರೀವೇದ ಪಂಡಿತರು ಅನೇಕರಿದ್ದರು. ಉದಾಹರಣೆಗಾಗಿ ಮೈತ್ರೀಯ, ಘೋಷ , ಲೋಪಾಮುದ್ರೆ, ಇಂದ್ರಾಣಿ ಹೀಗೆ ಅನೇಕರಿದ್ದರು. ಘೋಷ ಎಂಬ ವೇದಶಾಸ್ತ್ರಕ್ಕೆ ಅಶ್ವಿನೀ ದೇವತೆಗಳನ್ನು ಸ್ತುತಿಸುತ್ತಾ  ಅನೇಕ ಶ್ಲೋಕಗಳನ್ನು ರಚಿಸಿ ಅವರನ್ನು ಆರಾಧಿಸಿ ತನಗೆ ಒದಗಿದ ಕ್ಷಯ ರೋಗವನ್ನು ಆ ಅಶ್ವಿನೀದೇವತೆಗಳ ಅನುಗ್ರಹದಿಂದ  ಗುಣಪಡಿಸಿಕೊಂಡಳಂತೆ ಹಾಗೆ ಅತ್ಯಂತ ಶ್ರೀಮಂತ ಮನೆತನದಲ್ಲಿ ಹುಟ್ಟಿದ ಲೋಪಾಮುದ್ರೆ ಅಗಸ್ತ್ಯ ಮಹರ್ಷಿಗಳನ್ನು ವಿವಾಹವಾದ ನಂತರ ಅತನೊಂದಿಗೆ ಋಷ್ಯಾಶ್ರಮದಲ್ಲಿದ್ದು  ಆತನಿಗೆ ಸಮಾನವಾಗಿ ವೇದಾಧ್ಯಯವನ್ನು ಮಾಡುತ್ತಾ ಕೊನಗೆ  ಕಾವೇರಿ ನದಿಯಾಗಿ ಹರಿದು, ಇಂದಿಗೂ ಪವಿತ್ರವಾದ ನದಿ ಎಂಬ ಹೆಗ್ಗಳಿಕೆ ಪಾತ್ರಳಾಗಿದ್ದಾಳೆ. ಇನ್ನು ಯಾಜ್ಞವಾಲ್ಕ್ಯನ ಪತ್ನಿಯಾದ ಮೈತ್ರೇಯ ಮೋಕ್ಷಮಾರ್ಗಕ್ಕಾಗಿ ಅದ್ಭುತವಾದ ತಪಸ್ಸನ್ನು ಮಾಡಿದವಳು. ಜನಕ ಮಹಾರಾಜನು ಆಚರಿಸಿದ "ಬ್ರಹ್ಮಯಜ್ಞದಲ್ಲಿ" ಭಾಗವಹಿಸಿದ ಗಾರ್ಗಿ ಗಾರ್ಗವಂಶದಲ್ಲಿ ಜನ್ಮಿಸಿದ ಪ್ರಮುಖ ವೇದಜ್ಞ॥

ಹೀಗೆ ಅನೇಕ ವೇದಶಾಸ್ತ್ರಜ್ಞೆಯರು ನಮ್ಮ ದೇಶದಲ್ಲಿ ಜನ್ಮಿಸಿದ್ದರಿಂದ ಭಾರತ ದೇಶ ಪವಿತ್ರವೆಂದೆನಿಸಿತು. ಭರತಭೂಮಿ ಪರಮಪಾವನವೆನಿಸಿತು. ನಮ್ಮ ದೇಶವನ್ನು ಹುಟ್ಟಿದ ಪ್ರದೇಶವನ್ನು ಸ್ತ್ರೀಗೆ ಹೋಲಿಸಿ,  ಭಾರತಮಾತೆ, ಜನ್ಮಭೂಮಿಯನ್ನು ಜನ್ಮದಾತೆಗೆ ಹೋಲಿಸುವಂತಹಾ  ಸಂಸ್ಕಾರದ ಗುಣ ನಮ್ಮ ಮಣ್ಣಿನಲ್ಲೇ ಇದೆ ಎಂದರೆ ತಪ್ಪಾಗಲಾರದು. ಪುರಾಣಗಳಿಂದ ನಾವು ತಿಳಿದುಕೊಳ್ಳಬೇಕಾದ ಮೊತ್ತೊಂದು ಮಹತ್ವದ ವಿಷಯವೇನೆಂದರೆ,

ಲಕ್ಷ್ಮೀದೇವಿಯನ್ನು ಗೌರವಿಸಿದರೆ ಶ್ರೀಮನ್ನಾರಾಯಣನು, ಸರಸ್ವತೀದೇವಿಯನ್ನು ಗೌರವಿಸಿದರೆ ಬ್ರಹ್ಮದೇವನು, ಪಾರ್ವತಿ ದೇವಿಯನ್ನು ಗೌರವಿಸಿದರೆ ಪರಶಿವನು ಯಾವ ರೀತಿ ಸಂತೋಷಿಸಿ ಹರಸುತ್ತಾರೆ. ಈ ವಿಷಯವನ್ನು ನೆನಪಿನಲ್ಲಿರಿಸಿಕೊಂಡು ಬನ್ನೀ, ಸಂಪನ್ಮಾತೆ, ವೇದಮಾತೆ, ಶಕ್ತಿಮಾತೆಯರಿಗೆ  ವಂದಿಸುತ್ತಾ ಇಂತಹಾ ಪವಿತ್ರವಾದ  ನೆಲದಲ್ಲಿ ಬೇರೂರಿರುವ ಸುಸಂಸ್ಕೃತಿಯನ್ನು ಮುಂದುವರೆಸಿ, ಎಷ್ಟೋ ಆಸೆ ಅಕಾಂಕ್ಷೆಗಳನ್ನು ತಮ್ಮ ಬದುಕಿನಲ್ಲಿ ಕಟ್ಟಿಕೊಂಡು ಸುಂದರವಾದ ಭವಿಷ್ಯದ ಕನಸು ಕಾಣುತ್ತಿರುವಂತಹಾ ಭಾರತ ಮಾತೆಯ ಮುದ್ದು ಹೆಣ್ಣು ಮಕ್ಕಳನ್ನು ಸಗೌರವದಿಂದ ನಡೆಸಿಕೊಂಡು ನಮ್ಮ ಸಂಸ್ಕೃತಿಯನ್ನು ಉನ್ನತ ಶಿಖರಕ್ಕೇರಿಸಿ, ಪ್ರಪಂಚದ ಇತರ ದೇಶಗಳಿಗೆ ಮಾದರಿಯಾಗೋಣ.

ಎಲ್ಲಾ ಮಹಿಳೆಯರಿಗೂ ಆ ಸಪ್ತಗಿರೀಶನ ಆಶೀರ್ವಾದ ಸದಾ ದೊರೆಯಲೆಂದು ಬಯಸುತ್ತಾ ಮತ್ತೊಮ್ಮೆ ಮಹಿಳಾದಿನಾಚರಣೆಯ ಶುಭಹಾರೈಕೆಗಳು.

ಗೋವಿಂದಾ ।ಗೋವಿಂದಾ॥ಗೋವಿಂದಾ॥।



# ಶ್ರೀರಾಮ ನಾಮದ ಶ್ರೇಷ್ಠತೆ

- ಕು॥ ಅಖಿಲ ಮಧು

6363164078

ರಾಮನ ಸುಮಧುರ ನಾಮವನ್ನು ಕೇಳಿದರೆ, ಆಲೋಚಿಸಿದರೆ ಅಥವಾ ಜಪಿಸಿದರೆ, ಅದು ಒಬ್ಬರ ಮನಸ್ಸು ಮತ್ತು ಹೃದಯವನ್ನು ರೋಮಾಂಚನಗೊಳಿಸುತ್ತದೆ. ಉದ್ದೇಶಪೂರ್ವಕವಾಗಿ ಅಥವಾ ಇಲ್ಲದಿದ್ದರೆ ಸಹ "ರಾಮ" ಎಂಬ ಎರಡು ಅಕ್ಷರಗಳ ಪದವನ್ನು ಪಠಿಸಿದರೆ, ಅದು ಒಬ್ಬರ ಮನಸ್ಸನ್ನು ಸಂತೋಷದಿಂದ ತುಂಬುತ್ತದೆ. ಈ ಮಧುರ ಮತ್ತು ಸಂಭ್ರಮದ ಪದವು ವಿಷ್ಣುವಿನ ಸಹಸ್ರನಾಮಕ್ಕೆ ಸಮಾನವಾಗಿದೆ.

ಶ್ರೀರಾಮ ರಾಮ ರಾಮೇತಿ
ರಮೇ ರಾಮೇ ಮನೋರಮೇ ।
ಸಹಸ್ರನಾಮ ತತ್ತುಲ್ಯಂ
ರಾಮನಾಮ ವರಾನನೇ ॥

ಶ್ರೀರಾಮ ನಾಮದ ದೈವಿಕ ಮಹಿಮೆ, ಮಂಗಳಕರತೆ, ಪ್ರಾಮುಖ್ಯತೆ, ಮಹತ್ವ ಮತ್ತು ಅರ್ಹತೆಗಳನ್ನು ಶಿವನು ತನ್ನ ಆತ್ಮೀಯ ಪತ್ನಿ ಪಾರ್ವತಿದೇವಿಗೆ ಉಪದೇಶಿಸುವ ಮೂಲಕ ಸ್ತುತಿಸಿದ್ದಾನೆ. (ಈ ಶ್ಲೋಕವು ಶ್ರೀ ವಿಷ್ಣುಸಹಸ್ರನಾಮದ ಫಲಶ್ರುತಿಯಲ್ಲಿ ಬರುತ್ತದೆ)

ಮೇಲಿನ ಶ್ಲೋಕದ ಅರ್ಥ."ಶ್ರೀರಾಮ ನಾಮಕ್ಕೆ ಮಾತ್ರ ವಿಷ್ಣುವಿನ ಸಹಸ್ರನಾಮ ಪಠಣಕ್ಕೆ ಸಮಾನವಾದ ಮಹತ್ವವನ್ನು ನೀಡಲಾಗಿದೆ."

ಶ್ರೀರಾಮ ನಾಮವನ್ನು ಪಠಿಸುವ ದೈವಿಕ ಪರಿಣಾಮವು ಘಾತೀಯ ಸಂಖ್ಯೆಯಲ್ಲಿ ಗುಣಿಸುತ್ತದೆ. ಶಿವ (ಶ್ರೀರುದ್ರ ದೇವರು) ಯಾವಾಗಲೂ ಭಗವಾನ್ ಶ್ರೀರಾಮನ 'ತಾರಕ ಮಂತ್ರ' (ಶ್ರೀರಾಮ)ವನ್ನು ಜಪಿಸುತ್ತಲೇ ಇರುತ್ತಾನೆ. ಅದು ಮರ್ಯಾದಾ ಪುರುಷೋತ್ತಮ ರಾಮನ ಸುಮಧುರ ನಾಮವನ್ನು ಕೇಳಿದರೆ, ಆಲೋಚಿಸಿದರೆ ಅಥವಾ ಜಪಿಸಿದರೆ ಅದು ಒಬ್ಬರ ಮನಸ್ಸು ಮತ್ತು ಹೃದಯವನ್ನು ರೋಮಾಂಚನಗೊಳಿಸುತ್ತದೆ. ಉದ್ದೇಶ ಪೂರ್ವಕವಾಗಿ ಅಥವಾ ಇಲ್ಲದಿದ್ದರೆ ಸಹ "ರಾಮ" ಎಂಬ ಎರಡು ಅಕ್ಷರಗಳ ಪದವನ್ನು ಪಠಿಸಿದರೆ ಅದು ಒಬ್ಬರ ಮನಸ್ಸನ್ನು ಸಂತೋಷದಿಂದ ತುಂಬುತ್ತದೆ. ಈ ಮಧುರ ಮತ್ತು ಸಂಭ್ರಮದ ಪದವು ವಿಷ್ಣುವಿನ ಸಹಸ್ರನಾಮಕ್ಕೆ ಸಮಾನವಾಗಿದೆ.


ರಾಮಾಯಾ ರಾಮಭದ್ರಾಯ ರಾಮಚಂದ್ರಾಯಾ ವೇದಸೇ
ರಘುನಾಥಾಯ ನಾಥಾಯ ಸೀತಾಪತಯೇ ನಮಃ

ರಾಮನ ಅವತಾರದ ಪುಣ್ಯ ದಿನವಾದ ಪವಿತ್ರ ಶ್ರೀರಾಮನವಮಿಯ ಸಂದರ್ಭದಲ್ಲಿ ನಾಮಸ್ಮರಣೆಯಿಂದ ನೀಡುವ ಆನಂದದ ಸಾಗರದಲ್ಲಿ ಮುಳುಗಲು ಪ್ರಯತ್ನಿಸುತ್ತೇವೆ. ರಾಮನ ಹೆಸರನ್ನು ಅದರ ಮಂಗಳಕರ ಗುಣಗಳಿಗಾಗಿ ಧ್ಯಾನಿಸುವುದು ನಮ್ಮ ನಾಡಿನಲ್ಲಿ ಪೂಜ್ಯ ಸಂಪ್ರದಾಯವಾಗಿದೆ."ಶ್ರೀರಾಮ ಜಯಂ" ಎಂದು ಬರೆಯುವುದರಿಂದ ನಮ್ಮ ಎಲ್ಲಾ ಪ್ರಯತ್ನಗಳಲ್ಲಿ ಜಯಸಿಗುತ್ತದೆ ಎಂದು ಹಿರಿಯರು

ತೀರ್ಪು ನೀಡಿದ್ದಾರೆ. ಮೇಲಿನ ಶ್ಲೋಕವು "ಶ್ರೀ ರಾಮ ಆಪದುದ್ಧಾರಕ ಸ್ತೋತ್ರಂ"ದ ಭಾಗವಾಗಿದೆ. ಇದನ್ನುಶ್ರೀವಿಷ್ಣುಸಹಸ್ರನಾಮದೊಂದಿಗೆ ಪಠಿಸಲಾಗುತ್ತದೆ. ಈ ಶ್ಲೋಕವು ರಾಮದೇವರು ವಾಸಿಸುತ್ತಿದ್ದ, ನಡೆದಾಡಿದ ಮತ್ತು ಈ ರಾಷ್ಟ್ರವನ್ನು ಆಳಿದ ವಿವಿಧ ಹೆಸರುಗಳನ್ನು ಒಟ್ಟು ಗೂಡಿಸುತ್ತದೆ. ನಾವು ಈ ದೈವಿಕ ನಾಮಗಳನ್ನು ಅರ್ಥಮಾಡಿಕೊಳ್ಳೋಣ ಮತ್ತು ಅವುಗಳ ಮಹತ್ವವನ್ನು ಪಾಲಿಸೋಣ.

**"ರಾಮಾಯಾ"**

ಸಂಸ್ಕೃತದಲ್ಲಿ"ರಾಮ" ಎಂಬ ಹೆಸರಿನ ಅರ್ಥ ಎಲ್ಲಾ ಹೃದಯಗಳನ್ನು ಮೋಡಿ ಮಾಡುವವನು-ರಮ್ಯೆತಿ ಇತಿ ರಾಮಃ! ಈ ಹೆಸರನ್ನು ಭಗವಂತನಿಗೆ ಹುಟ್ಟಿದಾಗ ದಶರಥ ರಾಜ ಮತ್ತು ಇಕ್ಷ್ವಾಕು ರಾಜವಂಶದ ರಾಜ ಋಷಿ ವಶಿಷ್ಟರಿಂದ ನೀಡಲಾಯಿತು. ಇಡೀ ಸೃಷ್ಟಿಯಲ್ಲಿನ ಪ್ರತಿಯೊಂದು ಚೈತನ್ಯ ಮತ್ತು ಪ್ರಮಾಣಿತವಲ್ಲದ ವಸ್ತುಗಳಿಗೆ ಹೆಸರು ಮತ್ತು ರೂಪವನ್ನು ನೀಡಿದ ಒಬ್ಬನನ್ನು ಹೆಸರಿ ಸುವ ಅದ್ಭುತ ಸವಲತ್ತು ಋಷಿಗೆ ಇತ್ತು.ತನ್ನ ತಂದೆ, ತಾಯಿ ಒಡಹುಟ್ಟಿದವರು ಮತ್ತು ಸಂಗಾತಿಗಳು,ಅರಣ್ಯವಾಸಿಗಳು, ಆಸ್ಥಾನಿಕರು ಮತ್ತು ಅಯೋಧ್ಯೆಯ ಪ್ರಜೆಗಳು - ಎಲ್ಲರನ್ನೂ ಮೋಡಿ ಮಾಡಿದ ಅಯೋಧ್ಯೆಯ ರಾಜಕುಮಾರನಿಗೆ ಈ ಹೆಸರು ಸಂಪೂರ್ಣವಾಗಿ ಸರಿಹೊಂದುತ್ತದೆ. ಅವನ ದೈವಿಕ ರೂಪ ಮತ್ತು ಸದ್ಗುಣಗಳು ವಾನರಕುಲ ಮತ್ತು ಶೂರ್ಪನಕ, ಮಂಡೋದರಿ ಮತ್ತು ವಿಭೀಷಣ ಸೇರಿದಂತೆ ಲಂಕಾ ರಾಕ್ಷಸರನ್ನು ಬೆರಗುಗೊಳಿಸಿದವು. ವಸಿಷ್ಠರ ಪ್ರಕಾರ."ರಾಮ" ಎಂಬ ಪದವು ಎರಡು ಬೀಜಗಳಿಂದ (ಬೀಜಾಕ್ಷರ), "ಅಗ್ನಿಬೀಜ" ಮತ್ತು "ಅಮೃತಬೀಜ" ಗಳಿಂದ ಮಾಡಲ್ಪಟ್ಟಿದೆ. ಈ ಅಕ್ಷರಗಳು ಮನಸ್ಸು, ದೇಹ ಮತ್ತು ಆತ್ಮಕ್ಕೆಶಕ್ತಿಯನ್ನು ನೀಡುತ್ತವೆ. ರಾಮನ ನಾಮವನ್ನು ಮೂರು ಬಾರಿ ಜಪಿಸುವುದರಿಂದ ಸಾವಿರ ದೇವತೆಗಳ ನಾಮಸ್ಮರಣೆಗೆ ಸಮಾನವಾದ ಅನುಗ್ರಹ ದೊರೆಯುತ್ತದೆ ಎಂದು ಶಿವನು ಒಮ್ಮೆ ಹೇಳಿದ್ದಾಗಿ ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ಶಿವನು ಧ್ಯಾನದಲ್ಲಿ ರಾಮನ ನಾಮವನ್ನು ಜಪಿಸುತ್ತಾನೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ.




**"ರಾಮಭದ್ರಾಯ"**

ರಾಕ್ಷಸರಿಂದ ಪದೇ ಪದೇ ಅಪವಿತ್ರಗೊಂಡಿದ್ದ ತನ್ನ ತ್ಯಾಗವನ್ನು ರಕ್ಷಿಸಲು ಮಹರ್ಷಿ ವಿಶ್ವಾಮಿತ್ರರು ರಾಮ ಮತ್ತು ಲಕ್ಷ್ಮಣರನ್ನು ಕಾಡಿಗೆ ಕರೆದೊಯ್ದರು. ವಿದುಕ್ತ ಯಾಗವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅವರು ಸೀತಾ ಸ್ವಯಂವರಕ್ಕೆ ಅವರನ್ನು ಮಿಥಿಲೆಗೆ ಕರೆದೊಯ್ದರು. ಅಯೋಧ್ಯೆಯ ರಾಜಕುಮಾರನು ಶಿವನ ಧನಸ್ಸನ್ನು ಮುರಿದಾಗ, ರಾಜ ಜನಕನು ತನ್ನ ದಿವ್ಯ ಮಗಳನ್ನುಶ್ರೀರಾಮನಿಗೆ ಮದುವೆ ಮಾಡಿ ಕೊಟ್ಟನು.ಭಾವೋದ್ವೇಗಕ್ಕೆ ಒಳಗಾದ ಅವರು ಭದ್ರತೆಯನ್ನು ಆಶೀರ್ವದಿಸಲು ಮತ್ತು ಎಲ್ಲಾ ದುಷ್ಟ ಕಣ್ಣುಗಳನ್ನು ದೂರವಿಡಲು, ಸೀತೆಯೊಂದಿಗೆ ರಾಮನ ಒಕ್ಕೂಟವನ್ನು ಆಶೀರ್ವದಿಸಿದರು. ಶ್ರೀಮಹಾಲಕ್ಷ್ಮಿದೇವಿಯು ಪ್ರತಿ ಅವತಾರದಲ್ಲಿ ಅವತರಿಸುತ್ತಾಳೆ ಮತ್ತು ವಿಷ್ಣುವಿನಿಂದ ಬೇರ್ಪಡಿಸಲಾಗದವಳು.ಅವಳು ಎಲ್ಲರಿಗೂ ಮಂಗಳಕರವಾದ ನಿವಾಸ ಮತ್ತು ಭದ್ರಾಯಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಾಳೆ. ಸೀತೆಯೊಂದಿಗಿನ ತನ್ನ ಬಂಧದಲ್ಲಿರುವ ರಾಮನನ್ನು ರಾಮಭದ್ರ ಎಂದು ಶ್ಲಾಘಿಸಲಾಗುತ್ತದೆ.

**"ರಾಮಚಂದ್ರಾಯಾ"**

ಮೊದಲೇ ಹೇಳಿದಂತೆ, ರಾಮನ ದರ್ಶನವು ಹೃದಯದಲ್ಲಿ ಸಂತೋಷವನ್ನು ತಂದಿತು ಮತ್ತು ರಾತ್ರಿಯ ಆಕಾಶದಲ್ಲಿ ಪೂರ್ಣಚಂದ್ರನ ದರ್ಶನದಂತೆ ಎಲ್ಲರ ಕಣ್ಣುಗಳನ್ನು ತುಂಬಿತು.ಚಂದ್ರನು ಸೃಷ್ಟಿಕರ್ತನ ಮನಸ್ಸಿನಿಂದ ಹುಟ್ಟುತ್ತಾನೆ ಎಂದು ವೇದಗಳು ಹೇಳುತ್ತವೆ. ಚಂದ್ರನು ಅತ್ಯಂತ ಮೆಚ್ಚುಗೆ ಪಡೆದ ಆಕಾಶ ವಸ್ತುವಾಗಿದ್ದು ಅದು ಕತ್ತಲೆಯಾದ ಆಕಾಶವನ್ನು ಬೆಳಗಿಸುತ್ತದೆ ಮತ್ತು ದಿನದ ತೀವ್ರವಾದ ಶಾಖದಿಂದ ಪರಿಹಾರವನ್ನು ತರುತ್ತದೆ. ಇದು ಪ್ರಾಚೀನ ಕಾಲದಿಂದಲೂ ಆಕರ್ಷಕ ಕಲಾವಿದರು ಮತ್ತು ಕವಿಗಳನ್ನು ಹೊಂದಿದೆ. ರಾಮನ ದರ್ಶನವೂ ಎಲ್ಲರ ಮೇಲೂ ಅದೇ ಪರಿಣಾಮ ಬೀರಿತು. ಸೌರವಂಶದ ಸಿಂಹನಾಗಿ ಜನಿಸಿದ ರಾಮನನ್ನು ರಾಮಚಂದ್ರ ಎಂದು ಸಂಬೋಧಿಸಿರುವುದು ಕುತೂಹಲಕಾರಿಯಾಗಿದೆ. ಆದರೆ ನಾವು ಕೃಷ್ಣನನ್ನು ಕೃಷ್ಣ ಚಂದ್ರ ಅಥವಾ ಕೃಷ್ಣಭದ್ರ ಎಂದು ಕರೆಯುವುದು ಅಪರೂಪ. ರಾಜ ದಶರಥನ ಕುಟುಂಬದಲ್ಲಿ ದೀರ್ಘಕಾಯುವಿಕೆಯ ನಂತರ ರಾಮನು ಮೊದಲ ಮಗು, ಆದ್ದರಿಂದ

ಅವನು ರಾಜನ ಹೃದಯಕ್ಕೆ ತುಂಬಾ ಪ್ರಿಯನಾಗಿದ್ದನು ಮತ್ತು ಅವನನ್ನು ಸಂಸ್ಕೃತದಲ್ಲಿ "ಚಂದ್ರ" ಎಂದು ಕರೆಯಲಾಯಿತು. ರಾಮನು "ಚೈತ್ರ" ತಿಂಗಳಲ್ಲಿ ಜನಿಸಿದನು,ಇದು ಭಾರತೀಯ ತಿಂಗಳ ಚೈತ್ರದ ಪ್ರಕಾಶಮಾನವಾದ ಅರ್ಧದ ಒಂಬತ್ತನೇ ದಿನವಾಗಿದೆ. ಹುಟ್ಟಿನಿಂದಲೇ ಅವರ ಮುಖವು ಪೂರ್ಣಿಮೆಯ (ಹುಣ್ಣಿಮೆಯ ದಿನ ಚಂದ್ರ ನಂತೆ ಹೊಳೆಯುತ್ತಿತ್ತು. ಕೇವಲ ಮಗುವಾಗಿದ್ದಾಗ, ಅವನು ಚಂದ್ರನನ್ನು (ಕುಂಡದಲ್ಲಿ ಅದರ ಚಿತ್ರ ದಿಂದ) ಸೆರೆ ಹಿಡಿದನು ಮತ್ತು ಆದ್ದರಿಂದ ರಾಮ+ಚಂದ್ರ = ರಾಮಚಂದ್ರ ಎಂದು ಹೆಸರಿಸ ಲಾಯಿತು.




**"ವೇದಸೇ"**

ಇದರ ಅರ್ಥ ವೇದಗಳ ವಸ್ತುವಿನ ಮೂರ್ತ ರೂಪ ಅಥವಾ ವೇದಗಳಿಂದ ಹೊಗಳ ಲ್ಪಟ್ಟವನು.ರಾಮನು ಪರಮಾತ್ಮನ ಅವತಾರವಾಗಿದ್ದು, ಎಲ್ಲಾ ವೇದಗಳಿಂದ ಸ್ತುತಿಸಲ್ಪ ಟಿದ್ದಾನೆ ಮತ್ತು ಅವ ನನ್ನು ಗುರುತಿಸಿದ ಋಷಿಗಳು ಅವನನ್ನು 'ವೇದ, ಸರ್ವಶಕ್ತನ ಅವತಾರ! ಉಳಿದವರೆಲ್ಲರೂ ಅವನನ್ನು ಪೂಜಿಸಿದರು ಆದರೆ ಒಬ್ಬ ಮಗ, ಪ್ರೀತಿಯ ಸಹೋದರ, ಉದಾತ್ತ ರಾಜಕುಮಾರ ಮತ್ತು ನಂತರ ಅಯೋಧ್ಯೆಯ ರಾಜ. ಆದರೆ ತಪಸ್ಸಿನ ಜೀವನವನ್ನು ನಡೆಸುವ ಮತ್ತು ದೈವಿಕ ಚಿಂತನೆಯಲ್ಲಿ ಬೇರೂರಿರುವ ಋಷಿಗಳು ಅವರನ್ನು ವೇದಾಭವೆಂದು ನೋಡ ಬಹುದು. ರಾಮನನ್ನು ಕೇಳಲು ರಾಜ ದಶರಥನ ಆಸ್ಥಾನಕ್ಕೆ ಬಂದ ಋಷಿ ವಿಶ್ವಾಮಿತ್ರನಿಗೆ ಇದು ತಿಳಿದಿತ್ತು, ರಾಜನು ಋಷಿಯ ಕೋರಿಕೆಯಿಂದ ಆಘಾತಕ್ಕೊಳಗಾದನು ಮತ್ತು ರಾಕ್ಷಸ ರೊಂದಿಗೆ ಹೋರಾಡಲು ತನ್ನ ಮಗ ತುಂಬಾ ಚಿಕ್ಕವನೆಂದು ಸೂಚಿಸಿದನು. ಈ ಹಂತದಲ್ಲಿ ವಿಶ್ವಾ ಮಿತ್ರನು ತನ್ನ ಮಗ ಸರ್ವಶಕ್ತ ಎಂದು ರಾಜನಿಗೆ ಘೋಷಿಸಿದನು ಮತ್ತು ಇದನ್ನು ಅವನ ಮತ್ತು ವಶಿಷ್ಠರಂತಹ ದರ್ಶನಗಳಿಂದ ಮಾತ್ರ ನೋಡ ಬಹುದು. ಅವನು ಜೀವ ಲೋಕದ ರಕ್ಷಕ ಮತ್ತು ಧರ್ಮದ ರಕ್ಷಕ. ಅವರು ವೇದ ಮತ್ತು ವೇದಾಂಗಗಳ ಬಗ್ಗೆ ಸತ್ಯವನ್ನು ತಿಳಿಸಿದ್ದಾರೆ ಮತ್ತು ಧನುರ್ವೇದದಲ್ಲಿ ಪರಿಣತರಾಗಿದ್ದಾರೆ. ಎಲ್ಲಾ ಧರ್ಮ ಗ್ರಂಥಗಳ ಸತ್ಯವನ್ನು ಅವರು ತಿಳಿದಿದ್ದಾರೆ. ಹಿರಿಯನಾದ ರಾಮನು ಮನದಂತಿ ದ್ದನು ಮತ್ತು ತಂದೆಗೆ ಬಹಳ ಸಂತೋಷ ವನ್ನು ತಂದನು. ಅವರು ಪೂಜ್ಯ ಸ್ವಯಂಭೂ ಆಗಿ ಎಲ್ಲಾ ಜೀವಿಗಳಿಗೆ ಕಾಣಿಸಿಕೊಂಡರು. ಅವರಿಗೆ ವೇದಗಳ ಬಗ್ಗೆ ಚೆನ್ನಾಗಿ ಗೊತ್ತಿತ್ತು, ಅವನಿಗೆ ಬ್ರಹ್ಮಾಸ್ತ್ರದ ಬಗ್ಗೆ ತಿಳಿದಿದೆ. ವೇದಭ್ಯಾಸ ವನ್ನು ತಿಳಿದವರಲ್ಲಿ ಅವನು ಶ್ರೇಷ್ಠ.ಅವರಿಗೆ ಯಜುರ್ವೇ ದದ ಬಗ್ಗೆ ತಿಳಿದಿದೆ. ಅವನು ವಿನಯವಂತ. ಅವನಿಗೆ ವೇದಗಳ ಸಂಸ್ಕಾರ ಗೊತ್ತಿದೆ. ಅವನನ್ನು ಬಹಳ ವಾಗಿ ಪೂಜಿಸಲಾಗುತ್ತದೆ. ಅವರು ಧನುರ್ವೇದ,ವೇದ ಮತ್ತು ವೇದಾಂಗಗಳ ಬಗ್ಗೆ ಜ್ಞಾನವನ್ನು ಹೊಂದಿದ್ದಾರೆ.

**"ರಘುನಾಥಾಯ"**

ಅವನ ನಾಡಿನ ಆಸ್ಥಾನಿಕರು ಮತ್ತು ಪ್ರಜೆಗಳು ಅವನನ್ನು ಅಭಿಮಾನದಿಂದ ಸಂಭೋಧಿಸುತ್ತಿದ್ದ ಹೆಸರು ಇದು. ಪ್ರಸಿದ್ಧ ಚಕ್ರವರ್ತಿಗಳಿಂದ ಅಲಂಕರಿಸಲ್ಪಟ್ಟ ರಘುವಂಶದ ವೈಭವವನ್ನು ಈ ಹೆಸರು ಸೂಚಿಸುತ್ತದೆ. ಆದರೆ ನಕ್ಷತ್ರಗಳ ಸಮೂಹವನ್ನು ವಶಪಡಿಸಿಕೊಳ್ಳುವಲ್ಲಿ ರಾಮ ಯಶಸ್ವಿಯಾದ. ವಾಸ್ತವವಾಗಿ "ರಾಮ ರಾಜ್ಯ" ಉತ್ತಮ ಆಡಳಿತದ ಉದಾಹರಣೆ ಯಾಗಿದೆ ಮತ್ತು ಇಂದಿಗೂ ಉಳಿದಿದೆ. ಆದ್ದರಿಂದ ರಾಮನನ್ನು ಸರಿಯಾಗಿ ರಘುನಾಥ ಎಂದು ಕರೆಯಲಾಯಿತು.ಖಟ್ವಾಂಗನ ಮಗ ದುರ್ಗಾಬಾಹು ಅವನ ಮಗ ರಘು-ಅವನ ಮಗ ಅಜ - ಅವನ ಮಗ ದಶರಥ. ದಶರಥನಿಗೆ ರಾಮ, ಲಕ್ಷ್ಮಣ, ಭರತ ಮತ್ತು ಶತೃಘ್ನ ನಾಲ್ಕು ಮಕ್ಕಳಂತೆ. ರಾಮನು ಬಾಲಕನಾಗಿದ್ದಾಗಲೇ ವಿಶ್ವಾ ಮಿತ್ರನ ಯಜ್ಞವನ್ನು ರಕ್ಷಿಸಲು ಜೊತೆಗೂಡಿ ತಡಕನನ್ನು

ಕೊಂದನು. ಅಂದ ಹಾಗೆ, ರಘುರಾಮನ ಮುತ್ತಜ್ಜ ರಘು ಎಂಬ ಹೆಸರು ಅವನ ರಥ ಸವಾರಿ ಪರಾಕ್ರಮದಿಂದ ಪಡೆದ ವೇಗವುಳ್ಳವನು ಎಂದರ್ಥ. ಅವರ ಕಾಲದಲ್ಲಿ ಮಹಾನ್ ವೀರ ವ್ಯಕ್ತಿತ್ವವಿತ್ತು.ಆದ್ದರಿಂದ ಶ್ರೀರಾಮನು ಅವನಿಂದ ತನ್ನ ಪೋಷಕತ್ವವನ್ನು ಪಡೆದನು. ಆದ್ದರಿಂದ, ರಘುನಾಥ ಎಂದರೆ ರಘುಗಳ ಅಧಿಪತಿ ಎಂದರ್ಥ. ರಘು ಎಂದರೆ ವಂಶದ ಅಧಿಪತಿ ಎಂದರ್ಥ. ಅವನು ಬ್ರಹ್ಮಾಂಡದ ಪ್ರಭುವಾಗಿರುವುದರಿಂದ, ಅವನು ಇಡೀ ಸೃಷ್ಟಿಯನ್ನು ಬೆಂಬಲಿಸುತ್ತಾನೆ. ಇಡೀ ವಿಶ್ವವು ಅವನ ಸಾಕಾರವಾಗಿದೆ.

''ಇಡೀ ಬ್ರಹ್ಮಾಂಡವು ನಿಮ್ಮ ದೇಹವಾಗಿದೆ. ಭೂಮಿಯು ನಿಮ್ಮ ದೃಢತೆಯನ್ನು ರೂಪಿಸುತ್ತದೆ. ಬೆಂಕಿಯು ನಿಮ್ಮ ಕೋಪವಾಗಿದೆ, ಚಂದ್ರನು ನಿಮ್ಮ ಶಾಂತತೆಯನ್ನು ರೂಪಿಸುತ್ತದೆ.ನೀವು ಮಹಾವಿಷ್ಣು (ಶ್ರೀವತ್ಸ) ಎಂದು ಗುರುತಿಸಲಾಗಿದೆ.

**"ನಾಥಾಯ"**

ನಾಥಾಯ ಎಂದರೆ ನನ್ನ/ನಮ್ಮ ಪ್ರಭು. ರಾಜ ರಾಮನನ್ನು ಎಲ್ಲರೂ ಸಂಬೋಧಿಸಬಹುದಾದರೂ, ಈ ಹೆಸರನ್ನು ಅವನ ದೈವಿಕ ಪತ್ನಿಯಾದ ಸೀತಾದೇವಿಯು ಪ್ರೀತಿಯಿಂದ ಬಳಸಿಕೊಂಡಂತೆ ದೃಶ್ಯೀಕರಿಸುವುದು ಹೆಚ್ಚು ಸೂಕ್ತವಾಗಿದೆ.

**"ಸೀತಾಪತಯೇ ನಮಃ"**

ಶ್ರೀವೈಷ್ಣವ ಸಿದ್ಧಾಂತದಲ್ಲಿ ಸರ್ವಶಕ್ತನು ಯಾವಾಗಲೂ ತನ್ನ ದೈವಿಕ ಸಂಗಾತಿಯ ಮೂಲಕ ಶ್ರೀಮನ್ನಾರಾಯಣ ಎಂದು ಧ್ಯಾನಿಸುತ್ತಾನೆ. ಎಲ್ಲಾ ಅವತಾರಗಳಲ್ಲಿ ಅವನಿಂದ ಬೇರ್ಪಡಿಸಲಾಗದ ದೇವತೆ ಸೂಕ್ತವಾದ ಪಾತ್ರದಲ್ಲಿ ಇಳಿಯುತ್ತಾನೆ. ಅವಳು ರತ್ನದ ತೇಜಸ್ಸು, ಹೂವಿನ ಪರಿಮಳ ಮತ್ತು ಯಾವಾಗಲೂ ಅವನೊಂದಿಗೆ ಇರುತ್ತಾಳೆ. ಮಿಥಿಲೆಯ ಪ್ರಜೆಗಳು ಯಾವಾಗಲೂ ರಾಮನನ್ನು ತಮ್ಮ ಅಳಿಯ ಎಂದು ಸ್ಮರಿಸುತ್ತಿದ್ದರು ಮತ್ತು 'ಸೀತಾಪತಿ ಶ್ರೀರಾಮ' ನೊಂದಿಗಿನ ತನ್ನ ರಾಜಕುಮಾರಿಯ ಸಂಬಂಧದ ಮೂಲಕ ಅವನನ್ನು ಸಂಬೋಧಿಸುತ್ತಿದ್ದರು.

ರಾಮನ ಪರಮ ಭಕ್ತನಾದ ಹನುಮಂತನು ಯಾವಾಗಲೂ ಅವನನ್ನು ಈ ಹೆಸರಿನಿಂದ ಸಂಬೋಧಿಸುತ್ತಿದ್ದನು. ದೇವಿಯ ಸೌಮ್ಯವಾದ ಅನುಗ್ರಹವು ತಕ್ಷಣವೇ ಅವನು ಹನುಮಂತನು ಪರಮಾತ್ಮನ ಸೇವಕನೆಂಬ ಅರಿವನ್ನು ತಂದಿತು.

ಯತ್ರಯತ್ರ ರಘುನಾಥ ಕೀರ್ತನಂ
ತತ್ರತತ್ರ ಕೃತಮಸ್ತ ಕಾಂಜಲಿಮ್
ಭಾಷ್ಪವಾರಿ ಪರಿಪೂರ್ಣ ಲೋಚನಂ
ಮಾರುತಿಂ ನಮತ ರಾಕ್ಷಸಾಂತಕಮ್॥

ಹನುಮಂತನ ಮೇಲಿನ ಶ್ಲೋಕವು ಹೀಗೆ ಹೇಳುತ್ತದೆ. "ಎಲ್ಲೆಲ್ಲಿ ಶ್ರೀರಾಮ ನಾಮವನ್ನು ಶುದ್ಧ ಭಕ್ತಿಯಿಂದ ಹಾಡಲಾಗುತ್ತದೆಯೋ,ಎಲ್ಲಿ ಶ್ರೀರಾಮನನ್ನು ಶುದ್ಧ ಪ್ರೀತಿಯಿಂದ ಪೂಜಿಸಲಾಗುತ್ತದೆಯೋ,ಎಲ್ಲಿ ಶ್ರೀರಾಮನ ಗುಣಗಾನವನ್ನು ಮಾಡಲಾಗುತ್ತದೋ,ಅಲ್ಲಿ ಅವನು (ಹನುಮ) ತನ್ನ ಶ್ರೀರಾಮನ ಬಗ್ಗೆ ಅಪ್ರತಿಮ ಭಕ್ತಿಯಿಂದ ಸ್ತುತಿಸುತ್ತಾನೆ."


## STATEMENT ABOUT OWNERSHIP AND OTHER PARTICULARS ABOUT

**SAPTHAGIRI**

**(MONTHLY)**

**FORM IV**

*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Printer's Name | : | Sri P. Ramaraju, M.A. |
| Whether citizen of India | : | Yes |
| Address | : | S.O.,T.T.D.Press Compound, K.T.Road, Tirupati. |
| 4. Publisher's Name | : | **Dr. K. Radha Ramana**, M.A.,M.Phil., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 5. Editor's Name | : | **Dr. V.G.Chokkalingam**, M.A., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Tirumala Tirupati Devasthanams |

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 28-2-2023

**(Sd.) Dr. K. Radha Ramana**
*Signature of the Publisher*



# ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ

ವಿ. ನಾಗೇಂದ್ರ ಪ್ರಸಾದ್

98454 00816

ಹಿಂದಿನ ಸಂಚಿಕೆಯಿಂದ

### ದೇವ

ದೇವ ಶಬ್ದಕ್ಕೆ ಕ್ರೀಡೆ,ಆನಂದ,ವಿಜಿಗೀಷ, ಮೋದ ಮುಂತಾದ ಅರ್ಥಗಳಿವೆ. (ದಿವು ಕ್ರೀಡಾಯಾಂ ಎಂಬ ಧಾತು). ದಿವು ಶಬ್ದಕ್ಕೆ ಕ್ರೀಡೆ ಎಂಬರ್ಥ ಇಟ್ಟುಕೊಂಡರೆ ಪರಮಾತ್ಮನ ಎಲ್ಲ ವ್ಯಾಪಾರಗಳೂ ಒಂದು ಆಟ (ಓಂ ಲೋಕವತ್ತು ಲೀಲಾಕೈವಲ್ಯಮ್ ಓಂ - ಬ್ರಹ್ಮಸೂತ್ರ 2/1/34). ಈ ದೇಹದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳೂ ಪರಮಾತ್ಮನೇ ನಡೆಸುವುದು ಎಂಬುದನ್ನು "ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ।ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ " (15/9) ರಲ್ಲಿ ತಿಳಿಸಿದೆ. ಕಿವಿ, ಕಣ್ಣು, ಚರ್ಮ,ನಾಲಿಗೆ ಮತ್ತು ಮೂಗುಗಳಲ್ಲಿಯೂ ಹಾಗೂ ಮನಸ್ಸಿನಲ್ಲಿಯೂ ನೆಲೆಸಿ ಈ ಭಗವಂತನು ವಿಷಯಗಳನ್ನು ಸವಿಯುವನು. ಜೀವನ ಒಳಗೆ ಪರಮಾತ್ಮನಿದ್ದು ಸರ್ವ ಕರ್ಮ ಫಲಗಳ ಸಾರವನ್ನು ಭೋಗಿಸುತ್ತಾನೆ ಎಂಬುದನ್ನು "ಉಪದೃಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ಪರಮಾತ್ಮೇತಿ ಚಾಪ್ಯುಕ್ತೋದೇಹೇಽಸ್ಮಿನ್ಪುರುಷಃ ಪರಃ (13/23) ರಲ್ಲಿ ತಿಳಿಸಿದೆ. ಈ ದೇಹದಲ್ಲಿ ಜೀವನೊಂದಿಗೆ ಪರಮ ಚೇತನನಾದ ಭಗವಂತನು ನೆಲೆಸಿರುವವನು.ಅವನು ತನ್ನ ಇಚ್ಛಾನುಸಾರವಾಗಿ ಸಕಲಜೀವರನ್ನು ಅವರ ಯೋಗ್ಯತೆಗೆ ತಕ್ಕಂತೆ ಪ್ರೇರೇಪಿಸುವವನು. ಎಲ್ಲರನ್ನೂ ಪೊರೆಯುವವನು ಸರ್ವ ಕರ್ಮಫಲಗಳ ಸಾರಭೋಕ್ತೃವೂ ಮಹಾ ಶಕ್ತಿಶಾಲಿಯಾಗಿಯೂ ಆಗಿರುವನು.ಈ ಶ್ಲೋಕದ ಸ್ವಾರಸ್ಯವನ್ನು ಶ್ರೀಮಧ್ವಾಚಾರ್ಯರು ತಾತ್ಪರ್ಯದಲ್ಲಿ ತೋರಿಸುತ್ತಾರೆ. ಉಪದೃಷ್ಟಾ ಎಂಬಲ್ಲಿ ಉಪ ಎಂದರೆ ಸಮೀಪವಲ್ಲ ಕಿಂತು ಮೇಲೆ ಎಂದು ಅರ್ಥ, ಅರ್ಥಾತ್ ಸ್ವತಂತ್ರ ಎಂದರ್ಥ ಅನುಮಂತಾ ಎಂಬಲ್ಲಿ ಸ್ವಾತಂತ್ರ್ಯದಿಂದ ಲೀಲೆಯಿಂದ ಬುದ್ಧಿ ಪೂರ್ವಕವಾಗಿ ಪ್ರೇರೇಪಿಸುವವನು ಎಂದರ್ಥ. ಪರಮಾತ್ಮ ಅತ್ಯಂತ ಶಕ್ತಿಶಾಲಿಯಾದ್ದರಿಂದ ಮಹೇಶ್ವರ ಎಂದರ್ಥ. ಹಾಗಾಗಿ ಪರಮಾತ್ಮ ಎಲ್ಲರಲ್ಲಿದ್ದು ನಿಯಾಮಕನಾಗಿ ಭಿನ್ನನಾಗೇ ಇರುತ್ತಾನೆ.

### ಧೀಮಹಿ

ಧ್ಯೈಚಿಂತಾಯಾಮ್ ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ ಧೀಮಹಿ. ಧೀಮಹಿ ಎಂದರೆ ನಾವು ನಿರಂತರ ಭಗವಂತನ ರೂಪವನ್ನು ಚಿಂತಿಸುತ್ತೇವೆ ಅಂದರೆ ನಿರಂತರ ಧ್ಯಾನ ಮಾಡುತ್ತೇವೆ ಎಂದು ಅರ್ಥ. ಈ ಶಬ್ದದ ಸ್ವಾರಸ್ಯವೇನೆಂದರೆ ಅಷ್ಟಾಂಗ ಯೋಗಗಳಲ್ಲಿ ಕೊನೆಯದಾದ ಧ್ಯಾನವೇ ಮೋಕ್ಷಕ್ಕೆ ಸಾಧನವಾದ್ದರಿಂದ, ಧ್ಯಾನ ಮಾಡುವುದು ನಮ್ಮ ಕರ್ತವ್ಯ ಎಂದು ಸೂಚಿಸುತ್ತದೆ. "ಶ್ರೇಯೋ ಹಿ ಜ್ಞಾನಮಭ್ಯಾಸಾತ್ ಜ್ಞಾನಾದ್ಧ್ಯಾನಂ ವಿಶಿಷ್ಯತೇ। ಧ್ಯಾನಾತ್ ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್॥"(12/12) ಅಭ್ಯಾಸಕ್ಕಿಂತ ಜ್ಞಾನ ಮಿಗಿಲು, ಜ್ಞಾನಕ್ಕಿಂತ ಧ್ಯಾನ ಮಿಗಿಲು,ಧ್ಯಾನಕ್ಕಿಂತ ಕರ್ಮಫಲ ತ್ಯಾಗ ರೂಪವಾದ ನಿಷ್ಕಾಮಧ್ಯಾನವೇ ಶ್ರೇಷ್ಠ. ಅಂತಹ ಕರ್ಮಫಲತ್ಯಾಗ ರೂಪವಾದ ನಿಷ್ಕಾಮಧ್ಯಾನದಿಂದಲೇ ಮೋಕ್ಷ.

### ಧಿಯೋ ಯೋನಃ ಪ್ರಚೋದಯಾತ್

ಧೀ ಎಂದರೆ ಬುದ್ಧಿ, ಬುದ್ಧಿ ಜ್ಞಾನ ಎರಡೂ ಪರ್ಯಾಯ ಪದಗಳು, ಮನಸ್ಸಿಗೆ ಐದು ಪ್ರಭೇದಗಳು ಮನಸ್ಸು, ಬುದ್ಧಿ, ಚಿತ್ತ,ಚೇತಾ



ಹಾಗೂ ಅಹಂಕಾರ, ಜ್ಞಾನ ಮನಸ್ಸಿನಿಂದ ಬಂದರೂ ಯಾವುದು ಕಾರ್ಯಗತ ಗೊಳಿಸಬೇಕು ಎಂಬುದನ್ನು ನಿರ್ಧರಿಸುವುದು ಬುದ್ಧಿ (ಬುದ್ಧಿಂತು ಸಾರಥಿ) ಗಾಯಿತ್ರಿ ಮಂತ್ರದಲ್ಲಿ ಧಿಯಃ ಎಂಬ ಬಹುವಚನ ಪ್ರಯೋಗವಿದೆ ಅಂದರೆ ಬುದ್ಧಿ ಮೊದಲಾದ ಹನ್ನೊಂದು ಇಂದ್ರಿಯಗಳ ಪ್ರೇರಕ (ಋಷಿಕೇಶ) ಎಂದು ಅರ್ಥವಿಟ್ಟು ಕೊಳ್ಳಬೇಕು. ಇಂದ್ರಿಯಗಳ ಪ್ರೇರಕ ಎಂಬ ವಿವಕ್ಷೆ ಮಾಡಿ ದಾಗ "ಮನಃ ಷಷ್ಠಾನೀಂದ್ರಿಯಾಣಿ ಪ್ರಕೃತಿ ಸ್ಥಾನಿ ಕರ್ಷತಿ"(15/7) ನಮ್ಮ ದೇಹಗಳಲ್ಲಿರುವ ಇಂದ್ರಿಯ ಗಳೆಲ್ಲವೂ ಭಗವಧೀನ.ನಮ್ಮ ಕರ್ಮಾನುಸಾರವಾಗಿ ನಮ್ಮಿಂದ ಒಳ್ಳೆ ಹಾಗೂ ಕೆಟ್ಟ ಕರ್ಮಗಳನ್ನು ಇಂದ್ರಿಯ ಗಳಿಂದ ಮಾಡಿಸುತ್ತಾನೆ. ನಃ ಶಬ್ದ ಬಹು ವಚನವಾದರೂ ಗೀತೆಯಲ್ಲಿ ಬರುವ ಅರ್ಜುನನ ಸಂಶಯಗಳು ನಮ್ಮ ಸಂಶಯಗಳೇ ಹಾಗಾಗಿ ಚೋದನ ಎಂದರೆ ಪ್ರೇರಣ. ಪ್ರ ಉಪಸರ್ಗ ಸೇರಿದರೆ ಪ್ರಚೋದನೆ ಅಂದರೆ ಚೆನ್ನಾಗಿ ನಮ್ಮನ್ನು ಪ್ರೇರೇಪಿಸುವುದು.ಅರ್ಜುನನ ಕೊನೆಯ ವಾಕ್ಯಗಳು ಕೇಳಿದರೆ ನಮಗೆ ಪ್ರಚೋದಯಾತ್ ಪದ ಅರ್ಥವಾಗುತ್ತದೆ."ನಷ್ಟೋಮೋಹಃ ಸ್ಮೃತಿ ರ್ಲಬ್ಧಾ ತ್ವತ್ಪ್ರಸಾದಾನ್ಮಯಾಽಚ್ಯುತ ಸ್ಥಿತೋಽಸ್ಮಿಗತ ಸಂದೇಹಃ ಕರಿಷ್ಯೇ ವಚನಂ ತವ" (18/73) ಇಲ್ಲಿ ಕರಿಷ್ಯೇ ವಚನಂ ತವ ಎಂಬ ವಾಕ್ಯ ಗಮನಿಸಬೇಕು.ಮೊದಲು ವಿಹಿತ ಕರ್ಮ ವಾದ ಯುದ್ಧವನ್ನು ಮಾಡುವುದಿಲ್ಲ ಎಂದ ಪರಾಙ್ಮುಖನಾಗಿ ನಂತರ ಕೃಷ್ಣನ ಉಪದೇಶದಿಂದ ಪ್ರೇರಿತನಾಗಿ ನಿನ್ನ ಮಾತು ಕೇಳುತ್ತೇನೆ ಅಷ್ಟೆ ಅಲ್ಲ ನಾನು ಯುದ್ಧ ಮಾಡುತ್ತೇನೆ ಎಂದು ವಚನ ನೀಡುತ್ತೇನೆ.ಇದು ಅರ್ಜುನ ನಲ್ಲಿ ಆದಂತಹ ಮಾನಸಿಕ ಬದಲಾವಣೆ.

ಗಾಯಿತ್ರಿಮಂತ್ರ ಹಾಗೂ ಭಗವದ್ಗೀತೆಯ ಸಮನ್ವಯ ಸಂದೇಶವೇನು?

ಗಾಯಿತ್ರಿಮಂತ್ರಪ್ರತಿಪಾದ್ಯನಾದ ನಾರಾಯಣನನ್ನು ನಿರ್ಮಲವಾದ ಬುದ್ಧಿಯಿಂದ ಕೂಡಿದವನಾಗಿ ಧೈರ್ಯದಿಂದ ಮನಸ್ಸನ್ನು ನಿಯಂತ್ರಿಸಿ ವಿಷಯವೈರಾಗ್ಯ ಸಂಪಾದಿಸಿ ಸಕಲಗುಣಪರಿಪೂರ್ಣ,ಸರ್ವತಂತ್ರಸ್ವತಂತ್ರ ಮುಂತಾದ ಗುಣಗಳಿಂದ ಕೂಡಿದ ನಮ್ಮ ಬಿಂಬೋಪಾಸನೆಯನ್ನು ಯೋಗ್ಯತಾನುಸಾರವಾಗಿ ಈ ಸಾಧನಾಶರೀರದಿಂದ ಶ್ರವಣ ಮನನ ನಿಧಿಧ್ಯಾಸನಗಳ ಮೂಲಕ ಎಲ್ಲ ಕರ್ಮ ಸಮರ್ಪಣ ಮಾಡಿ ಅವನ ಅನುಗ್ರಹವನ್ನು ಸಂಪಾದಿಸುವುದೇ "ಫಲವಿದು ಬಾಳ್ವುದುಕೆ".

ಶಾಸ್ತ್ರಗಳಲ್ಲಿ ಅನಂತ ಅನರ್ಘ್ಯವಾದ ಮುತ್ತುಗಳು ಅಡಗಿವೆ.ಉಪದೇಶಾಮೃತ ಎಂಬ ಮುತ್ತನ್ನು ಗೀತಾ ಎಂಬ ಸೂತ್ರದಿಂದ ಹೆಣೆದು ಗಾಯಿತ್ರಿ ಪ್ರತಿಪಾದ್ಯನಾದ ನಾರಾಯಣನಿಗೆ ವಚನಮಾಲೆಯನ್ನು ತೊಡಿಸುವ ಭಾಗ್ಯ ನನ್ನದಾಗಿದೆ. ಈ ಪ್ರಯತ್ನದಲ್ಲಿ ನನನ್ನು ಪ್ರಚೋದಿಸಿದ ವಿದ್ಯಾಗುರುಗಳೂ ಹಾಗೂ ಪೂರ್ಣಪ್ರಜ್ಞ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರಾದ ಡಾ॥ಸತ್ಯನಾರಾಯಾಣಾಚಾರ್ಯರಿಗೆ ನಾನು ಅಭಾರಿಯಾಗಿದ್ದೇನೆ. ಈ ಪ್ರಬಂಧವನ್ನು ಅಸ್ಮದ್ಗುರುವಂತರ್ಗತ ತತ್ವಾಭಿಮಾನಿ ಅಂತರ್ಗತ ಭಾರತಿರಮಣ ಮುಖ್ಯ ಪ್ರಾಣಾಂತರ್ಗಕ ಕ್ಷೇತ್ರಪಾಲಕ ಕೃಷ್ಣನಿಗೆ ಸಮರ್ಪಣ ಮಾಡುತ್ತಿದ್ದೇನೆ.ಇದರಿಂದ ಭಗವಂತನು ಪ್ರೀತನಾಗಲಿ.

**॥ ಕೃಷ್ಣಾರ್ಪಣಮಸ್ತು ॥**

# ಮರಳಿ ಬಂದಿದೆ ಯುಗಾದಿ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
- 9739369621

ಯುಗಾದಿಯು ಹಿಂದೂ ಪಂಚಾಂಗದ ಮೊಟ್ಟ ಮೊದಲ ಹಬ್ಬ. ಹೊಸ ವರ್ಷ ಉತ್ಸಾಹ ಕೆದರುವ ಮಂಗಳ ದಿನ. ಇದು ವರುಷದ ಆದಿಯಾದರೂ ಯುಗದ ಆದಿ ಎಂದು ಕರೆಯುವ ರೂಢಿ ಇದೆ. ಕಷ್ಟದ ದಿನಗಳಲ್ಲಿ ಒಂದು ವರ್ಷವೂ ಒಂದು ಯುಗವಾಗುವಂತೆ, ಸುಖ ದಿನಗಳಲ್ಲಿ ಒಂದು ಯುಗ ಸಹ ವರ್ಷದಂತೆ ಅನಾಯಾಸವಾಗಿ ಕಳೆಯುತ್ತದೆ. ಆದ್ದರಿಂದ ವರ್ಷವನ್ನು ಯುಗವೆಂದು ಭಾವಿಸುವುದು ಏನೇ ಕಷ್ಟಗಳಾದರೂ ಅದನ್ನು ಎದುರಿಸುವ ಎದೆಗಾರಿಕೆಗೆ ಸಾಕ್ಷಿಯಾಗಿದೆ. ವರ್ಷವನ್ನು ಯುಗದಂತೆ ಸ್ವಾಗತಿಸುವ ನಮ್ಮ ಮನೋಭಾವ ಸಾಧನೆಯ ಆಸೆ ಹೊತ್ತವನಿಗೆ ಪ್ರತಿಕ್ಷಣವೂ ಅಮೂಲ್ಯ ಸಣ್ಣ ಅವಕಾಶವೂ ಸುಸಂದರ್ಭ ಎಂಬ ಭಾವ ಒಂದು ಯುಗದ ಸಾಧನೆ ವರುಷದಲ್ಲೇ ಮಾಡುವ ತುಂಬಿದ ಉತ್ಸಾಹಕ್ಕೆ ಸಾಕ್ಷಿ. ಇದು ವರುಷದ ಆದಿ ಎಂಬುದಕ್ಕಿಂತ ವಸಂತದ ಆದಿ ಎಂಬುದೂ ಸತ್ಯ!

ಈ ಚೈತ್ರದಲ್ಲಿ ಹಿಂದೆ ಬೋಳಾಗಿದ್ದ ಮರದಲ್ಲಿ ಈಗ ತಾನೆ ಮೂಡುತ್ತಿರುವ ಕೆಂಚಿಗುರುಗಳನ್ನು ಕಂಡಾಗ ನಮ್ಮ ಖಾಲಿ ಬದುಕಿನಲ್ಲೂ ಅಂತೆಯೇ ಆದರ್ಶ, ಅನುಭವ ಅಭಿಮಾನ ನಿರೀಕ್ಷೆಗಳು ಮೂಡಲಿ ಎಂಬ ಆಸೆ ಚಿಗುರುವುದು ಚಿರಂತನ ಸತ್ಯ. ಹೀಗಾಗಿ ಸಾಧನೆಯ ಯುಗದ ಆದಿಯೇ ವರುಷದ ಆದಿ.

ಹಿಂದಿನ ದಿನ ನೂತನ ಫಲಗಳು, ತೆಂಗಿನಕಾಯಿ, ಕನ್ನಡಿ ಪುಷ್ಪಗಳು ಇವುಗಳನ್ನು ದೇವರ ಎದುರಿನಲ್ಲಿಡಬೇಕು. ಬೆಳಿಗ್ಗೆ ಎದ್ದು ಭಗವಂತನನ್ನು ಸ್ಮರಿಸಿ ಮಂಗಳಮಯ ಕನ್ನಡಿಯಲ್ಲಿ ಮುಖವನ್ನು ಕಂಡು ದೇವರಿಗೆ ನಮಸ್ಕರಿಸಬೇಕು. ಮಂಗಳವಾದ ಕನ್ನಡಿಯಲ್ಲಿ ಪ್ರತಿಫಲಿತವಾದ ಮುಖ ನಮ್ಮ ಸತ್ಕರ್ಮಗಳ ಮುಂದಿನ ಪ್ರತಿಫಲಿತವೇ ಜೀವಿತ ಎಂಬ ಸಂದೇಶ ಬೀರುತ್ತದೆ. ಅನಂತರ ಜೀವದ ದೇಹಾರೋಗ್ಯ ಮತ್ತು ಸಂಪತ್ತನ್ನು ಉಳಿಸಲಿಕ್ಕಾಗಿಯೇ ಪಣತೊಟ್ಟು ಸೌಭಾಗ್ಯ ಲಕ್ಷ್ಮೀಯು ಎಣ್ಣೆಯಲ್ಲಿ ವಾಸವಿರುವುದರಿಂದ ತೈಲ ಅಭ್ಯಂಜನ ಸ್ನಾನವನ್ನು ಕಡ್ಡಾಯವಾಗಿ ಆಚರಿಸಬೇಕು.

ಅನಂತರ ಕಹಿ - ಸಿಹಿಗಳ ಸಂಕೇತವಾದ ಬೇವು ಮತ್ತು ಬೆಲ್ಲ ನಮ್ಮ ಬೇಡಬೇಕುಗಳ ಸಮೃದ್ಧಿಯಾದ ಜೀವನದ ಸಂಕೇತ. ಬೇಕಾದ್ದರೊಂದಿಗೆ ಬೇಡವಾದ್ದನ್ನು ನುಂಗಿಕೊಳ್ಳುವ ಆತ್ಮಸ್ಥೈರ್ಯ ಅವಶ್ಯಕ. ಅದನ್ನು ಪರಮಾತ್ಮನೀಡಲಿ ಎಂಬ ಹಿನ್ನೆಲೆಯಲ್ಲಿ ಕಷ್ಟ ಸುಖಗಳನ್ನು ಇಡಿ ವರುಷ ಒಟ್ಟಿಗೆ ತೆಗೆದುಕೊಳ್ಳುವ ಸಂಕಲ್ಪ ಶಕ್ತಿಗೆ ಸೂಚಕ.

ನೂರು ವರ್ಷ ಬಾಳಲು ಬೇಕಾಗುವ ವಜ್ರದಂತೆ ಗಟ್ಟಿ ಮುಟ್ಟಾದ ದೇಹಕ್ಕಾಗಿ ಸರ್ವ ಸಂಪತ್ತುಗಳ ಸಂಪ್ರಾಪ್ತಿಗಾಗಿ ವಿಪತ್ತುಗಳ ವಿನಾಶಕ್ಕೆ ಬೇವಿನ ಬೆಲ್ಲದ ಭಕ್ಷಣವನ್ನು ಮಾಡುತ್ತೇವೆ. ಆರೋಗ್ಯವೆಂಬ ಸಂಪತ್ತು, ದೇಹದಾರ್ಢ್ಯದ ಬಲ, ದೈವಾನುಗ್ರಹದ ಬೆಂಬಲ ಇವನ್ನು ಬಿಟ್ಟು, ಬಯಸುವುದು ಬೇರಾವುದಿದೆ ವಿವೇಕಿಯಾದವನಿಗೆ? ಬೆಲ್ಲದ ಮಧುರತೆ ಮನವನ್ನು ಆಹ್ಲಾದಗೊಳಿಸುವ ಭಕ್ತಿಯ ಸಂಕೇತ. ಕಹಿಯ ಗುಂಗು ಚೆಲ್ಲಿ ಸಾಕಾಯಿತೆನಿಸುವ ಬೇವು ವೈರಾಗ್ಯದ ಸಂಕೇತ. ಏನನ್ನಾದರೂ ಸಮನಾಗಿ ಸ್ವೀಕರಿಸುವ ಎಂದ ಗೀತಾಚಾರ್ಯನ ಜೀವನ ಯೋಗದ ಜ್ಞಾನ ಪ್ರತೀಕ. ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಒಗ್ಗೂಡಿಸುವ ಬೃಹತ್ ಸಂಕಲ್ಪ ಯುಗಾದಿಯ ಮೂಲೋದ್ದೇಶ.

ಬೇವು ಕಹಿಯಾದ ಮುಖ ಕಿವಿಚುವ ಸಸ್ಯ-ಇನ್ನೊಬ್ಬರ ಮುಖದಲ್ಲಿ ಬೇಸರ, ಅಸಮಾಧಾನ, ಮುಜಗರ ಮೂಡಿಸುವ ನಮ್ಮ ದುರ್ಗುಣಗಳೇ ದೌರ್ಬಲ್ಯಗಳೇ ಬೇವು.ಬೇವನ್ನು ಬೆಲ್ಲದೊಳು ಬೆರೆಸಿದಂತೆ.ನಾವು ಗುಣಮಯವಾದ ಆನಂದಮಯವಾದ ಭಗವಂತನ ಧ್ಯಾನದಲ್ಲಿ ತೊಡಗಿ, ದುರ್ಗುಣಗಳ ಬಿಟ್ಟು ಒಬ್ಬ ಉತ್ತಮ ವ್ಯಕ್ತಿಗಳಾಗಿ ರೂಪಗೊಳ್ಳಲು ಭಗವಂತನ ಅನುಗ್ರಹ ಪಡೆಯುವುದು ಇದರ ಉದ್ದೇಶ. ಯುಗಾದಿಯು ಒಂದರ್ಥದಲ್ಲಿ ಅದು ಆರ್ಥಿಕ ಹಾಗೂ ಆಧ್ಯಾತ್ಮಿಕ ಬಜೆಟ್ ಮಂಡನೆಯ ದಿನದಂತೆಯೇ ಹೌದು. ಆದ್ದರಿಂದ ಅಂದು ಈ ವರ್ಷ ನಮಗೆ ಸಿಗುವ ಲಾಭ ನಷ್ಟಗಳನ್ನು ತಿಳಿದುಕೊಳ್ಳಬೇಕು.ನಮ್ಮ ಭಗವಂತ ಬೋಧಿಸುವ ದೇವತಾಧಿಕಾರವನ್ನು ಶ್ರವಣ ಮಾಡುವವರಿಗೆ ಮಂಗಳವಾಗದೇ ಇದ್ದೀತೆ? ಹೀಗಾಗಿ ತಿಥಿ, ವಾರ, ನಕ್ಷತ್ರ - ಯೋಗ ಕರಣವೆಂಬ ಪಂಚಾಂಗದ ಕಾಲ ಚಕ್ರದ ಬಗೆಗೆ ಜಾಗರೂಕನಾಗಿರುವವನಿಗೆ ಭವಿಷ್ಯತ್ ಕಾಲ ಭವ್ಯವಾಗುವುದು ನಿಶ್ಚಯ !

ಯುಗಾದಿ ಶಕ್ತಿ ಉಪಾಸನೆಯ ಆರಂಭದ ದಿನ. ಈ ದಿನದಿಂದ ವಸಂತ ನವರಾತ್ರಿ ಆರಂಭ. ವರ್ಷಾದಿಯ ವಸಂತ ಮತ್ತು ವರ್ಷಮಧ್ಯದ ಶರದೃತುಗಳು ಆರಂಭಕಾಲ ದೇವತಾನುಗ್ರಹ ಪ್ರಾಪ್ತಿಗೆ ಶ್ರೇಷ್ಠವೆಂದು ನಂಬಿಕೆ.

ಭಾರತೀಯರಿಗೆ ಯುಗ ಎಂಬುದು ಚಿರಪರಿಚಿತವಾದ ಶಬ್ದ. ಕಾಲಮಾನದ ಪ್ರಕಾರ ಕೃತ-ತ್ರೇತಾ-ದ್ವಾಪರ-ಕಲಿ ಇವು ಚತುರ್ಯುಗಗಳು, ಚತುರ್ಮುಖ ಬ್ರಹ್ಮನು ಸೃಷ್ಟಿಕಾರ್ಯವನ್ನು ಕೃತಯುಗದಲ್ಲಿ ಆರಂಭಿಸಿದ ದಿನವೇ ಯುಗಾದಿ ಅದು ಇಂದಿಗೂ ಪರ್ವವಾಗಿ ಆಚರಿಸಲ್ಪಡುತ್ತಿದೆ.



ಅಮರಕೋಶದ ಪ್ರಕಾರ ಯುಗವೆಂದರೆ ಎರಡು ಅಥವಾ ಜೋಡಿ.ಭಗವದ್ಗೀತೆಯ, ಪರಿತ್ರಾಣಾಯ...! ಎಂಬ ಶ್ಲೋಕದಲ್ಲೂ ಯುಗ ಶಬ್ದವಿದೆ. ಅಂದರೆ ವಿಷ್ಣುವಿನ ಅವತಾರಕ್ಕೆ ಯುಗ ಶಬ್ದ ಲಕ್ಷ ವಾಗಿದೆ. ಆದರೆ ಯುಗದ ಆದಿಯಲ್ಲೋ ಅಂತ್ಯದಲ್ಲೋ? ಸ್ಪಷ್ಟವಿಲ್ಲ ಉತ್ತರ. ಯುಗಳ ಎಂದರೆ ಒಂದು ಜೊತೆ. ಯುಗಾಂತ ಎಂದರೆ ಯುಗದ ಕೊನೆ - ಹೀಗೆ ಯುಗಶಬ್ದ ನಮ್ಮ ಸತ್ಯಜೀವನದ ವೈಯಕ್ತಿಕ.ರಾಜಕೀಯ ಸಾಮಾಜಿಕ ಅನುಭವ ಅನೇಕ ವರ್ತಮಾನಗಳನ್ನು ನೆನಪಿಸುತ್ತಿರು ವಂತಿದೆ.

ಯುಗಾದಿ ಎಂದರೆ ಇಡಿ ವರ್ಷಕ್ಕೆ ಬೇಕಾದ ಯೋಜನೆಯನ್ನು ಹಾಕಿಕೊಂಡು ಅದಕ್ಕೆ ಅನುಗುಣವಾಗಿ ನಡೆಯುವ ಶುಭ ಸಂಕಲ್ಪವನ್ನು ಮಾಡಿಕೊಳ್ಳುವ ದಿನ. ಹಿಂದಿನ ವರ್ಷದ ಸಾಧನೆಯನ್ನು ಪರಿಶೀಲಿಸಿ. ಈ ವರ್ಷಕ್ಕೆ ಬೇಕಾದ ಸಂವಿಧಾನವನ್ನು ವಿವೇಕಪೂರ್ವಕವಾಗಿ ಹಾಕಿಕೊಳ್ಳುವ ದಿನ. ಅಸುರಿ ಶಕ್ತಿಯ ವಿರುದ್ಧ ಸಾತ್ವಿಕ ಶಕ್ತಿಯ ವಿಜಯವೇ ಯುಗಾದಿಯ ವೈಶಿಷ್ಟ್ಯ ಈ ದಿನ ಶ್ರೀರಾಮ ರಾವಣವನ್ನು ಕೊಂದು ಅಯೋಧ್ಯೆಗೆ ಬಂದು ರಾಮರಾಜ್ಯವಾಳಲು ಆರಂಭಿಸಿ ಆ ಸಂಭ್ರಮದ ಆಚರಣೆಗೆ ಮನೆಯ ಮುಂದೆ ವಿಜಯ ಪತಾಕೆ ಹಾರಿಸಿದರು. ಅದಕ್ಕೆ ಇದನ್ನು ಗುಡಿ ಪಾಡ್ಯ (ಗುಡಿ - ಬಾವುಟ) ಎನ್ನುತ್ತಾರೆ.

**ಚಾಂದ್ರವತ್ಸರಾದಿ ಚೈತ್ರಮಾಸ**

ಚೈತ್ರಾದಿವತ್ಸರ ಎಂದರೆ ಚೈತ್ರಮಾಸವನ್ನು ಮೊದಲನೆಯ ದನ್ನಾಗಿ ಹಿಡಿದು ಎಣಿಸುವ ಒಂದು ವರ್ಷದ ಕಾಲ. ಹಿಂದಣದಲ್ಲಿ ವರ್ಷದ ಅವಧಿಯನ್ನು ಐದು ರೀತಿಯಿಂದ ಎಣಿಸುವ ಪದ್ಧತಿಯಿದ್ದಿತು. ಚಾಂದ್ರ, ಸೌರ, ಪಾವನ,ನಕ್ಷತ್ರ, ಬಾರ್ಹ ಸ್ಪತ್ಯ. ಈ ಐದರಲ್ಲಿ ಚಾಂದ್ರ ವತ್ಸರ ಗಣನಾಪದ್ಧತಿಯೇ ಹೆಚ್ಚು ಅನುಕೂಲವೆನಿಸಿದುದರಿಂದ ಇದೇ ಭಾರತದಲ್ಲಿ ಹೆಚ್ಚು ಲೋಕಪ್ರೀತಿಗೆ ಪಾತ್ರವಾಗಿ ಇದುವರೆಗೂ ನಡೆದು ಕೊಂಡು ಬಂದಿದೆ.

ಚೈತ್ರಾದಿವತ್ಸರದ ಮೊದಲ ದಿನವಾದುದರಿಂದಲೇ ಚೈತ್ರ ಶುಕ್ಲ ಪ್ರತಿಪತ್ತಿಗೆ ಒಂದು ವಿಶಿಷ್ಟ ಹಬ್ಬದ ಸ್ವರೂಪ ಬಂದಿದೆ. ಅಲ್ಲದೆ ಈ ದಿನಕ್ಕೆ ಕಲ್ಪಾಂತರದ ಚರಿತ್ರೆಯ ಹಿನ್ನೆಲೆಯೂ ಇದೆ. ಸದ್ಯ ಚಾಲ್ತಿಯಲ್ಲಿರುವ ಶ್ವೇತವರಾಹ ಕಲ್ಪವು ಪ್ರಾರಂಭವಾದುದು ಚೈತ್ರ ಶುಕ್ಲ ಪ್ರತಿಪದೆಯ ದಿನವೇ ! ಕಲಿಯುಗ ಮೊದಲಾದುದೂ ಇದೇ ದಿನ ! ಅಲ್ಲದೆ ಯುಧಿಷ್ಠಿರ ಶಕ - ಶಾಲಿವಾಹನ ಶಕಗಳು ಚೈತ್ರಾದಿ ದಿನದಿಂದಲೇ ಪ್ರಾರಂಭವಾಗಿವೆ. ಚಳಿಗಾಲದಲ್ಲಿ ಎಲೆಗಳೆಲ್ಲ ಉದುರಿ ಹೋಗಿ ಬರಡು ಬರಡಾಗಿದ್ದ ಗಿಡ ಮರಗಳು, ಚೈತ್ರಮಾಸದಲ್ಲಿ ಹೊಸ ಚಿಗುರು ತಳಿರುಗಳಿಂದ ಕೂಡಿ ಚೇತನಶೀಲವಾಗಿರುವುವು. ಬೇವಿನ ಹೂಗಳ ಮಾದಕ ಸುಗಂಧ ಜನರ ಹೃದಯವನ್ನು ಕೆಣಕುವುದು ಚೈತ್ರಮಾಸದ ಸೃಷ್ಟಿಯ ಈ ಸುಂದರ ಸ್ವರೂಪವು ನಾಗರೀಕರಿಗೂ ಇಷ್ಟ ಜಾನಪದರಿಗೂ ಇಷ್ಟ. ಋತೂನಾಂ ಕುಸುಮಾಕರಃ ಎಂದು ಶ್ರೀಕೃಷ್ಣನೇ ವಸಂತಋತುವನ್ನು ಹೊಗಳುವನೆಂದ ಮೇಲೆ ಚೈತ್ರಮಾಸದ ಮಹಿಮಾತಿಶಯಕ್ಕೆ ಬೇರೆ ಶಬ್ದ ಪ್ರಮಾಣಗಳೇತಕ್ಕೆ ಬೇಕು? ಚೈತ್ರಮಾಸವೆಂದರೆ ಕೃಷಿಕರಿಗೆ ಹೊಸವರ್ಷದ ಕೃಷಿ ಸಂಪತ್ತಿಗಾಗಿ ಸಾಧನ ಮಾಡಬೇಕಾದ ಅವಧಿ.ವತ್ಸರಕ್ಕೆ-ವರ್ಷವೆಂಬ ಹೆಸರು ಬರಬೇಕಾದರೆ, ಅದು ಕೃಷಿ ಪ್ರಾಧಾನ್ಯವಾಗಿಯೇ ಬಂದಿದೆಯೆಂದು ಹೇಳ ಬಹುದು. ಕನ್ನಡದಲ್ಲಿ ಕೂಡ ಮಳೆಗಾಲ ಎಂದರೆ ಒಂದು ವರ್ಷ ಎಂಬ ನುಡಿಗಟ್ಟು ರೂಢಿಯಲ್ಲಿದೆ.

ನಿಸರ್ಗದ ಇಂಚಿಂಚಲ್ಲೂ ಚೇತನ ಸಂಚಾರ. ಖಗ ಮಿಗಗಳಿಗೆ ಇದ್ದಲ್ಲೇ ಹೊಸ ಪ್ರಪಂಚ ಕಂಡ ಖುಷಿ.ಖುರ ಪುಟದ ಸದ್ದಿಗೂ ಹೊಸ ಲಯ. ನೊಂದು-ಬೆಂದೂ ಮುಪ್ಪನಪ್ಪಿ, ಮತ್ತೆ ತುಂಟತನದ ಬಾಲ ನಂತಾಗುವ ಪ್ರಕೃತಿಯ ಕಾಣುವ ಜೀವಿಗಳ ಹೃದಯದಲ್ಲಿ ಪುಳಕ. ಹಬ್ಬಕ್ಕೆ ಆಚರಣೆಗೆ ಇದಕ್ಕಿಂತ ವಿಶೇಷ ಸಮಯ ಇನ್ನಾವುದೂ ಸಿಗಲಾರದು. ಮನು ಷ್ಯನು ಮಾನಸಿಕವಾಗಿ ಹೊಸ ಹುಟ್ಟನ್ನು ಪಡೆಯಲು ಹುಟ್ಟು ಹಾಕಿದ- ಯುಗಾದಿ. ಏನೇ ಇರಲಿ. ನಾವು ಸೋತು ಹತಾಶರಾಗುವುದು ಬೇಡ. ಯುಗಾದಿಯ ತಗಾದಿಯ ಆದಿಯಾಗದಿರಲಿ, ಬದುಕು ನಿತ್ಯದ ಹಬ್ಬ ಗಳನ್ನು ತರುವ ಗಾದಿಯನ್ನೇರಲಿ.

ಮತ್ತೆ ಬಂದಿದೆ ಯುಗಾದಿ
ಮತ್ತದೇ ಬಾಳ ಹಾದಿಯಲ್ಲಿ
ಸ್ವೀಕರಿಸುವುದಷ್ಟೇ ನಮ್ಮ ಕೆಲಸ
ನೋವೋ, ನಲಿವೋ
ಅಳುವೋ, ನಗುವೋ
ಅದುವೆ ಸಂತ್ಸರದ ರಸದೌತಣ
ಚೆಲುವಿನ ಖನಿಯ ಪುನರುತ್ಥಾನ

ಒಂದೊಂದು ಹಬ್ಬವನ್ನು ನಗರ ಮಂದಿ ಈ ಹೊತ್ತು ಆಚರಿಸುತ್ತಿರು ವುದನ್ನು ಕಂಡರೆ ಅವರು ಅದರ ಅನುಭವಿಗಳೇ ಆಗಿರುವುದಿಲ್ಲ ಅನ್ನಿಸುತ್ತದೆ. ಸದ್ಯಕ್ಕೇನೋ ಕಥೆ ಹೇಳಲು ತಾತ ಅಜ್ಜಿಯಾದರೂ ಇದ್ದಾರೆ, ಮುಂದೆ? ರಜೆಗೆ ಯಾವುದೋ ಮಲೆನಾಡಿಗೆ ಹೋದಾಗ ಟೇಪ್ ರೆಕಾರ್ಡ್‌ನಲ್ಲಿ ಖಾಲಿ ಕ್ಯಾಸೆಟ್ ಹಾಕಿ, ಹಕ್ಕಿಗಳಿಂಚರ, ತೊರೆಗಳ ಜುಳುಜುಳುಗಳು ರೆಕಾರ್ಡ್ ಮಾಡಿಕೊಳ್ಳುವುದು ಕಂಡರೆ ಭವಿಷ್ಯತ್ತು ಆತಂಕ ಹುಟ್ಟಿಸುತ್ತದೆ. ಇವೆಲ್ಲಾ ನಮ್ಮ ಸಂಸ್ಕೃತಿಯನ್ನು ಹಂತಹಂತವಾಗಿ ನುಂಗಿಕೊಳ್ಳುತ್ತಿರುವ ಜಾಗತೀಕರಣದ ಭೂತದ ಕೊಡುಗೆಗಳು.



# ಹರಿದಾಸಿ ಯದುಗಿರಿಯಮ್ಮನವರ ಶ್ರೀಮದ್ರಾಮಾಯಣ ಕೃತಿಗಳು

- ಡಾ॥ ಸುಮನ ಬದರೀನಾಥ್
94820 94855



ಹರಿದಾಸ ಸಾಹಿತ್ಯದ ಮೂರು ಮುಖಗಳಲ್ಲಿ ಒಂದಾದ ಶ್ರೀವೈಷ್ಣವ ದಾಸಸಾಹಿತ್ಯದ ಪರಿಸರವನ್ನು, ಪರಂಪರೆಯನ್ನು 19 ನೇ ಶತಮಾನದಲ್ಲಿ ತಮ್ಮ ಪ್ರತಿಭೆಯ ಬೆಳಕಿನಿಂದ ಬೆಳಗಿದವರು ಯದುಗಿರಿಯಮ್ಮನವರು.ಕಣ್ ಕುಕ್ಕದ ಆದರೆ ಶಾಂತವಾಗಿ ಪ್ರಕಾಶಬೀರುವ ಬೆಳದಿಂಗಳಿನಂತಹ ಸಾಹಿತ್ಯ ಸೃಷ್ಟಿ ಇವರದು.ಅಪ್ರಸಿದ್ಧತೆಯ ನಸುಗತ್ತಲು ಕವಿದಿದ್ದ ಇವರ ಸಾಹಿತ್ಯ ಶ್ರೀಗೆ ಇದೀಗ ಪ್ರಚಾರದ ಮುಂಬೆಳಗು ಬೀಳುತ್ತಿರುವುದು ಸಂತಸದ ವಿಷಯವೇ ಆಗಿದೆ.

ಯದುಗಿರಿಯಮ್ಮನವರ ಜೀವಿತ ಕಾಲ ಕ್ರಿ.ಶ. 1828 ರಿಂದ ಕ್ರಿ.ಶ. 1908 ಎಂದು ವಿದ್ವಾನ್ ಶ್ರೀ ರಘುಸುತ ಗುರುತಿಸಿದ್ದಾರೆ. ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿ ಬೆಳೆದವರು. ನಮ್ಮ ಹರಿದಾಸಿಯರ ಇತಿಹಾಸ ಚಿತ್ರಣಕ್ಕೆ ಅನುಗುಣವಾಗಿ ಯದುಗಿರಿಯಮ್ಮನವರ ತಾಯಿ ತಂದೆಯರ ಹೆಸರು. ಜನ್ಮಸ್ಥಳ, ಬಾಲ್ಯ, ಗೃಹಸ್ಥ ಜೀವನ ಮುಂತಾದ ವಿವರಗಳಾವುವೂ ಸರಿಯಾಗಿ ತಿಳಿದು ಬಂದಿಲ್ಲ. ದೊಡ್ಡ ಕುಟುಂಬದಲ್ಲಿ ಮಗಳಾಗಿ ಜನಿಸಿ ದೊಡ್ಡ ಕುಟುಂಬಕ್ಕೆ ಸೊಸೆಯಾಗಿ ಹೋದರು. ತಮ್ಮ ಮನೆತನಕ್ಕೆ ಬಂದಿದ್ದ ಆಚಾರ ವಿಚಾರ ಸಂಪ್ರದಾಯಗಳನ್ನು ಶ್ರದ್ಧೆಯಿಂದ ಪರಿಪಾಲಿಸುತ್ತಿದ್ದರು. ಬಾಲ್ಯದಲ್ಲಿ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ಮಾಹಿತಿ ಇರದಿದ್ದರೂ ತಾವಾಗಿ ಓದಿ ಅರ್ಥ ಮಾಡಿಕೊಳ್ಳುವಷ್ಟು ಸಾಕ್ಷರತೆ ಇತ್ತೆಂದು ಧಾರಾಳವಾಗಿ ಹೇಳಬಹುದು. ಕನ್ನಡ, ತಮಿಳು, ತೆಲುಗುಗಳು ಓದಲು ಬರುತ್ತಿತ್ತು. ಸಂಸ್ಕೃತದ ಪರಿಚಯವೂ ಸ್ವಲ್ಪ ಮಟ್ಟಿಗೆ ಇತ್ತು. ಸಂಸ್ಕೃತ ಶ್ಲೋಕಗಳು, ಕನ್ನಡದ ದೇವರನಾಮಗಳು, ತಮಿಳು ಪಾಶುರಗಳು ಎಲ್ಲವನ್ನೂ ಚೆನ್ನಾಗಿ ಕಲಿತಿದ್ದರು. ಅವುಗಳನ್ನು ಹೇಳಿಕೊಳ್ಳುವುದರಲ್ಲಿ ದಿನದ ಬಹು ಹೊತ್ತು ಕಳೆಯುತ್ತಿದ್ದರೆ ಹೊರತು ಕಾಲವನ್ನು ವ್ಯರ್ಥ ಮಾಡುತ್ತಿರಲಿಲ್ಲ. ಬಹು ಬೇಗ ಪತಿ ವಿಯೋಗವಾಯಿತೆಂದೂ, ತಿಳಿದು ಬರುತ್ತದೆ. ಅಂದಿನ ಬೆಂಗಳೂರಿನ ತುಳಸೀ ತೋಟದ ದೇವಸ್ಥಾನ ಯದುಗಿರಿಯಮ್ಮನವರ ಕಾರ್ಯಕ್ಷೇತ್ರವಾಗಿತ್ತು. ದಿನವೂ ಅಲ್ಲಿಗೆ ಭೇಟಿ ನೀಡುವುದು.ಅಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಅವರ ನಿತ್ಯ ಜೀವನದ ಉಸಿರಾಗಿತ್ತು. ಸಹಜವಾಗಿ ಬಾಲ್ಯದಿಂದ ಬೆಳೆದು ಬಂದಿದ್ದ ದೈವಭಕ್ತಿ. ಸದಾ ಹೇಳಿಕೊಳ್ಳುತ್ತಿದ್ದ ಭಕ್ತಿಗೀತೆಗಳು, ದಿನವೂ ಹೋಗಿ ಬರುತ್ತಿದ್ದ ದೇವಸ್ಥಾನದ ಶಾಂತ ಪವಿತ್ರ ಪರಿಸರದ ಪ್ರಭಾವ ಎಲ್ಲವೂ ಬೆರೆತು ಯದುಗಿರಿಯಮ್ಮನವರ ಕವಿತಾ ರಚನಾ ದಾಂಗುಡಿಯಿಟ್ಟು ಕೃತಿರಚನೆಗೆ ಪ್ರಾರಂಭವಾಯಿತು. ಇಳಿ ವಯಸ್ಸಿನಲ್ಲಿ ಅಮ್ಮನವರು ಹಾಡಿದ್ದನ್ನು ಅವರ ಮೊಮ್ಮಕ್ಕಳು ಬರೆದಿಟ್ಟದ್ದರಿಂದ ಯದುಗಿರಿಯಮ್ಮನವರ ಕೃತಿಗಳು ಹರಿದಾಸ ಸಾಹಿತ್ಯ ಭಂಡಾರಕ್ಕೆ ಸೇರ್ಪಡೆಯಾಗುವಂತಾಯಿತು. ಮುದ್ದು ವೆಂಕಟ, ವೆಂಕಟಕೃಷ್ಣ ಇವರ ಅಂಕಿತ. ಆದರೆ ಅಂಕಿತವೂ ಹೇಗೆ ದೊರಕಿತೋಅದನ್ನಿತ್ತವರು ಯಾರೋ ಅವರ ಗುರುಗಳಾರೋ ಯಾವುದೋ ತಿಳಿದು ಬಂದಿಲ್ಲ ಬದುಕೆಲ್ಲ ಭಾಗವತವಾಗಿ ಬಾಳಿದವರು ಎಂಬ ಅಭಿಧಾನಕ್ಕೆ ಪಾತ್ರರಾಗಿದ್ದಾರೆ. ಕ್ರಿ.ಶ.1908ನೇ ಇಸವಿಯಲ್ಲಿ ತಮ್ಮ 80ನೇ ವಯಸ್ಸಿನಲ್ಲಿ ಹರಿಪದವೈದಿದರು.

ಕರ್ಣಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಯೋಜನೆಯ ಸಂಪುಟ 18 ರ ಭಾಗ 4 ರಲ್ಲಿ ಯದುಗಿರಿಯಮ್ಮನವರ ಸುಮಾರು 52 ಕೃತಿಗಳು ಪ್ರಕಟ ಗೊಂಡಿವೆ. ಈ ಕೃತಿಗಳನ್ನು ಒಟ್ಟಿಗೆ ಪರಿಭಾವಿಸಿದಾಗ, ಅಧ್ಯ ಯನ ಮಾಡಿದಾಗ ಕೃತಿಕಾರ್ತಿಯ ಸಾಹಿತ್ಯ ಸೃಷ್ಟಿಯ ಹಲ ವಾರು ವೈಶಿಷ್ಟ್ಯಗಳು ಅಂದಚೆಂದಗಳು ಗೋಚರಿಸುತ್ತವೆ, ಮನ ಸೆಳೆಯುತ್ತವೆ.

ಮೊದಲನೆಯದಾಗಿ ಈ ಕೃತಿಗಳ ವಿಷಯ ವೈವಿಧ್ಯತೆ. ಎದ್ದು ಕಾಣುವ ಅಂಶ. ಹರಿದಾಸಿ ಎಂಬ ಅಭಿದಾನಕ್ಕೆ ತಕ್ಕಂತೆ ಶ್ರೀಹರಿಸ್ತುತಿ. ಸುಮಾರು 10 ಕೃತಿಗಳು ಶ್ರೀಹರಿ ಸ್ತುತಿಗೆ ಮೀಸ ಲಾಗಿವೆ. ಭಗವಂತನನ್ನು ವಿಧವಿಧವಾಗಿ ಸ್ತುತಿಸಿರುವ ಈ ಹಾಡುಗಳಲ್ಲಿ 4 ಕೃತಿಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಭಗವಂತನ ಪಾದಾರವಿಂದಗಳನ್ನು ಅರವಿಂದ ನೇತ್ರಗಳನ್ನು, ಆನಂದ ಹಸ್ತಗಳನ್ನು ಬಗೆಬಗೆಯಾಗಿ ಕೊಂಡಾಡಿದ್ದಾರೆ. "ಪಾದವನ್ನು ನಂಬಿಹೆನೊ ಪರಮಪುರುಷ ಪಾವನನ ಮಾಡೆನ್ನ ಶ್ರೀರಂಗನಾಥ" ಎಂದು ಪ್ರಾರಂಭವಾಗುವ ಕೃತಿ ಯಲ್ಲಿ 4 ನುಡಿಗಳ 16 ಸಾಲಿನಲ್ಲಿ ಸುಮಾರು 60 ಬಾರಿ ಶ್ರೀ ಹರಿ ಪಾದಗಳನ್ನು ಸ್ಮರಿಸಿದ್ದಾರೆ. ರಾಮ, ಕೃಷ್ಣಾವತಾರಗಳೊ ಡನೆ 6 ಶ್ರೀರಂಗದ ರಂಗನಾಥ. ಕಂಚಿವರದರಾಜ,ಯದು ಗಿರಿಯ ಚೆಲುವನಾರಾಯಣನ ಪಾದಗಳನ್ನು ಸ್ಮರಿಸಿದ್ದಾರೆ. (ಯದುಗಿರಿಯಮ್ಮನವರು ಶ್ರೀವೈಷ್ಣವ ಮತಾನುಯಾಯಿ ಗಳೆಂದು ನೆನೆಯಬಹುದು) ಅಂತೆಯೇ ಕಣ್ಣಾರೆ ನೋಡೆನ್ನ ಕರುಣ ಕಟಾಕ್ಷದೀ ಇಂದಿರಾ ರಮಣ ಅರವಿಂದ ನೇತ್ರದಲೀ ಎಂಬ 4 ಸಾಲಿನ 3 ನುಡಿಗಳ ರಚನೆಯಲ್ಲಿ ಶ್ರೀ ಹರಿನೇತ್ರ ಗಳನ್ನು ಬಗೆ ಬಗೆಯಾಗಿ ಕೊಂಡಾಡಿದ್ದಾರೆ. "ಲಕ್ಷ್ಮೀ ಪತಿ ನಿಮ್ಮ ಕರಗಳ ಸ್ತುತಿಸಿ ಬೇಡುವೆ ನಾನು" ಎಂದು ಶ್ರೀ ಹರಿಯ ದಶಾ ವತಾರಗಳನ್ನೂ, ಇನ್ನಿತರ ಲೀಲೆಗಳನ್ನು ಹೆಸರಿಸುತ್ತಾ ಹಸ್ತ ಸ್ತುತಿ ಮಾಡಿದ್ದಾರೆ.

ಶ್ರೀವೈಷ್ಣವ ಧರ್ಮದಲ್ಲಿ ವಿಷ್ಣು ದೇವಾಲಯಗಳಿಗೂ, ದೇವಾಲಯದಲ್ಲಿ ದೇವ ದರ್ಶನಕ್ಕೂ, ಅಲ್ಲಿ ನಡೆವ ಉತ್ಸವ ಗಳಿಗೂ ವಿಶೇಷ ಪ್ರಾಶಸ್ತ್ಯವಿದೆ. ಅದಕ್ಕನುಗುಣವಾಗಿ ಯದುಗಿರಿ ಯಮ್ಮನವರು ಪಾರ್ಥಸಾರಥಿಯ ದೇವಾಲಯ ಪ್ರವೇಶದಿಂದ ದೇವತಾದರ್ಶನ. ದೇವ ವಿಗ್ರಹದ ಪಾದಾದಿ ಕೇಶಾಂತವರ್ಣನೆ, (ಈ ದೇವಾಲಯ ಎಲ್ಲಿಯದೆಂದು ಕೃತಿಯಲ್ಲಿ ಸ್ಫುಟವಾಗುವು ದಿಲ್ಲ) ವಿಸ್ತಾರವಾಗಿ ಕಣ್ಣಿಗೆ ಕಟ್ಟುವಂತೆ ಒಂದು ಕೃತಿಯಲ್ಲಿ ಮಾಡಿದ್ದಾರೆ. ಆಂಡಾಳ್ ನೀರಾಟ್ಟೋತ್ಸವವನ್ನು 2 ಕೃತಿಗಳಲ್ಲಿ ಉತ್ಸಾಹದಿಂದ ಮಾಡಿದ್ದಾರೆ. ಭಕ್ತ ಹೃದಯದ ಉತ್ಕಟ ಭಾವ ಪೂರ್ಣವಾದ ತುಡಿತ ಮಿಡಿತಗಳು, ಆರ್ತತೆ ಕಾತರತೆಗಳು ಆತ್ಮ ನಿವೇದನೆಯ ರೂಪ ತಾಳಿ 5 ಕೃತಿಗಳಲ್ಲಿ ವ್ಯಕ್ತಗೊಂಡಿವೆ. ಶ್ರೀ ಭಾಗವತ ಸಂಗ್ರಹ ಎಂಬ ಧೀರ್ಘ ಕೃತಿ ಭಾಗವತದ ದ್ವಾದಶ ಸ್ಕಂಧಗಳನ್ನು 1163 ನುಡಿಗಳಲ್ಲಿ ಬರೆಯಲಾಗಿದೆ. ಯದುಗಿರಿ ಯಮ್ಮನವರ ಕೃತಿಗಳಲ್ಲೆಲ್ಲ ಅವರ ಕವಿತಾ ಶಕ್ತಿಯ ಅತ್ಯುತ್ತಮ ಅಭಿವ್ಯಕ್ತಿಯಾಗಿರುವುದು ಅವರ ಶ್ರೀರಂಗ ಮಹಾತ್ಮ್ಯಂ ಕೃತಿ ಗುಚ್ಛ. ಇದರಲ್ಲಿ ಶ್ರೀರಂಗದಲ್ಲಿ ನಡೆಯುವ ವಿವಿಧ ಉತ್ಸವಗಳನ್ನು ವರ್ಣಿಸುವ 16 ಕೃತಿಗಳಿವೆ. ಒಂದೊಂದು ಸುಂದರ ವರ್ಣನಾ ಚಿತ್ರಗಳು. ತೀರ್ಥಯಾತ್ರೆ ಕಠಿಣವಿದ್ದ ಆ ಕಾಲದಲ್ಲೇ ಯದುಗಿರಿ ಯಮ್ಮನವರು ಭಾರತದಾದ್ಯಂತ ತೀರ್ಥಯಾತ್ರೆ ಮಾಡಿದ್ದಾರೆ. ಶ್ರೀವೈಷ್ಣವರಿಗೆ ಶ್ರೇಷ್ಠವೆನಿಸಿದ ಶ್ರೀರಂಗ, ಮೇಲುಕೋಟೆ, ಕಂಚಿ, ತಿರುಪತಿಗಳನ್ನೆಲ್ಲದೆ ಉಡುಪಿ, ಗಯಾ, ಪ್ರಯಾಗ, ಶೃಂಗೇರಿ ಪಿಳ್ಳನಗಿರಿ ಮುಂತಾದ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿನ ಕ್ಷೇತ್ರಾಧಿದೇವತೆಗಳನ್ನು ಸ್ತುತಿ ಮಾಡಿದ್ದಾರೆ.ವಸ್ತು ವೈವಿಧ್ಯತೆ ಯಿಂದ ಕೂಡಿದ ಈ ಎಲ್ಲಾ ಕೃತಿಗಳೂ ಅಮ್ಮನವರ ಭಕ್ತಿ ಭಾವ ಭರಿತ ವರ್ಣನಾ ವೈಖರಿಯಿಂದ ಹೃದ್ಯವಾಗಿವೆ.

ಯದುಗಿರಿಯಮ್ಮನವರ ಕೃತಿ ಸಂಚಯದಲ್ಲಿ ರಾಮಾ ಯಣವನ್ನು ಕುರಿತಾದ ಎರಡು ವಿಶೇಷ ವಿಶಿಷ್ಟ ರಚನೆಗಳಿವೆ. ಅವರು ನಿತ್ಯವೂ ಹೋಗುತ್ತಿದ್ದ ತುಳಸೀತೋಟದ ಶ್ರೀರಾಮ ದೇವಾಲಯದಲ್ಲಿ ನಡೆಯುತ್ತಿದ್ದ ರಾಮಾಯಣ ಪ್ರವಚನ ಹಾಗೂ ಶ್ರೀರಾಮ ನಾಮ ಸಂಕೀರ್ತನದಿಂದ ಪ್ರಭಾವಿತಗೊಂಡು ಅವರ ರಾಮಭಕ್ತಿ, ಕೊನರಿ, ಪಲ್ಲವಿಸಿ, ಹುಲು ಸಾಗಿ ಬೆಳೆದು 'ಶ್ರೀರಾಮ ಧ್ಯಾನ' ಮತ್ತು 'ಶ್ರೀಮದ್ರಾಮಾಯಣ ಮಂಗಳಂ' ಎಂಬ ಎರಡು ದಿವ್ಯ ಫಲಗಳನ್ನು ಹರಿದಾಸ ಮಹಿಳಾ ಸಾಹಿತ್ಯಕ್ಕೆ ಕೊಡುಗೆ ಯಾಗಿ ನೀಡಿತು.



(ಮುಂದುವರೆಯುತ್ತದೆ)

# ಶುಭ ತರುವ ಶೋಭನ ನಾಮ ಸಂವತ್ಸರ - ಯುಗಾದಿ

- ವೇದ ವಿದ್ವಾನ್ - ಶಿವರಾಮ ಜೋಗಳೇಕರ
82751 80641

ಚೈತ್ರೇಮಾಸಿ ಜಗತ್ ಬ್ರಹ್ಮಾ ಸಸರ್ಜ ಪ್ರಥಮೇಹನಿ ।
ಶುಕ್ಲ ಪಕ್ಷೇ ಸಮಗ್ರಂತು ತಥಾ ಸೂರ್ಯೋದಯೇ ಸತಿ ॥

ಬ್ರಹ್ಮನು ಈ ಜಗತ್ತನ್ನು ಚೈತ್ರಮಾಸದ ಮೊದಲನೆಯ ದಿನ ಸೃಷ್ಟಿಸಿದನು. ಇದು ಶುಕ್ಲ ಪಕ್ಷದ ಪ್ರತಿಪದೆಯಾಗಿತ್ತು. ಇದೇ ಯುಗಾದಿ ಪಾಡ್ಯ. ಈ ದಿನದಿಂದಲೇ ಚಾಂದ್ರಮಾನ ಸಂವತ್ಸರಗಳ ಪ್ರಾರಂಭವಾಯಿತು. ಇಂದು ದಿನ, ಮಾಸ, ವರ್ಷ ಇತ್ಯಾದಿ ಕಾಲಗಣನೆಯು ಪ್ರಾರಂಭವಾದ ದಿನ. ಇಡೀ ವರ್ಷಕ್ಕೆ ಬೇಕಾದ ಯೋಜನೆಯನ್ನು ಹಾಕಿಕೊಂಡು ಅದನ್ನು ಅನುಸರಿಸುವ ಶುಭ ಸಂಕಲ್ಪವನ್ನು ಮಾಡಿಕೊಳ್ಳುವ ದಿನ. ಈ ದಿನದಂದು ಯಾವ ವಾರ ಇರುತ್ತದೆಯೋ ಅದರ ಗ್ರಹವನ್ನೇ ಇಡೀ ವರ್ಷದ ಅಧಿಪತಿ ಎಂದು ಕರೆಯುತ್ತಾರೆ.

ಯುಗ ಎಂದರೆ 'ನೂತನ ವರ್ಷ' ಆದಿ ಎಂದರೆ ಆರಂಭ ಯುಗಾದಿ ಹತ್ತು ಹಲವು ಪರಂಪರೆಯ ಆರಂಭ ದಿನ. ವರ್ಷದ ಮೂರೂವರೆ ಶುಭದಿನಗಳಲ್ಲಿ ಮೊದಲ ಮೂಹೂರ್ತದಿನ, ''ಋತೂನಾಂ ಕುಸುಮಾಕರಃ'' ಎಂಬಂತೆ ಋತುರಾಜ ವಸಂತದ ಶುಭಾಗಮನ ದಿನ. ಯುಗಾದಿಯೆಂದರೆ ಸೃಷ್ಟಿಯ ಆರಂಭ ಆರಂಭವಾದುದಕ್ಕೆ ಅಂತ್ಯ ಇದ್ದೆ ಇದೆ. ಅಂತ್ಯವನ್ನು ಪ್ರಳಯವೆಂದೂ ಪ್ರಾರಂಭವನ್ನು ಸೃಷ್ಟಿಯೆಂದು ಹೇಳಲಾಗಿದೆ. ನಾಶವನ್ನು ನಿತ್ಯ ಪ್ರಳಯ, ನೈಮಿತ್ತಕ ಪ್ರಳಯ, ಪ್ರಾಕೃತಿಕ ಪ್ರಳಯ ಮತ್ತು ಆತ್ಯಂತಿಕ ಪ್ರಳಯವೆಂದು ನಾಲ್ಕು ವಿಧಗಳಲ್ಲಿ ಹೇಳಲಾಗಿದೆ. ಪರಮಾತ್ಮನ ಸೃಷ್ಟಿಯು ನಿತ್ಯ ನಿರಂತರ ಪ್ರಕ್ರಿಯೆ, ಪ್ರತಿಯೊಂದು ಜೀವಿಯೂ ಜನ್ಮದಾರಂಭಿಸಿ ಮರಣದವರೆಗೂ ಪೂರ್ವಾವಸ್ಥೆಯನ್ನು ತೊರೆಯುತ್ತ ಉತ್ತರಾವಸ್ಥೆಯನ್ನು ಪಡೆಯುತ್ತಲೇ ಇರುತ್ತದೆ.

"ನವೋ ನವೋ ಭವತಿ ಜಾಯಮಾನಃ" ಹುಟ್ಟಿದವನು ಅನುದಿನವೂ ಹೊಸಬನಾಗುತ್ತಿರುತ್ತಾನೆಂದು ವೇದಗಳು ಹೇಳುತ್ತವೆ. ಈ ನಿತ್ಯ ವಿನೂತನ ನವ ಸೃಷ್ಟಿಯ ಪ್ರಾರಂಭವೇ ಯುಗಾದಿವೆಂಬುದು ಗಮನಾರ್ಹ. ನೂತನ ಸಂವತ್ಸರ ಒಂದು ಸಂಭ್ರಮದ ಉತ್ಸವ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ, ಅದೊಂದು ನೂತನ ಪಯಣ. ಪ್ರತಿವರ್ಷ ಪಂಚಾಂಗ ಬದಲಾಗುತ್ತದೆ. ಆದರೆ ನಮ್ಮ ಜೀವನ ಮಾತ್ರ ಹಾಗೆಯೇ ಇರುತ್ತದೆ ಎಂಬುದು ದಿಟ, ಹೊಸ ವರ್ಷ (ಚಾಂದ್ರಮಾನ) ಯುಗಾದಿ ಬದುಕಿನ ಪ್ರತಿ ಪುಟದ ಪುಸ್ತಕ ತೆಗೆದುಕೊಳ್ಳಲಿದೆ.

ಇನ್ನು ವಾರಾಧಿಪನ ಪೂಜೆ, ಶ್ರದ್ಧಾ - ಭಕ್ತಿಯಿಂದ ಮಾಡಿ, ಆ ದಿನ ಮನೆ, ಮಂದಿರಗಳನ್ನು ತೋರಣ, ಪತಾಕೆಗಳಿಂದ ಅಲಂಕರಿಸಬೇಕು. ಅಭ್ಯಂಗಸ್ನಾನಮಾಡಿ



ಪಂಚಾಂಗ ಶ್ರವಣ. ದಕ್ಷಿಣಾಪ್ರದಾನ, ಬೇವಿನ ಚಿಗುರೆಲೆಗಳನ್ನು ಬೆಲ್ಲ ಮೆಣಸು ಮುಂತಾದ ಪದಾರ್ಥಗಳೊಡನೆ ಸೇವಿಸುವುದು ಅಂದು ಶ್ರೀರಾಮನನ್ನು ಧ್ಯಾನಿಸುತ್ತ ತೈಲಾಭ್ಯಂಗಾದಿಗಳನ್ನು ಮಾಡಿ ಗುರುಹಿರಿಯರಿಗೆ ನಮಸ್ಕರಿಸಿ ಕುಲದೇವತಾ ಪೂಜೆ ಮಾಡಿ ಹೊಸ ಬಟ್ಟೆಯನ್ನು ಧರಿಸಿ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳಬೇಕು ಇದನ್ನು ಆತ್ಮಾವಲೋಕನವೆನ್ನುತ್ತಾರೆ.

**ಕಾಲವಿಚಾರ**

ಚಾಂದ್ರಮಾನಯುಗಾದಿಯನ್ನು ಚೈತ್ರಶುದ್ಧ ಪ್ರತಿಪತ್ (ಪ್ರಥಮಾ) ತಿಥಿಯಲ್ಲಿ ಆಚರಿಸಬೇಕು. ಆ ದಿವಸ ಪ್ರಥಮಾ ತಿಥಿಯು ಸೂರ್ಯೋದಯವನ್ನು ವ್ಯಾಪಿಸಿರಬೇಕು. ಒಂದು ಪಕ್ಷ ಸೂರ್ಯೋದಯ ಸಮಯದಲ್ಲಿ ಪ್ರಥಮಾ ತಿಥಿಯು ಎರಡು ದಿನಗಳಲ್ಲಿಯೂ ಇದ್ದರೆ ಅಥವಾ ಎರಡೂ ದಿನಗಳಲ್ಲಿಯೂ ಇಲ್ಲದೆ ಇದ್ದರೆ ಆಗ ಯಾವ ದಿನದಲ್ಲಿ ಯುಗಾದಿ ಎಂಬುದು ಪ್ರಶ್ನೆ ಆಗ ಮೊದಲನೆಯ ದಿನದಲ್ಲಿಯೇ, ಎಂಬುದು ಉತ್ತರ.

ವತ್ಸರಾದೌ ವಸನ್ತಾದೌ ಬಲಿರಾಜ್ಯೇ ತಥೈವಚ ।
ಪೂರ್ವ ವಿದ್ಧೈವ ಕರ್ತವ್ಯಾ ಪ್ರತಿಪತ್ ಸರ್ವದಾ ಬುಧೈಃ
(ನಿರ್ಣಯಸಿಂಧು, ವೃ, ವಾಸಿಷ್ಠವಚನ)

ಮಲಮಾಸವು ದೋಷದ ಮಾಸ, ಚೈತ್ರಮಾಸವು ಮಲಮಾಸದಲ್ಲಿ ಬಂದರೆ ಆಗ ಯುಗಾದಿಯನ್ನು ಆ ಮಲಮಾಸದಲ್ಲಿಯೇ ಮಾಡಬೇಕೆ? ಅಥವಾ ಶುದ್ಧ ಮಾಸದಲ್ಲಿ ಮಾಡಬೇಕೇ? ಎಂದರೆ 1) ವರ್ಷದ ಆರಂಭವು ಮಲಮಾಸದ ಪ್ರಥಮೆಯಲ್ಲೇ ಆದರೆ ಅದರ ಅಂಗವಾದ ಅಭ್ಯಂಗ ಧ್ವಜ ಏರಿಸುವುದು ಪಂಚಾಂಗ ಶ್ರವಣ, ಬೇವಿನ ಎಲೆ ಪ್ರಾಶನ ಮುಂತಾದವುಗಳನ್ನು ಮಾತ್ರ ಶುದ್ಧ ಮಾಸದ ಪ್ರಥಮೆಯಲ್ಲಿ ಮಾಡಬೇಕು ಎಂದು ಒಂದು ಮತ. ಇಲ್ಲಿ ಧರ್ಮಸಿಂಧುವಿನ ಮತ ಗಮನಿಸೋಣ."ಪ್ರತಿ ಗೃಹಂ ಧ್ವಜಾರೋಹಣಂ, ನಿಂಬಪತ್ರಾಶನಂ, ವತ್ಸರಾದಿ ಫಲ ಶ್ರವಣಂ ಅಭ್ಯಂಗಶ್ಚ ಶುದ್ಧಮಾಸ ಪ್ರತಿಪದಿಕಾರ್ಯಃ"ಅಭ್ಯಂಗವನ್ನೂ, ಹೊಸ ವರ್ಷದ ಸಂಕಲ್ಪವನ್ನೂ ಮಲಮಾಸದಲ್ಲಿಯೇ ಮಾಡ ಬೇಕು-ಎಂದು ಕೆಲವರ ಅಭಿಪ್ರಾಯ. ಮಂಗಳ ಸಮಾರಂಭಗಳೆಲ್ಲಕ್ಕೂ ಶುದ್ಧಮಾಸವು ಪ್ರಶಸ್ತವೆಂಬ ಅಭಿಪ್ರಾಯ ನಿರ್ಣಯಸಿಂಧುವಿನದು.

ರಾಮಪೂಜೆ ಅಥವಾ ದುರ್ಗಾಪೂಜೆಯನ್ನು ಪ್ರಾರಂಭಿಸುವ ವಸಂತನವರಾತ್ರವು ಅಂದಿನಿಂದ ಪ್ರಾರಂಭವಾಗುತ್ತದೆ. ಪ್ರತಿ ಸಂವತ್ಸರದಲ್ಲೂ ಅತ್ಯಂತ ಪವಿತ್ರವಾಗಿರುವ ಮುಹೂರ್ತಗಳಲ್ಲಿ ಯುಗಾದಿಯೂ ಒಂದು ಉತ್ತಮ ಮುಹೂರ್ತ ಎಂಬ ಭಾವನೆ ಇದೆ. ವೈದಿಕ ಸಂಪ್ರದಾಯದವರು ಮಾತ್ರವಲ್ಲದೇ ಇರಾನಿಗರೂ ಕೂಡ ತಮ್ಮ ವರ್ಷ ಪ್ರಾರಂಭವನ್ನು ಈ ದಿನದಿಂದಲೇ ಮಾಡಿ ಅದನ್ನು "ಸೌರೋಜ" ಎಂದು ಕರೆಯುತ್ತಾರೆ. ಉತ್ತರ ಭಾರತದಲ್ಲಿ ವಿಕ್ರಮಾದಿತ್ಯನು ಪ್ರಾರಂಭಿಸಿದನೆಂದು ಹೇಳುವ ಶಕೆ ಮತ್ತು ದಕ್ಷಿಣ ಭಾರತದಲ್ಲಿ ಶಾಲೀವಾಹನನ ಹೆಸರಿನಲ್ಲಿರುವ ಶಕೆಯು ಪ್ರಾರಂಭವಾಗುವುದು ಈ ಚೈತ್ರ ಶುಕ್ಲ ಪ್ರಥಮೇಯಿಂದಲೇ.

**ವಿಕ್ರಮ ಶಕೆ ಪ್ರಾರಂಭ :**

ವಿಕ್ರಮ ಸಂವತ್ಸರ ಅಥವಾ ವಿಕ್ರಮ ಕ್ಯಾಲೆಂಡರ್ ಭಾರತ ಉಪಖಂಡ ಮತ್ತು ನೇಪಾಳದಲ್ಲಿ ಬಳಕೆಯಲ್ಲಿರುವ ಒಂದು ಚಾರಿತ್ರಿಕ ಹಿಂದೂ ಕ್ಯಾಲೆಂಡರ್ ಆಗಿದೆ. ವಿಕ್ರಮ ಸಂವತ್ ಚಾಂದ್ರಮಾಸ ಮತ್ತು ಸೌರಮಂಡಲದ ವರ್ಷಗಳನ್ನು ಬಳಸುತ್ತದೆ. ಇದರ ಬಳಕೆಯ ಉಲ್ಲೇಖಗಳನ್ನು ಹಲವಾರು ಪ್ರಾಚೀನ ಮತ್ತು ಮಧ್ಯಕಾಲಿನ ಶಾಸನಗಳಲ್ಲಿ ಕಾಣಬಹುದು. ಉಜ್ಜಯಿನಿಯ ರಾಜ ವಿಕ್ರಮಾದಿತ್ಯನು ಶಕರನ್ನು ಸೋಲಿಸಿದ ಬಳಿಕ ವಿಕ್ರಮ ಶಕೆಯನ್ನು ಸ್ಥಾಪಿಸಿದನು. ಕ್ರಿ.ಪೂ. 56 ರಲ್ಲಿ ಪೂರ್ಣಿಮಾಂತದಲ್ಲಿ ಕ್ರಿ.ಪೂ. 57 -56 ರಲ್ಲಿ ಅಮಾಂತದ ಪದ್ಧತಿಯಲ್ಲಿ ವಿಶ್ರಮ ಶಕೆಯ ಉಲ್ಲೇಖ 842 ರಿಂದ ಇದೆ. ಚೈತ್ರಮಾಸದಿಂದ ವಿಕ್ರಮಸಂವತ್ಸರದ ಹಿಂದೂ ಹೊಸವರ್ಷ ಪ್ರಾರಂಭ, ಹಬ್ಬಗಳು ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳು ಸರಿಯಾಗಿ ಋತುಗಳಲ್ಲಿ ಬರುವಂತೆ ವೈಜ್ಞಾನಿಕ ರೀತಿಯಲ್ಲಿ ಅಧಿಕ ಮಾಸದ ಕಲ್ಪನೆಯನ್ನು ಪ್ರಾಚೀನರು ಬಹು ಪರಾಂಬರಿಸಿ ನೀಡಿದ್ದಾರೆ. ಮೂರು ವರ್ಷಗಳಿಗೊಮ್ಮೆ ಅಥವಾ 19 ವರ್ಷಗಳಲ್ಲಿ 7 ಬಾರಿ ಹೆಚ್ಚುವರಿ ತಿಂಗಳು ಅಧಿಕ ಮಾಸವನ್ನು ಆಚರಿಸುವ ಪದ್ಧತಿ ಇದೆ. ಭಾರತೀಯ ಕ್ಯಾಲೆಂಡರುಗಳಲ್ಲಿ ಋತುಗಳು ಸೂರ್ಯಾಧಾರಿತ, ಮಾಸಗಳು ಚಂದ್ರಾಧಾರಿತ, ದಿನಗಳು ಸೂರ್ಯ ಚಂದ್ರಾಧಾರಿತ, ಉತ್ತರ ದಕ್ಷಿಣ ಭಾರತದಲ್ಲಿ ಹೊಸವರ್ಷ ಚೈತ್ರ ಶುಕ್ಲದಲ್ಲಿ ಆರಂಭ ಗುಜರಾತಿನಲ್ಲಿ ದೀಪಾವಳಿಯ

ಎರಡನೇ ದಿನವನ್ನು ವಿಕ್ರಮ ಸಂವತ್ಸರದ ಮೊದಲದಿನ, ಕೆಲವು ಕಡೆ ಕಾರ್ತೀಕ ಮಾಸದ ಮೊದಲ ದಿನವನ್ನು ಹೊಸ ವರ್ಷ ಎಂದು ಆಚರಿಸುವ ಪದ್ಧತಿಯಿದೆ.

ಒಂದು ಕಥೆಯಂತೆ ರಾಜ ಗರುಡ ಬಿಲ್ಲನು ಸರಸ್ವತಿ ಎಂಬ ಸನ್ಯಾಸಿಯನ್ನು ಅಪಹರಿಸಿದನು. ಆಕೆ ಪ್ರಸಿದ್ಧ ಸನ್ಯಾಸಿ ಕಳಕಾಚಾರ್ಯನ ಸಹೋದರಿ, ಅಸಹಾಯಕ ಸನ್ಯಾಸಿಯು ಗರುಡಬಿಲ್ಲನನ್ನು ಸೋಲಿಸುವಂತೆ ಶಕರಾಜನ ಸಹಾಯ ಕೋರಿದಳಂತೆ. ಶಕರಾಜರು ಅವನನ್ನು ಸೋಲಿಸಿ ವಶಪಡಿಸಿಕೊಂಡರು. ಬಳಿಕ ಬಿಡುಗಡೆಗೊಂಡ ಗರುಡಬಿಲ್ಲ ಅರಣ್ಯಕ್ಕೆ ತೆರಳಿ ಅಲ್ಲೇ ವಾಸಕ್ಕೆ ತೊಡಗಿದಾಗ ಹುಲಿಯ ಬಾಯಿಗೆ ತುತ್ತಾಗಿ ಮರಣಹೊಂದಿದ.ಅವನ ಮಗನೇ ವಿಕ್ರಮಾದಿತ್ಯ. ಅರಣ್ಯದಲ್ಲೇ ಬೆಳೆದರೂ, ಉಜ್ಜನಿಯ ಮೇಲೆ ದಾಳಿಮಾಡಿ ಶಕರನ್ನು ಹೊರದಬ್ಬಿದನು.ಈ ಘಟನೆಯನ್ನು ಆಚರಿ ಸಲು ವಿಕ್ರಮ ಶಕೆ ಅಥವಾ ಸಂವತ್ಸರದ ಪದ್ಧತಿಯನ್ನು ಆರಂಭಿಸಿದರು. ಭಾರತದಲ್ಲಿ ಶಕ ಸಂವತ್ ಮತ್ತು ವಿಕ್ರಮ ಸಂವತ್ ಸಾಮಾನ್ಯವಾಗಿ ಬಳಸಲ್ಪಡುವ ಪದ್ಧತಿ, ಶಕ ಸಂವತ್ ಭಾರತದ ರಾಷ್ಟ್ರೀಯ ಕ್ಯಾಲೆಂಡರ್ ಇದು ಆರಂಭಗೊಂಡಿದ್ದು ಕ್ರಿ.ಪೂ.78 ರಲ್ಲಿ ವಿಕ್ರಮ ಸಂವತ್ ಕ್ರಿ.ಪೂ. 57 ರಲ್ಲಿ ಈ ಎರಡು ಪದ್ಧತಿಗಳು ಚಂದ್ರಮಾನಕ್ಕನುಗುಣವಾಗಿದೆ.

(ಪರಶುರಾಮ ಶಕೆ ಆರಂಭಗೊಂಡಿದ್ದು ಕ್ರಿ.ಪೂ. 824 ರ ಸೆಪ್ಟೆಂಬರ್‌ನಲ್ಲಿ, ಮಧ್ವಶಕೆಯ ಉಲ್ಲೇಖವು ಅದರ ನಂತರ ಇರಬಹುದು.) ಅಥ ಅಷ್ಟಾದಶ ಸಹಸ್ರ ಪರಿಮಿತೇ ಶಾಲಿವಾಹನ ಶಕೇ 1945 ನೇ ವಿಕ್ರಮ ಸಂವತ್ 2079 - 80 ಶೋಭನ ನಾಮಸಂವತ್ಸರೇ.. ಚೈತ್ರ ಶುಕ್ಲ ಪ್ರತಿ ಪದಿ....ವಾಸರೇ... ಮೇಷ ಸಂಕ್ರಾಂತೇ... ಇತ್ಯಾದಿ ನೂತನ ವರ್ಷದ ಫಲಸಾರ ಪಠಿಸುವುದು, ಶ್ರವಣ ಮಾಡುವುದು ವಾಡಿಕೆ.

**ಇನ್ನು ಕೊನೆಯದಾಗಿ ಕಾಲಗಣನೆ**

ಬ್ರಹ್ಮನ ಆಯುಷ್ಯದ ನೂರುವರ್ಷಗಳಲ್ಲಿ ಪದ್ಮ ಕಲ್ಪದ ಮೊದಲ ಪರಾರ್ಧ ಮುಗಿದು ದ್ವಿತೀಯ ಪರಾರ್ಧದ ಆರು ಮನ್ವಂತಗಳು ಮುಗಿದು ಏಳನೇ ವೈವಸ್ವತ ಮನ್ವಂತರದಲ್ಲಿ 27 ಮಹಾಯುಗಚಕ್ರಗಳು ಕಳೆದು 28 ನೇ ಮಹಾಯುಗದಲ್ಲಿ ಕೃತ, ತ್ರೇತಾ,ದ್ವಾಪರಗಳು ಮುಗಿದು ಕಲಿಯುಗವು ನಡೆಯುತ್ತಿದೆ. ಕಲಿಯುಗ 4,32,000 ವರ್ಷಗಳಲ್ಲಿ ಪ್ರಕೃತ 5124 ವರ್ಷಗಳು ಕಳೆದು ಶಾಲೀವಾಹನ ಶಕವರ್ಷ 1945 ನೇ ಶೋಭನನಾಮಸಂವತ್ಸರ ಆರಂಭವಾಗಲಿದೆ.

ಭಾರತೀಯ ಕ್ಯಾಲೆಂಡರನಲ್ಲಿ ಶಾಲಿವಾಹನ ಶಕೆಯ ಉಲ್ಲೇಖವನ್ನು ಕಾಣಬಹುದು, ಗೌತಮಿವರ್ಷ ಶಾತಕರ್ಣಿ ಕ್ರಿ.ಶ. 78ರಲ್ಲಿ ಪ್ರಾರಂಭಿಸಿದ್ದನು. ಗ್ರಗೋಲಿಯನ್ ಪದ್ಧತಿಗೂ ಶಾಲಿವಾಹನ ಶಕವರ್ಷಕ್ಕೂ 78 ವರ್ಷಗಳ ವ್ಯತ್ಯಾಸ. ಶಾಲಿವಾಹನ ಶಕ 1945 ರ ಪ್ರಸ್ತುತ ವರ್ಷಕ್ಕೆ 78 ವರ್ಷ ಕೂಡಿದರೆ-2023 ಎಂಬುದು ಗಮನಾರ್ಹ. ಬಹುತೇಕ ಹಿಂದೂ ನೂತನ ವರ್ಷ ಉತ್ಸವಗಳು ವಸಂತ ಮಾಸದಾರಂಭದಲ್ಲಿ ಬರುತ್ತದೆ. ನಿಸರ್ಗವು ಭೂಮಿಯಲ್ಲಿ ಧಾರಾಳವಾಗಿ ಹಸಿರು ಮತ್ತು ಹೂವು ಹಣ್ಣನ್ನು ಕರುಣಿಸುವ ವಸಂತಕಾಲ, ಹೊಸ ಕೃಷಿ ಚಕ್ರದ ಕಾಲ. ಈ ನೂತನ ವರ್ಷವಾದ ಶೋಭನ ಸಂವತ್ಸರವು ಎಲ್ಲರಿಗೂ ಶುಭತರಲಿ ಎಂದು ಹಾರೈಕೆ. !



## ತಿದ್ದುಪಡಿ

**ಫೆಬ್ರವರಿ ತಿಂಗಳಿನಲ್ಲಿ ಪ್ರಕಟವಾದ ಸಕಲರಿಂದ ಪೂಜ್ಯರು ಶ್ರೀ ರಾಘವೇಂದ್ರರು ಎಂಬ ಲೇಖನದಲ್ಲಿ ಶ್ರೀರಾಯರು ಬೃಂದಾವನಸ್ಥರಾದ ಇಸವಿ ಮುದ್ರಣ ದೋಷದಿಂದ 1971 ಎಂದು ಅಚ್ಚಾಗಿದೆ. ಇದನ್ನು 1671 ಎಂದು ಓದಿಕೊಳ್ಳಬೇಕಾಗಿ ವಿನಂತಿ. ಮುದ್ರಣ ದೋಷಕ್ಕಾಗಿ ವಿಷಾದಿಸುತ್ತೇವೆ.**

# ಹೊಸ ವರ್ಷದ ಯುಗಾದಿ
# ಸೌರಮಾನ - ಚಂದ್ರಮಾನ ಯುಗಾದಿ

-ಹನುಮಂತ. ಮ. ದೇಶಕುಲಕರ್ಣಿ
94803 64915



ಯುಗಾದಿ ಎಂಬ ಪದವೇ ಹೇಳುವಂತೆ. 'ಯುಗಸ್ಯ. ಆದಿ '' ಯುಗಾದಿ, ಯುಗದ ಪ್ರಾರಂಭ ಎಂದರ್ಥ. ಯುಗ ಎಂದರೆ ಜೋಡಿ - ನೊಗ ಎಂಬ ಅರ್ಥಗಳಿವೆ. ಪ್ರಕೃತಿ-ಪುರುಷ ಶಕ್ತಿಗಳು ಕೂಡಿ ಸೃಷ್ಟಿ ಪ್ರಾರಂಭಿಸಿದ ದಿನ. ಯುಗಗಳು ನಾಲ್ಕು, ಸತ್ಯಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಎಂದು. ಬ್ರಹ್ಮನು ಈ ದಿನ ಜಗತ್ತನ್ನು ಸೃಷ್ಟಿಸಿದನು. ಅವನು ಪ್ರಾರಂಭಿಸಿದ್ದು ಸತ್ಯಯುಗವನ್ನು ಅಂದರೆ ಸತ್ಯ ಧರ್ಮಮಯವಾದ ಬಾಳಾಟಕ್ಕೆ ತಕ್ಕ ಯೋಜನೆ ಹಾಕಿಕೊಂಡು ಅದನ್ನು ಪ್ರಾರಂಭಿಸುವುದಕ್ಕೆ ಅನುಗುಣವಾದ ಧರ್ಮವುಳ್ಳ ದಿನವಾಗಿದೆ ಎನ್ನಲಾಗಿದೆ.

ಪ್ರಸ್ತುತ ಯುಗಾದಿ ಹಬ್ಬದಂದು ಪ್ರಕೃತಿಯಲ್ಲಿ ಹೊಸತನ - ಹೊಸ ಚಿಗುರುಗಳು ಮೊಳೆಯುವ ಕಾಲ. ಹೂವು ಬಿರಿಯುವ ಕಾಲ.ಎಲ್ಲಾ ಜೀವ-ಜಂತುಗಳಲ್ಲಿಯೂ ನವನವೀನತೆಯ ಕಾಲ. ಚೈತ್ರಮಾಸಕ್ಕೆ ಪ್ರಥಮ ತಿಥಿ. ಪ್ರಥಮ ಋತುವಿಗೆ , ಹೊಸ ಸಂವತ್ಸರಕ್ಕೆ ಪ್ರಥಮ ದಿನ. ಇಂತಹ ಶುಭ ದಿನದಂದು ನಮ್ಮ ಶರೀರದಲ್ಲಿ ನವೀನತೆ ಉಂಟಾಗಲು ಎಳ್ಳೆಣ್ಣೆಯಿಂದ ಅಭ್ಯಂಜನ ಸ್ನಾನವನ್ನು ಮಾಡಲಾಗುತ್ತದೆ.

ಸಂಕ್ರಾಂತಿ ದಿನದಂದು '' ಎಳ್ಳುಬೆಲ್ಲ ತಿಂದು ಒಳ್ಳೆ ಮಾತಾಡಿ '' ಎಂದು ಹೇಳುವಂತೆ ಯುಗಾದಿ ದಿನದಂದು ಬೇವು ಬೆಲ್ಲ ತಿಂದು ಜೀವನದ ಸಿಹಿಕಹಿ ಸಂದೇಶವನ್ನು ತಿಳಿಯುವಂತಾಗಲಿ ಎಂಬುದೇ ಹೊಸ ಪರ್ವದ ಉದ್ದೇಶ.ಮುಂಜಾನೆ ಸೂರ್ಯ ಹುಟ್ಟುವುದಕ್ಕೂ ಮೊದಲೇ ಎದ್ದು ಮೈಗೆ ಎಣ್ಣೆಯನ್ನು ತಿಕ್ಕಿ, ಬಿಸಿ ನೀರಿನಲ್ಲಿ ಮಿಂದು,ಹೊಸ್ತಿಲು ತೊಳೆದು ಕುಂಕುಮ ಹಚ್ಚಿ, ಬಾಗಿಲಿಗೆ ತೋರಣ ಕಟ್ಟಿ, ದೇವರಿಗೆ ಪೂಜೆ ಕೆಲಸಗಳನ್ನು ನೆರವೇರಿಸಿ ಬಂಧುಗಳೊಂದಿಗೆ ಬೇವು-ಬೆಲ್ಲ ಹಂಚಿಕೊಂಡು ತಿನ್ನುವ ನಲಿವಿನ ಹೊತ್ತು. ಹೀಗೆ ಎಳ್ಳು ಬೆಲ್ಲ ತಿನ್ನುವಾಗ ಎಲ್ಲರಿಗೂ ಒಳ್ಳೆಯ ಆರೋಗ್ಯ. ಸಕಲ ಸಿರಿವಂತಿಕೆ, ನಲಿವಿನ ಬದುಕು ಸಿಗಲೆಂದು ಬಯಸುವುದು ವಾಡಿಕೆ.

### ಋತುಗಳು ಪರಿವರ್ತನೆ :

ಋತುಗಳು ಪರಿವರ್ತನೆ ಹೊಂದುವ ಕಾಲ. ಆರು ಋತುಗಳಾದ ವಸಂತ, ಗ್ರೀಷ್ಮ, ಶರತ್, ಹೇಮಂತ ಹಾಗೂ ಶಿಶಿರಗಳಲ್ಲಿ ವಸಂತ, ಗ್ರೀಷ್ಮ ವರ್ಷ ಋತುಗಳು ದಕ್ಷಿಣಾಯನದಲ್ಲಿ ಬರುವ ಋತುಗಳು, ಇದನ್ನು ಆಯುರ್ವೇದದಲ್ಲಿ ವಿಸರ್ಗ ಕಾಲ ಎಂಬುದಾಗಿ ಪರಿಗಣಿಸಿದ್ದಾರೆ. ಅಂದರೆ ಶರತ್, ಹೇಮಂತ, ಶಿಶಿರ ಋತುಗಳು, ಉತ್ತಾರಾಯಣದಲ್ಲಿ ಬರುವ ಋತುಗಳು.

### ಎರಡು ರೀತಿ ಆಚರಣೆ :

ಯುಗಾದಿಯ ವಿಚಾರದಲ್ಲಿ ಜನರಲ್ಲಿ ದ್ವಂದ್ವಗೊಂದಲ ಇದೆ. ಯುಗಾದಿಯನ್ನು ಆಚರಿಸುವ ಕೆಲವರು ಚೈತ್ರ, ಶುದ್ಧ ಪ್ರತಿಪತ್ ಎಂದು ಆಚರಿಸುತ್ತಾರೆ. ಇನ್ನು ಕೆಲವರು ಮೇಷ, ಸಂಕ್ರಮಣದ ದಿವಸದಲ್ಲಿ ಯುಗಾದಿ ಆಚರಿಸುತ್ತಾರೆ. ಈ ಗೊಂದಲ ದ್ವಂದ್ವಗಳು ಏಕೆ ಎಂಬ ಪ್ರಶ್ನೆ ಮೂಡುತ್ತದೆ.

ಭಾರತದಲ್ಲಿ ಈ ಎರಡೂ ಯುಗಾದಿಯ ಎರಡು ಭಿನ್ನ ದಿನಗಳಲ್ಲಿ ಆಚರಿಸುವುದು ವಾಡಿಕೆಯಲ್ಲಿದೆ. ಬ್ರಹ್ಮನು ಸೃಷ್ಟಿಸಿದ ದಿನದಂದು ಗ್ರಹ, ನಕ್ಷತ್ರಗಳೆಲ್ಲವೂ ಚಲಿಸಲು ಪ್ರಾರಂಭವಾಯಿತು. ಚಂದ್ರನ ಚಲನೆಯನ್ನೇ ಆಧರಿಸಿ, ಚಂದ್ರನನ್ನು ನಾವು ಪಕ್ಷದ ಗಣನೆಯ ಮೂಲಕ ಗಣನೆ ಮಾಡುತ್ತೇವೆ. ಚೈತ್ರ ಮಾಸದ, ಶುಕ್ಲಪಕ್ಷದ ಪಾಡ್ಯ ದಿನಕ್ಕೆ ಚಂದ್ರನು ಭೂಮಿಯೊಂದಿಗೆ ಸೂರ್ಯನನ್ನು ಸುತ್ತಿ ಒಂದು ಆವರ್ತ ಸಮಾಪ್ತಿಯಾಗಿ ಮತ್ತೊಂದು ಆವರ್ತ ಪ್ರಾರಂಭವಾಗುತ್ತದೆ ಎಂಬ ಸೂಕ್ತಿಯಂತೆ ಚೈತ್ರ ಮಾಸದ ಸೂರ್ಯೋದಯವಾದೊಡನೆ, ಬ್ರಹ್ಮನು ಸಂಪೂರ್ಣ ಜಗತ್ತನ್ನು ಸೃಷ್ಟಿಸಿದನಂತೆ. ಯುಗಾದಿಯಲ್ಲಿ ಚಾಂದ್ರಮಾನ ಯುಗಾದಿ, ಸೌರಮಾನ ಯುಗಾದಿ, ಎಂಬುದಾಗಿ ಎರಡು ವಿಧ. ಚಂದ್ರನ ಬೆಳಕಿಗೆ ಮತ್ತು ಚಲನೆಗೆ ಸೂರ್ಯನೇ ಆಧಾರವೆಂದಾದರೂ ಪ್ರಾಚೀನರು ಚಾಂದ್ರಮಾನದ ಲೆಕ್ಕಾಚಾರವನ್ನು ರೂಪಿಸಿದರು.

ಭೂಮಿಯಲ್ಲಾಗುವ ಕಾಲ ಪರಿವರ್ತನೆಗೆ ಸೂರ್ಯನೇ ಕಾರಣವೆಂದು ಸೌರಮಾನ ತಿಂಗಳನ್ನು ಲೆಕ್ಕಹಾಕಿ ಸೂರ್ಯನು ಮೇಷರಾಶಿಗೆ ಬಂದಾಗ ಸೌರಮಾನ ಯುಗಾದಿ (ವಿಷ) ಆರಂಭವಾಯಿತು. ನಮ್ಮ ಪಂಚಾಂಗಗಳು ಚಾಂದ್ರಮಾನ ಯುಗಾದಿಯಂದು ಆರಂಭವಾಗುತ್ತದೆ. ತಿಥಿ, ವಾರ, ನಕ್ಷತ್ರ, ಯೋಗ, ಕರಣ ಎಂಬುದಾಗಿ ದಿನಕ್ಕೆ ಐದು ಅಂಗಗಳನ್ನು ರೂಪಿಸಿ ಪಂಚಾಂಗ ಎಂದು ಕರೆದರು.

## ಯುಗಾದಿಯ ವಿಶಿಷ್ಟತೆ :

ಯುಗಾದಿಯನ್ನು ಒಂದು ಪರ್ವ ಎಂದು ಕರೆಯುತ್ತಾರೆ. ಪರ್ವ ಎಂದರೆ ಗಿಣ್ಣು ಎಂದರ್ಥ. ಕಬ್ಬಿನ ಗಣಕಿಯಲ್ಲಿ ಗಿಣ್ಣುಗಳನ್ನು ನೋಡುತ್ತೇವೆ. ಈ ಗಿಣ್ಣುಗಳಿಗೆ ಪರ್ವ ಎಂದು ಹೆಸರು. ಇದು ಹಳೆಯದಕ್ಕೆ ಅಂತ್ಯ. ಮುಂದಿನದಕ್ಕೆ ಪ್ರಾರಂಭ. ಒಂದು ಸಂಧಿಯ ಕಾಲ. ಇಂತಹ ಸಂಧಿಕಾಲದಲ್ಲಿ ನಮ್ಮ ಶರೀರದಲ್ಲಿ ಭಗವತ್ ಕಾರ್ಯಕ್ಕೆ ಅನುಕೂಲತೆ ಏರ್ಪಡುತ್ತದೆ.

ಸಾತ್ವಿಕ ಪ್ರವೃತ್ತಿ ಹೆಚ್ಚಾಗಿ ಇರುವಂತಹ ಅಂತಹ ವಿಶೇಷ ದಿನಗಳಲ್ಲಿ ಯುಗಾದಿ ಒಂದು ರಾತ್ರಿ ಕಳೆದು ಹಗಲು, ಹಗಲು ಕಳೆದು ಮಧ್ಯಾಹ್ನ, ಮಧ್ಯಾಹ್ನ ಕಳೆದು ರಾತ್ರಿ ಹೀಗೆ ಒಂದು ದಿನದಲ್ಲಿ ಮೂರು ಸಂಧ್ಯಾಕಾಲಗಳು ಸಂಭವಿಸುತ್ತದೆ. ಈ ಸಂಧ್ಯಾಕಾಲಗಳು ಯೋಗಸಾಧನೆಗೆ, ಸಂಧ್ಯಾವಂದನೆಗೆ, ಧ್ಯಾನ, ಪ್ರಾರ್ಥನೆ, ಭಜನೆ ಪೂಜಾ, ಮಂಗಳಾರತಿಗೆ ಯೋಗ್ಯ ಕಾಲ ಸಂಧ್ಯಾ ಕಾಲದಲ್ಲಿ ಸಾತ್ವಿಕ ಪ್ರವೃತ್ತಿ ಹೆಚ್ಚಾಗಿ ಇರುವಂತಹ ಕಾಲ. ಹಾಗೆಯೇ ಇಡೀ ಒಂದು ವರ್ಷದಲ್ಲಿ ಆತ್ಮಸಾಧನೆಗೆ, ಭಗವಂತನ ಅನುಗ್ರಹಕ್ಕೆ ಯೋಗ್ಯ ಕಾಲಗಳು ಒದಗಿ ಬರುತ್ತದೆ.

ಯುಗಾದಿಯೆಂದರೆ ಹೊಸವರ್ಷದ ಆರಂಭದ ದಿನವಾದರೂ ಭಾರತದಲ್ಲಿ ಈ ದಿನವನ್ನು ಚಾಂದ್ರಮಾನ ಹಾಗೂ ಸೌರಮಾನ ಯುಗಾದಿ ಎಂದು ಬೇರೆ ಬೇರೆಯಾಗಿ ಆಚರಿಸುತ್ತಾರೆ. ಚಂದ್ರನ ಚಲನೆಯನ್ನಾಧರಿಸಿ ದಿನಗಣನೆ ಮಾಡುವುದು ಚಾಂದ್ರಮಾನ ಹಾಗೂ ಸೂರ್ಯನ ಚಲನೆಯನ್ನಾಧರಿಸಿ ಆಚರಿಸುವುದು ಸೂರ್ಯಮಾನ ಯುಗಾದಿಯಾಗಿದೆ.

## ಚಾಂದ್ರಮಾನ - ಸೌರಮಾನ ಯುಗಾದಿ :

ಮುಖ್ಯವಾಗಿ ಚಾಂದ್ರಮಾನ ಹಾಗೂ ಸೌರಮಾನ ಎಂಬ ಪ್ರಭೇದಗಳಿದ್ದು ಹಿಂದೂ ಧರ್ಮದ ವೇದಾಂಗ ಜ್ಯೋತಿಷ್ಯ ಶಾಸ್ತ್ರದಿಂದ ನಿರ್ಣಯಗೊಳ್ಳುತ್ತದೆ.ಚಂದ್ರನ ಚಲನೆಯನ್ನಾಧರಿಸಿ, ದಿನಗಣನೆ ಮಾಡುವುದನ್ನು ಚಾಂದ್ರಮಾನ ಹಾಗೂ ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಸೌರಮಾನ ಎನ್ನುತ್ತಾರೆ. ಕರ್ನಾಟಕದಲ್ಲಿ ಚಾಂದ್ರಮಾನ ಪದ್ಧತಿ ಮೊದಲಿನಿಂದ ರೂಢಿಯಲ್ಲಿದೆ.

ಚಂದ್ರನ ನಡೆಗೆ ಅನುಸಾರವಾಗಿ ಕಾಲ ಗಣನೆಮಾಡುವ ಗುಂಪು ಚಾಂದ್ರಮಾನ ಯುಗಾದಿಯೆಂದು ಆಚರಿಸುತ್ತಾರೆ. ಅಂತೆಯೇ ಸೂರ್ಯನು ಮೇಷ, ವೃಷಭ, ಮಿಥುನಾದಿ 12 ನಕ್ಷತ್ರಗಳ ಗುಚ್ಛವನ್ನು ಸಂಕ್ರಮಿಸುತ್ತಾನೆ. ಮೇಷ ಸಂಕ್ರಮಣದಂದು ಸೂರ್ಯನ ಒಂದು ಆವರ್ತನೆ ಮುಗಿಯುತ್ತದೆ. ಹೊಸ ಆವರ್ತ ಪ್ರಾರಂಭವಾಗುತ್ತದೆ.

ಈ ರೀತಿ ಸೂರ್ಯನ ಚಲನೆಯನ್ನಾಧರಿಸಿ ಕಾಲ ಗಣನೆಯಿಡುವ ಗುಂಪು ಸೌರಮಾನ ಯುಗಾದಿ ಎಂದು ಆಚರಿಸುತ್ತಾರೆ. ಅವರದ್ದು ಸರಿ, ಇವರದ್ದು ತಪ್ಪು ಎಂಬ ಗೊಂದಲಕ್ಕೆ ಇಲ್ಲಿ ಪ್ರಶ್ನೆಯೇ ಇಲ್ಲ. ಎರಡೂ ಸಮಂಜಸ. ಅವರ ಪೂರ್ವಜರು ಯಾವ ರೀತಿಯಲ್ಲಿ ಆಚರಿಸಿಕೊಂಡು ಬಂದಿರುತ್ತಾರೋ ಆ ದಿನವೇ ಅವರಿಗೆ ಪ್ರಾಶಸ್ತ್ಯ. ಹೆಚ್ಚಾಗಿ ಉತ್ತರ ಭಾರತದವರು ಸೌರಮಾನ ಯುಗಾದಿಯನ್ನು "ಚಿತ್ರವಿಪು'' ಎಂಬ ಹೆಸರಿನಲ್ಲಿ ಆಚರಿಸುತ್ತಾರೆ.

## ಶಾಲಿವಾಹನ ಶಕೆ:

ಯುಗಾದಿಯಂದು ಪಂಚಾಂಗ ಶ್ರವಣ ಮಾಡಿದವನಿಗೆ ಗಂಗಾಸ್ನಾನ ಮಾಡಿದ ಫಲ ದೊರೆಯುವುದಂತೆ. ಕ್ರಿಸ್ತಶಕ ಆರಂಭವಾಗಿ ಕೆಲ ವರ್ಷಗಳ ತರುವಾಯ ಶಾಲಿವಾಹನ ಶಕೆ ಆರಂಭವಾಗುತ್ತದೆ. ದಕ್ಷಿಣ ಭಾರತದಲ್ಲೆಲ್ಲಾ ಈ ಶಕೆ ಬಳಕೆಯಲ್ಲಿದೆ. ನಮ್ಮ ಪಂಚಾಂಗಗಳು ಈ ಶಕೆಯನ್ನೇ ಹೇಳುತ್ತವೆ. ಶಕರು ನಮ್ಮ ದೇಶದ ಮೇಲೆ ದಾಳಿ ಮಾಡಿದಾಗ ಆ ದಿನಗಳಲ್ಲಿ ನರ್ಮದಾ - ಕಾವೇರಿಗಳ ನಡುವೆ ರಾಜ್ಯವಾಳುತ್ತಿದ್ದ ಶಾಲಿವಾಹನ ಅವರ ಬಲವನ್ನು ಮುರಿದು ವಿಜಯಪತಾಕೆ ಹಾರಿಸಿದ. ಅದು ಚೈತ್ರ ಶುದ್ಧ ಪ್ರತಿ ಪದೆಯ ದಿನ. ಮುಂದೆ ಭಾರತದಲ್ಲಿ ಶಕರು ನಿರ್ನಾಮವಾದರು. ಶಾಲಿವಾಹನ ಬಂದನು ಎಂಬುದಾಗಿ ಚರಿತ್ರೆ ಹೇಳುತ್ತದೆ.

## ಕಾಲಗಣನೆ:

ಬ್ರಹ್ಮನ ಬದುಕಿನಲ್ಲಿ ಶ್ವೇತವರಾಹ ಕಲ್ಪವೆಂದು ಒಂದು ಹಗಲು. ಈ ಹಗಲಿನಲ್ಲಿ ಇದು ಏಳನೇ ವೈವಸ್ವತ ಮನ್ವಂತರ ಇಪ್ಪತ್ತೆಂಟನೇ ಮಹಾಯುಗದ ನಾಲ್ಕನೇ ಪಾದವಾದ ಕಲಿಯುಗದಲ್ಲಿ ಈ ಯುಗಾದಿಗೆ ಸಂದ ವರ್ಷಗಳು 5122 . ಕಲಿಯುಗದಲ್ಲಿ ಯುದಿಷ್ಠಿರ , ವಿಕ್ರಮಗಳೆಂಬ ಎರಡು ಶಕಗಳು, ಮುಗಿದು ಮೂರನೆಯದಾದ ಶಾಲಿವಾಹನ ಶಕದಲ್ಲಿ ಸಂದ ವರ್ಷಗಳು ಈ ದುರ್ಮುಖಿ ಸಂವತ್ಸರಕ್ಕೆ ಸಂದ ವರ್ಷಗಳು 1943 . ಈ ಸಲ ಬಂದ ನವ ಪ್ರತಿಯೊಂದು ಸಂವತ್ಸರದಲ್ಲೂ ಎರಡು ಅಯನಗಳು, ಮೂರುಕಾಲ ಭೇದಗಳು, ಆರು ಋತುಗಳು, ಹನ್ನೆರಡು ಮಾಸಗಳು. ಹೀಗೆ ಸಂವತ್ಸರದ ಹೆಸರು ಪ್ಲವನಾಮ ಸಂವತ್ಸರ. ವರ್ಷಕ್ಕೊಮ್ಮೆ ಪುನರಾವರ್ತಿಸುವ ನಿಸರ್ಗದ ಕಾಲಚಕ್ರ ನಿರಂತರ ಉರುಳುತ್ತಾ ಇದ್ದು ಅರಿತು ಬದುಕುವವನಿಗೆ ಜೀವನಾನುಭವ ನೀಡುತ್ತದೆ. ಒಳ್ಳೊಳ್ಳೆಯ ಸಂದೇಶಗಳನ್ನೂ ಕೊಡುತ್ತದೆ.

## ಚಾಂದ್ರಮಾನ:

ಚಾಂದ್ರಮಾನ ಮಾಸಾರಂಭದಿಂದಲೇ ಪಕ್ಷ ಮತ್ತು ತಿಥಿಗಳು ಪ್ರಾರಂಭವಾಗುತ್ತವೆ. ಅಮಾವಾಸ್ಯೆಯಾದ ಮರುದಿವಸದಿಂದ ಪೂರ್ಣಿಮೆ ತಿಥಿ ಪೂರ್ತಿ ಶುಕ್ಲಪಕ್ಷ. ಚಂದ್ರನಲ್ಲಿ ಶೌಕ್ಲ ವೃದ್ಧಿಗೊಳ್ಳುವುದರಿಂದ ಈ ಪಕ್ಷಕ್ಕೆ ಶುಕ್ಲಪಕ್ಷವೆಂಬ ಹೆಸರು ಬಂದಿದೆ. ಪೂರ್ಣಿಮಾ ತಿಥಿಯ ಮಾರನೆಯ ದಿವಸದಿಂದ

## ಯುಗಾದಿ ದಿನದಂದು ಬೇವು - ಬೆಲ್ಲವನ್ನು ತಿನ್ನುವಾಗ ಹೇಳುವ ಶ್ಲೋಕ

ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ।
ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ॥

ಅಮಾವಾಸ್ಯೆವರೆಗೆ ಚಂದ್ರನಲ್ಲಿ ಶೌಕ್ಲ ಕುಂದುತ್ತ ಕಪ್ಪು ಹೆಚ್ಚಾಗುವುದರಿಂದ ಇದಕ್ಕೆ ಕೃಷ್ಣ ಪಕ್ಷವೆಂಬ ಹೆಸರು ಬಂದಿದೆ.

ಚಂದ್ರನ ಸುತ್ತುವಿಕೆಯ ನಾಳುಗಳ ಲೆಕ್ಕಾಚಾರದ ಮೇಲೆ ಚಾಂದ್ರಮಾನ ಯುಗಾದಿ. ಚಂದ್ರನ ಪ್ರತಿ ಸುತ್ತಿಗೂ ಒಂದು ತಿಂಗಳು ಬೇಕು.ಹೀಗೆ ಒಟ್ಟು ಹನ್ನೆರಡು ಸುತ್ತಿಗೆ ಒಂದು ಏಡು. ಹೀಗೆ ಏಡಿನ ಮೊದಲ ದಿನವನ್ನು ಯುಗಾದಿಯಾಗಿ ಆಚರಿಸಲಾಗುತ್ತದೆ. ಈ ದಿನದಂದು ವಿಷ್ಣು ದೇವನು ಮೀನಿನ ರೂಪ (ಮತ್ಸ್ಯಾವತಾರ) ತಾಳಿದನೆಂದು ಕತೆಯಿದೆ. ಈ ದಿನವನ್ನು ಕರ್ನಾಟಕದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಯುಗಾದಿ ಎಂದು ಕರೆದರೆ, ಕೇರಳದಲ್ಲಿ ವಿಶು ಹಬ್ಬವೆಂದೂ, ಗೋವಾದಲ್ಲಿ ಸಂವತ್ಸರ ಪಾಡ್ವೊ,ತಮಿಳುನಾಡಿನಲ್ಲಿ ಪುತಾಂಡು, ಮಹಾರಾಷ್ಟ್ರದಲ್ಲಿ ಗುಡಿಪಾಡ್ಯ, ಪಂಜಾಬಿನಲ್ಲಿ ಬಯ್ಸಾಕಿ, ಸಿಂದಿಯವರು ಚೇತಿಚಾಂದ್ ಎಂಬ ಹೆಸರಿನಲ್ಲಿ ಆಚರಿಸುತ್ತಾರೆ.

ಇತರ ಹಬ್ಬಗಳನ್ನು ಬೇರೆ ಬೇರೆ ರೀತಿಯಲ್ಲಿ ಆಚರಿಸುವಂತೆಯೇ ಬೇರೆ ಬೇರೆ ರಾಜ್ಯಗಳಲ್ಲಿ ಯುಗಾದಿಯನ್ನು ಬೇರೆ ಬೇರೆ ರೀತಿಯಿಂದ ಆಚರಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಗುಡಿಪಡ್ವ, ಪಾಡ್ಯಮಿ ದಿವಸ ಗುಡಿಯನ್ನು ಏರಿಸುವುದೇ (ಗುಡಿಪಡ್ವ) ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ 'ಗುಡಿ' ಎಂದು ಮೂಲೆಯಲ್ಲಿ ಇರಿಸುವರು ಇದು ಹೊಸ ವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ. ಮಹಾರಾಷ್ಟ್ರ ಹಾಗೂ ಕರ್ನಾಟಕದ ಗಡಿ ಭಾಗಗಳಲ್ಲಿರುವ ಅನೇಕ ಹಳ್ಳಿಗಳಲ್ಲಿ ಈ ಪದ್ಧತಿ ಯನ್ನು ನೋಡಬಹುದಾಗಿದೆ.

ಚಂದ್ರನ ಗತಿ ಅತಿವೇಗವಾದ್ದರಿಂದ ಪ್ರತಿ ಪ್ರದಕ್ಷಿಣೆಗೂ ಒಂದೊಂದು ತಿಂಗಳಾಗಿ, ಹನ್ನೆರಡು ಪ್ರದಕ್ಷಿಣೆಗಳಿಗೆ ಒಂದು ಚಾಂದ್ರಾಮಾನ ಸಂವತ್ಸರ . ರವಿ - ಚಂದ್ರ ಗತಿಯನ್ನವಲಂಭಿಸಿ, 11 ರಿಂದ 12 ಪೂರ್ಣಿಮೆ/ಅಮಾವಾಸ್ಯೆಗಳಿಗೊಂದು ಚಾಂದ್ರಮಾನ ಯುಗಾದಿಯಾಗುತ್ತದೆ.ಕರ್ನಾಟಕದಲ್ಲಿ ಚಾಂದ್ರಮಾನ ಪದ್ಧತಿ ಮೊದಲಿನಿಂದ ರೂಢಿಯಲ್ಲಿದೆ.

ದಕ್ಷಿಣ ಭಾರತದಲ್ಲಿ ಚಾಂದ್ರಮಾನ ಯುಗಾದಿ ಯನ್ನು "ಸಂವತ್ಸರ ಪ್ರತಿಪತ್" ಎಂಬುದಾಗಿ ಆಚರಿಸುತ್ತಾರೆ. ಪಕ್ಷಗಳಲ್ಲಿ ಶುಕ್ಲಪಕ್ಷವು ದೇವತೆಗಳಿಗೆ ಪ್ರಿಯವಾದದ್ದು. ಪಿತೃ ಪಕ್ಷವು ಪಿತೃಗಳಿಗೆ ಪ್ರಿಯವಾದುದು. ನವವರ್ಷದ ಪ್ರಥಮ ದೇವತಾ ಪೂಜೆಯೇ ಪ್ರಧಾನವಾಗಿರುವ ಯುಗಾದಿ ಶುಭಪರ್ವದ ಆಚರಣೆಗೆ ಶುಕ್ಲಪಕ್ಷವೇ ತಕ್ಕದಾದದ್ದು. ಸೃಷ್ಟಿ ಮತ್ತು ಧಾರಣೆ ಪೋಷಣೆಗಳಿಗೆ ಅನ್ನ ಮತ್ತು ಔಷಧಿಗಳು ಬೇಕು. ಆ ಔಷಧಿಗಳಿಗೆಲ್ಲಾ ರಾಜನಾದ ಸೋಮ (ಚಂದ್ರ)ನು ವೃದ್ಧಿಯಾಗುವ ಪ್ರಥಮ ದಿವಸ.

ಉಳಿದ ತಿಥಿಗಳಲ್ಲಿ ಚಂದ್ರನು ಅಪೂರ್ಣನಾಗಿರುತ್ತಾನೆ. ಅಥವಾ ಪೂರ್ಣನಾಗಿರುತ್ತಾನೆ. ಆರಂಭದ ದಿವಸಗಳಾಗುವುದಿಲ್ಲ. ಆದುದರಿಂದ ವರ್ಷದ ಪ್ರಥಮ ದಿನವನ್ನಾಗಿ ಚೈತ್ರ, ಶುಕ್ಲ ಪ್ರಥಮೆಯನ್ನೇ ಪರಿಗಣೀಸುವುದುಯುಕ್ತವಾಗಿದೆ.

### ಸೌರಮಾನ ಯುಗಾದಿ :

"ಸೌರಮಾನ ಯುಗಾದಿ" ಎಂದೇ ಪ್ರಸಿದ್ಧವಾಗಿರುವ 'ವಿಷು' ಹೊಸ ವರ್ಷಕ್ಕೆ ನವ ಚೈತನ್ಯವನ್ನು ತುಂಬುವ ಹೊಸ ಸಂವತ್ಸರವನ್ನು ಸ್ವಾಗತಿಸುವ ಹೊಸ ವರ್ಷಾಚರಣೆಯ ದ್ಯೋತಕವಾಗಿದೆ. ಚಾಂದ್ರಮಾನ ಯುಗಾದಿಯು ಬರುವುದು ಚೈತ್ರಮಾಸದ ಮೊದಲ ಪಾಡ್ಯಮಿಯಿಂದಾದರೆ, ಸೌರಮಾನ ಯುಗಾದಿಯ ಆಚರಣೆ ಮೇಷಮಾಸದ ಮೊದಲ ದಿನ. ಸೂರ್ಯನು ಮೀನ ರಾಶಿಯನ್ನು ಬಿಟ್ಟು,ಮೇಷರಾಶಿಯನ್ನು ಪ್ರವೇಶಿಸುವ ಮೇಷ ಸಂಕ್ರಮಣದ ಮರುದಿನದ 'ಹೊಸ ವಿಕ್ರಮಶಕೆ' ಯ ಆರಂಭವನ್ನು ಸೌರಮಾನ ಯುಗಾದಿ ಎಂದು ಆಚರಿಸಲಾಗುತ್ತದೆ.

'ಸೌರಮಾನ ಯುಗಾದಿ' ಎಂದೇ ಜನಪ್ರಿಯ ವಾಗಿರುವ, ಹೊಸ ಸಂವತ್ಸರವನ್ನು ಸ್ವಾಗತಿಸುವ ಈ ಹಬ್ಬವನ್ನು ಬೇರೆ ಬೇರೆ ಕಡೆ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ತುಳುವರು ಬಿಸು ಪರ್ಬ, ಕೇರಳದಲ್ಲಿ ವಿಷು', ತಮಿಳುನಾಡಿನಲ್ಲಿ ಪುತ್ತಾಂಡ್, ಪಂಜಾಬ್ ನಲ್ಲಿ ಬೈಸಾಕಿ, ಅಸ್ಸಾಂನಲ್ಲಿ ಬಿಹು ಎಂದು ಕರೆ ಯುತ್ತಾರೆ.

ಸೂರ್ಯನ ಸುತ್ತುವಿಕೆಯ ನಾಳುಗಳ ಲೆಕ್ಕಾ ಚಾರದ ಮೇಲೆ ಸೌರಮಾನ ಯುಗಾದಿಯನ್ನು ಮಾಡಲಾಗುತ್ತದೆ. ಸೌರಮಾನ ಯುಗಾದಿಯಂದು ಸೂರ್ಯನು ರಾಶಿಚಕ್ರದಲ್ಲಿ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಕಾಲವನ್ನು ಸಂಕ್ರಾಂತಿ ಅಥವಾ ಸಂಕ್ರಮಣ ಎನ್ನುತ್ತಾರೆ. ಇವುಗಳೆಲ್ಲವೂ ಪರ್ವಗಳೇ. ಅವುಗಳಲ್ಲಿ ಮೇಷ ಸಂಕ್ರಮಣವು ಅತ್ಯಂತ ಶುಭವಾದ ಕಾಲ. ಈ ಕಾಲದಲ್ಲಿ ಹೊರಗಿನ ಸೂರ್ಯನು ರಾಶಿಯಲ್ಲಿ ಹೆಜ್ಜೆ ಹಾಕುತ್ತಿರುವಂತೆ ಸಮಕಾಲದಲ್ಲಿ ನಮ್ಮೊಳಗಿನ ಜೀವ ಸೂರ್ಯನು ಸುಷಮ್ನೆಯ ಗ್ರಂಥಿಯೊಳಗೆ ಸಂಗಮ ಹೊಂದುತ್ತಾನೆ ಮತ್ತು ಸಮಾಧಿಯಲ್ಲಿ ಅವಗಾಹನೆ ಮಾಡಲು ತೊಡಗುತ್ತಾನೆ ಎನ್ನಲಾಗಿದೆ.

ಚಾಂದ್ರಮಾನ ಯುಗಾದಿ ಬರುವುದು ಚೈತ್ರ ಮಾಸದ ಮೊದಲ ದಿನ. ಆದರೆ ಸೌರಮಾನ ಯುಗಾದಿಯ ಆಚರಣೆ ಮೇಷ ಮಾಸದ ಮೊದಲ ದಿನ. ಅಂದು ಸೂರ್ಯ ಮೇಷರಾಶಿಯನ್ನು ಪ್ರವೇಶಿಸುತ್ತಾನೆ. ಚಾಂದ್ರ ಮಾನ ಯುಗಾದಿಯಲ್ಲಿ ಬೇವು - ಬೆಲ್ಲ ತಿಂದು, ಜೀವನದಲ್ಲಿ ನೋವು ನಲಿವುಗಳನ್ನು ಸಮನಾಗಿ ಸ್ವೀಕರಿಸುವ ದೃಢ ಸಂಕಲ್ಪ ಮಾಡಿ

ಹೊಸ ಯುಗವನ್ನು ಸ್ವಾಗತಿಸುತ್ತೇವೆ. ಆದರೆ ಸೌರಮಾನ ಯುಗಾದಿ ಇದಕ್ಕಿಂತ ಭಿನ್ನ. ಈ ಹಬ್ಬ ಪ್ರಕೃತಿ ಪೂಜೆಗೆ ಮೀಸಲು. ತಮ್ಮ ಕೃಷಿ ಭೂಮಿಯಲ್ಲಿ ಬೆಳೆದ ಫಸಲುಗಳನ್ನಿಟ್ಟು ಪೂಜಿಸುವ ಮೂಲಕ ಹೊಸ ವರ್ಷದಲ್ಲಿ ಸಂಪದ್ಭರಿತ ಕೃಷಿ, ಸುಖಜೀವನ ಸಮೃದ್ಧಿ ಉಂಟಾಗಲಿ ಎಂದು ಈ ದಿನ ದೇವರಲ್ಲಿ ಪ್ರಾರ್ಥಿಸುತ್ತಾರೆ.


ಹೊಸ ವರುಷದಲ್ಲಿ 'ವಿಷು'ವನ್ನು ಇದಿರುಗೊಳ್ಳುವ ರೀತಿ ವಿಶಿಷ್ಟವಾಗಿದ್ದು 'ವಿಷುಕಣಿ' ಯ ಮೂಲಕ ಸ್ವಾಗತಿಸುತ್ತೇವೆ. ಕಣಿ ಕಾಣುವ ಹಬ್ಬವೆಂದೇ ಖ್ಯಾತ ನಾಮಗೊಂಡ ಸೌರಮಾನ ಯುಗಾದಿಯಲ್ಲಿ 'ಕಣಿ' ಹೇಳುವುದು ಎಂದರೆ ಕಾಲಜ್ಞಾನದ ಭವಿಷ್ಯವನ್ನು ಹೇಳುವುದು ಎಂಬುವುದು ನಮ್ಮ ಆಡು ಮಾತಿನಲ್ಲಿ ಚಾಲ್ತಿಯಲ್ಲಿದೆ. ಅಂತೆಯೇ 'ವಿಷುಕಣಿ' ಪೂಜೆಯೊಂದಿಗೆ ತನ್ಮೂಲಕ ದೇವಿಯೂ ಇಂದು ತನ್ನ ಅರಸಿ ಬಂದ ಸರ್ವ ಸದ್ಭಕ್ತರ 'ಕಣಿ'ಯನ್ನು ನೋಡಿ ನಮ್ಮೆಲ್ಲರ ಸಕಲ ಸಂಚಿತಾದಿ ಪಾಪ-ಕರ್ಮಾದಿಗಳನ್ನು ಹೋಗಲಾಡಿಸಿ, ಭವಿಷ್ಯದಲ್ಲಿ ಎದುರಾಗ ತಕ್ಕಂತಹ ತೊಡಕು ಜಂಜಡಗಳನ್ನು, ಸಕಲಾರಿಷ್ಟಗಳನ್ನು ನಿವಾರಿಣೆಗೊಳಿಸಿ ಶ್ರದ್ಧಾ ಭಕ್ತಿಯಿಂದ ಬೇಡಿದವರಿಗೆ ಆರೋಗ್ಯಭಾಗ್ಯ, ಅತುಲೈಶ್ವರ್ಯವನ್ನು ಕರುಣಿಸಿ ಸಮೃದ್ಧಿದಾಯಕ ಶುಭಫಲಗಳನ್ನು ನೀಡಿ ಹಾರೈಸುವವಳು ಎಂಬ ನಂಬಿಕೆ ಇದೆ.

ಕಣಿ ಕಾಣುವ ಹಬ್ಬವೆಂದೇ ಖ್ಯಾತಿ ಪಡೆದ ಸೌರಮಾನ ಯುಗಾದಿಯಾದ 'ವಿಷು ಹಬ್ಬವನ್ನು ಕರಾವಳಿ ಕರ್ನಾಟಕದಲ್ಲಿ ಸಂಭ್ರಮದಿಂದ ಆಚರಿಸುತ್ತಾರೆ. ವಿಷು ಹಬ್ಬದ ಅಂಗವಾಗಿ ದೇವಸ್ಥಾನಗಳಲ್ಲಿ, ಮಂದಿರಗಳಲ್ಲಿ ವಿಶೇಷ ಪೂಜೆ, ಉತ್ಸವ ನಡೆಯುತ್ತದೆ. ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಕೇರಳ ರಾಜ್ಯ, ಬಂಗಾಳ, ತಮಿಳುನಾಡು, ಪಂಜಾಬ್, ಉತ್ತರಾಖಂಡ, ಹರಿಯಾಣದಲ್ಲಿ ಈ ದಿನವನ್ನು ಸಂಭ್ರಮದಿಂದ ಆಚರಿಸುತ್ತಾರೆ. ವಿಷು ಹೊಸ ವರುಷದ ಆರಂಭ. ಸಮೃದ್ಧಿ ತರುವ, ಹೊಸ ಬದುಕಿಗೆ ಸಂಕಲ್ಪ ಮಾಡುವ ದಿನ. ವರ್ಷವಿಡೀ ಸುಖ, ಸಮೃದ್ಧಿ ನೆಲೆಸಲಿ ಎಂಬ ಆಶಯದೊಂದಿಗೆ ಐಶ್ವರ್ಯದ ಸಂಕೇತವಾಗಿ ವಿಷು ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ವಿಷು ಹಬ್ಬದಂದು ಅಂದರೆ ವರುಷದ ಆರಂಭದ ದಿನದಂದು ಬೆಳಗ್ಗೆ ಎದ್ದು ಮೊದಲಿಗೆ ಆರಾಧ್ಯ ದೇವರನ್ನು ನೋಡುವ ಕ್ರಮವನ್ನು ಕಣಿ ಕಾಣುವುದು ಎನ್ನಲಾಗುತ್ತದೆ. ಕಣಿ ಎಂದರೆ ಶ್ರೇಯಸ್ಸು, ಶಕುನ, ಭವಿಷ್ಯ ಎಂಬ ಅರ್ಥಗಳೂ ಇವೆ. ಮನೆಯನ್ನು ಸಿಂಗರಿಸಿ ಹಿಂದಿನ ದಿನ ರಾತ್ರಿಯೇ ದೇವರ ವಿಗ್ರಹದ ಜತೆಗೆ ಕಣಿಯ ಸಾಮಾಗ್ರಿಗಳು - ನವ ಧಾನ್ಯಗಳು , ಹೊಸ ಬಟ್ಟೆ, ಬಂಗಾರದ ಆಭರಣ, ಫಲವಸ್ತುಗಳು, ಅಕ್ಕಿ, ತೆಂಗಿನಕಾಯಿ ಮತ್ತು ಕನ್ನಡಿ ಇರಿಸಿ ಕಣಿಯನ್ನು ಮಾಡಿರುತ್ತಾರೆ.

ವಿಷು ಸಿರಿಯ ಸೊಬಗಿಗೆ ಮುನ್ನುಡಿ ಬರೆಯುವ ಹೊಸ ಪರ್ವ. ಸಮರಸದ ಬಾಳು ಹೊಸೆವ ನವ ಚೇತನ. ಸೌರಮಾನ ಯುಗಾದಿಯು ಪ್ರತಿವರ್ಷದ ನಿಗದಿತ ದಿನವಾದ ಏಪ್ರಿಲ್ 14 ರಂದು ಕೂಡಿ ಬರುತ್ತದೆ.

## ಕೃತಿ ಪರಿಚಯ




ಪುಟಗಳು - 70, ಬೆಲೆ - 75/- ರೂ

### ತಿರುಮಲೆಯ ಹಿನ್ನೆಲೆಯಲ್ಲಿ ಶ್ರೀ ವೆಂಕಟೇಶ್ವರ ಸುಪ್ರಭಾತ

ಭೂವೈಕುಂಠವೆನಿಸಿದ ತಿರುಮಲೆಯ ಅಧಿದೈವ ಶ್ರೀನಿವಾಸ ಪ್ರಭುವನ್ನು ಕುರಿತು ರಚಿಸಲಾಗಿರುವ ಶ್ರೀವೆಂಕಟೇಶ್ವರ ಸುಪ್ರಭಾತ ಹಾಗೂ ತಿರುಮಲೆಯ ಇತಿಹಾಸ ಮತ್ತು ಆನಂದ ನಿಲಯದಲ್ಲಿ ನಡೆಯುವ ನಿತ್ಯ ಸೇವೆಗಳನ್ನು ಕುರಿತಂತೆ ಬರೆದಿರುವ ಸಂಶೋಧನಾ ಗ್ರಂಥ.

ಪೌರಾಣಿಕ, ಐತಿಹಾಸಿಕ ಹಿನ್ನೆಲೆಯ ತಿರುಮಲೆ ಕ್ಷೇತ್ರದಲ್ಲಿ ಸುಪ್ರಭಾತ ಸೇವೆಗೆ ಬಹಳ ಮಹತ್ವವಿದೆ. ಸುಪ್ರಭಾತದ ಕರ್ತೃ, ಸುಪ್ರಭಾತದ ಪಠ್ಯ ಅನುವಾದ ಹಾಗೂ ಸುಪ್ರಭಾತವನ್ನು ಅಮರವಾಗಿಸಿರುವ ಗಾನಕೋಗಿಲೆ ಎಂ. ಎಸ್. ಸುಬ್ಬ ಲಕ್ಷ್ಮಿಯವರ ಪ್ರಸ್ತುತಿ ಮೊದಲಾದ ಅಪೂರ್ವ ಮಾಹಿತಿಗಳನ್ನೊಳಗೊಂಡ ಕೃತಿಯಿದು. ಸರಳ-ಸುಂದರ ಭಾಷೆಯಲ್ಲಿ ರಚಿತವಾಗಿರುವ ಈ ಕೃತಿ ಶ್ರೀನಿವಾಸ ಪ್ರಭುವಿನ ಭಕ್ತರಿಗೆ ಒಂದು ದಿವ್ಯ ಅನುಭೂತಿ ನೀಡಲಿದೆ.

**ಸಂಪರ್ಕಕ್ಕೆ: 94497 50618**



# ತುರುವೇಕೆರೆಯ ಕೇಶವ ಮತ್ತು ಬೇಟೆರಾಯಸ್ವಾಮಿ ದೇವಾಲಯಗಳು

- ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ ತುರವೇಕೆರೆ. ಇಲ್ಲಿರುವ ಬೃಹತ್ ಕೆರೆಯಿಂದಲೇ ತುರುವೇಕೆರೆ ಎಂಬ ಹೆಸರು ಬಂದಿರುವುದೆಂಬ ಅಭಿಪ್ರಾಯವಿದೆ.

ತುರುವೇಕೆರೆಯ ದೇವಾಲಯಗಳ ಬೀಡು. ಇಲ್ಲಿರುವ ದೇವಾಲಯಗಳು ವೈಶಿಷ್ಟ್ಯ ಪೂರ್ಣವಾಗಿದ್ದು ಒಂದಕ್ಕಿಂತ ಒಂದು ವಿಶೇಷತೆಯನ್ನು ಕೂಡಿದ್ದು, ಕರ್ನಾಟಕದ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳ ಸಾಮ್ರಾಜ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿರುತ್ತದೆ.

ತುರುವೇಕೆರೆಯಲ್ಲಿ ಬೇಟೆರಾಯ ಸ್ವಾಮಿ,ಗಂಗಾಧರೇಶ್ವರ ನರಸಿಂಹ ಸ್ವಾಮಿ,ಮೂಲೆ ಶಂಕರ ಚನ್ನಕೇಶವ, ವಿಠಲ ದೇವಾಲಯ (ನೂರೊಂದು ದೇವರಗುಡಿ) ವೀರಭದ್ರೇಶ್ವರ ಮುಂತಾದ ದೇವಾಲಯಗಳಿವೆ.

## ಬೇಟೆರಾಯಸ್ವಾಮಿ ದೇವಾಲಯ.

ತುರುವೇಕೆರೆಯಲ್ಲಿರುವ ಪ್ರಮುಖ ದೇವಾಲಯವಾದ ಬೇಟೆರಾಯಸ್ವಾಮಿ ದೇವಾಲಯವು ತಾಲ್ಲೂಕಿನಲ್ಲಿರುವ ಬಹು ಪ್ರಸಿದ್ಧ ಆಲಯವಾಗಿರುತ್ತದೆ. ಕ್ರಿ.ಶ. 1560 ರ ಶಾಸನದಲ್ಲಿ ಬೇಟೆರಾಯ ಸ್ವಾಮಿಯ ಉಲ್ಲೇಖವಿರುವುದರಿಂದ ಆ ಕಾಲಕ್ಕಾಗಲೆ ಈ ದೇವಾಲಯವು ಇದ್ದಿರಲೇಬೇಕೆಂದು ನಿರ್ಧರಿಸಬಹುದು. ದೇವಾಲಯವು ಗರ್ಭಗೃಹ ಅಂತರಾಳ, ನವರಂಗ, ಮುಖಮಂಟಪ ಹಾಗೂ ಮಹಾದ್ವಾರಗಳನ್ನೊಳಗೊಂಡ ವಿಜಯನಗರ ಶೈಲಿಯಲ್ಲಿ ನಿರ್ಮಿತವಾದ ಬೃಹತ್ ಆಲಯವಾಗಿರುತ್ತದೆ. ಗರ್ಭಗುಡಿಯಲ್ಲಿರುವ ಮೂರ್ತಿಯು ಚಕ್ರ, ಶಂಖ, ಗದಾ, ವರದಹಸ್ತವನ್ನು ಹೊಂದಿರುವ ಆಕರ್ಷಕ ವಿಷ್ಣುವಿನ ಮೂರ್ತಿಯಾಗಿದೆ. ಇಲ್ಲಿರುವ ವಿಷ್ಣು ಮೂರ್ತಿಗೆ ಬೇಟೆರಾಯ ಸ್ವಾಮಿ ಎಂದು ಕರೆಯಲು ಸ್ಥಳೀಯ ಐತಿಹ್ಯವಿದೆ. ಹಿಂದೆ ಇಲ್ಲಿ ಋಷಿಗಳು ಬಂದು ತಪಸ್ಸು ಮಾಡುತಿದ್ದರಂತೆ ಆಗ ರಾಕ್ಷಸರುಗಳು ಮೃಗ ರೂಪದಲ್ಲಿ ಬಂದು ಇಲ್ಲಿಯ ಮುನಿಗಳನ್ನು ಹಿಂಸಿಸುತ್ತಿದ್ದರಂತೆ ,ಋಷಿಗಳ ಪ್ರಾರ್ಥನೆಯಂತೆ ಶ್ರೀಮಾನ್ ಮಹಾವಿಷ್ಣುವು ಬೇಟೆಗಾರನ ರೂಪದಲ್ಲಿ ಬಂದು ಮೃಗರೂಪದಲ್ಲಿರುವ ರಾಕ್ಷಸರುಗಳನ್ನು ಸಂಹರಿಸಿದನೆಂತಲೂ ಆ ಕಾರಣದಿಂದಾಗಿ ದೇವನಿಗೆ ಬೇಟೆರಾಯಸ್ವಾಮಿಯೆಂಬ ಹೆಸರು ಬಂದಿರುವುದು ಸ್ಥಳಪುರಾಣದಿಂದ ತಿಳಿದು ಬರುತ್ತದೆ. ಈ ರೀತಿಯ ಶಿಷ್ಟದೇವತೆಗಳು ಜಾನಪದ ದೇವತೆಗಳಾಗಿ ರೂಪಗೊಳ್ಳುವ ಉದಾಹರಣೆಗಳನ್ನು ನಮ್ಮ ನಾಡಿನ ಅನೇಕ ಕಡೆ ಗಮನಿಸಬಹುದು.

ಬೇಟೆರಾಯಸ್ವಾಮಿಯು ನೋಡಲು ಆಕರ್ಷಕವಾಗಿದ್ದು, ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳಿವೆ.

ಈ ಮೂರ್ತಿಯು ಹೊಯ್ಸಳ ಶೈಲಿಯಲ್ಲಿರುವುದನ್ನು ಗಮನಿಸಬಹುದು.

ದೇವಾಲಯಕ್ಕೆ ವಿಶಾಲವಾದ ಪ್ರಾಕಾರವಿದ್ದು, ಒಂದು ಬದಿಯಲ್ಲಿ ಶ್ರೀ ಲಕ್ಷ್ಮೀದೇವಿಯ ಆಲಯವಿದೆ. ಗರ್ಭಗುಡಿಯ ಎದುರಿನಲ್ಲಿ ಪ್ರವೇಶದ್ವಾರವಿದ್ದು, ಮೇಲೆ ಅಂದವಾದ ರಾಜಗೋಪುರವಿದೆ. ಪ್ರವೇಶ ಮಂಟಪದ ಒಂದು ಕಂಬದ ಮೇಲೆ ಈ ದೇವಾಲಯದ ಸ್ಥಾಪಕನಾದ ಚೌಡಯ್ಯನ ಶಿಲ್ಪವಿದೆ. ತುರುವೇಕೆರೆಯ ಬ್ಯಾಟರಾಯಸ್ವಾಮಿಯ ಜಾತ್ರೆಯು ಫಾಲ್ಗುಣ ಮಾಸದಲ್ಲಿ ಬಹಳ ವೈಭವವಾಗಿ ನೆರವೇರುತ್ತದೆ.

**ಚೆನ್ನಕೇಶವ ದೇವಾಲಯ:**

ಗಂಗಾಧರೇಶ್ವರನ ಗುಡಿಯಿಂದ ಮುಂದೆ ಸಾಗಿದರೆ ಹೊಯ್ಸಳರ ಕಾಲದ ಚೆನ್ನಕೇಶವ ದೇವಾಲಯವಿದೆ. ಏಕಕೂಟ ಆಲಯವಾಗಿರುವ ದೇವಾಲಯದ ಗರ್ಭಗುಡಿಯಲ್ಲಿ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಶ್ರೀ ಚನ್ನಕೇಶವನ ಸುಂದರ ಮೂರ್ತಿಯಿದೆ. ಇಲ್ಲಿ ದೊರೆತಿರುವ ಶಾಸನದಿಂದ ತುರುವೇಕೆರೆಯ ಪ್ರಾಚೀನ ನಾಮವು ಸರ್ವಜ್ಞ ವಿಜಯನರಸಿಂಹಪುರವೆಂದು ತಿಳಿದು ಬರುತ್ತದೆ. ಹೊಯ್ಸಳರ ದೊರೆ ಮೂರನೆಯ ನರಸಿಂಹನ ದಂಡನಾಯಕ ಸೋಮನು ಈ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ಶ್ರೀಚನ್ನಕೇಶವ ಹಾಗೂ ಶ್ರೀಶಂಕರೇಶ್ವರ ದೇವಾಲಯಕ್ಕೆ ಹಲವಾರು ದತ್ತಿಯನ್ನು ಬಿಟ್ಟಿರುವನು. ವಿಶ್ವಪ್ರಸಿದ್ಧ ಸೋಮನಾಥಪುರದ ಕೇಶವ ದೇವಾಲಯದ ನಿರ್ಮಾತೃ ಸೋಮಣ್ಣ ದಂಡನಾಯಕನೇ ತುರುವೇಕೆರೆಯ ದೇವಾಲಯಗಳಿಗೆ ದತ್ತಿಬಿಟ್ಟಿರುವುದು ಗಮನಾರ್ಹ. ಶಾಸನದಲ್ಲಿ ಈ ದೇವಾಲಯವನ್ನು ಆತನು ನಿರ್ಮಿಸಿರುವ ಉಲ್ಲೇಖವಿಲ್ಲವಾದರೂ, ಕ್ರಿ.ಶ. 1263 ರ ವೇಳೆಗೆ ದೇವಾಲಯವು ಅಸ್ತಿತ್ವದಲ್ಲಿತ್ತು ಎಂದು ನಿರ್ಧರಿಸಬಹುದು. ಬಹುಶಃ ಸೋಮಣ್ಣ ದಂಡನಾಯಕನೇ ನಿರ್ಮಿಸಿರುವ ಸಾಧ್ಯತೆಯೂ ಇರುವುದು.


ಕೇಶವ ದೇವಾಲಯಕ್ಕೆ ಅಂದವಾದ ಶಿಖರವಿದೆ. ದೇವಾಲಯದ ಹೊರಭಿತ್ತಿಯಲ್ಲಿ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲವಾದರೂ ಅಲ್ಲಲ್ಲಿ ಕಿರುಸ್ತಂಭಗಳ ನಡುವೆ ಪದ್ಮಗಳನ್ನು ಬಿಡಿಸಲಾಗಿದೆ.

ಈ ದೇವಾಲಯವನ್ನು ಕ್ರಿ.ಶ. 1992 ರಲ್ಲಿ ರಾಜ್ಯ ಪುರಾತತ್ವ ಇಲಾಖೆ ಜೀರ್ಣೋದ್ಧಾರ ಮಾಡಿದೆ.

ಬೇಟೆರಾಯಸ್ವಾಮಿ ದೇವಾಲಯದ ಸಮೀಪವಿರುವ ನರಸಿಂಹ ಗುಡಿಯು ಸಣ್ಣ ದೇವಾಲಯವಾದರೂ, ಗರ್ಭಗುಡಿಯಲ್ಲಿರುವ ನರಸಿಂಹ ಮೂರ್ತಿಯು ಲಕ್ಷ್ಮೀಸಹಿತ ವಿಷ್ಣುವಿನ ಮೂರ್ತಿಯಂತೆ ನಿಂತಿರುವ ಭಂಗಿಯಲ್ಲಿದೆ. ಸಾಮಾನ್ಯವಾಗಿ ನರಸಿಂಹ ಶಿಲ್ಪಗಳು ಕುಳಿತಿರುವಂತೆ ಇರುತ್ತದೆ. ಆದರೆ ದೇವನು ಸ್ಥಾನಕ ಭಂಗಿಯಲ್ಲಿರುವುದು ವಿಶೇಷ.

ತುರವೇಕೆರೆಯ ಗಂಗಾಧರೇಶ್ವರ ದೇವಾಲಯದಿಂದ ಚನ್ನಕೇಶವ ದೇವಾಲಯಕ್ಕೆ ಹೋಗುವಾಗ ಶ್ರೀವಿಠಲ ದೇವಾಲಯವಿದೆ. ದಾಸಸಾಹಿತ್ಯದ ಅಗ್ರಗಣ್ಯರಾದ ಶ್ರೀ ಅಚಲಾನಂದ ದಾಸರು ಈ ದೇವಾಲಯವನ್ನು ನಿರ್ಮಿಸಿದರೆಂದೂ ಹಾಗೂ ಅವರಿಗೆ ಗಂಡಕಿ ನದಿಯಲ್ಲಿ ದೊರೆತ ವಿಠಲಮೂರ್ತಿಯನ್ನು ಇಲ್ಲಿ ತಂದು ಪ್ರತಿಷ್ಠಾಪಿಸಿದರೆಂಬ ನಂಬಿಕೆಯಿದೆ. ಈ ದೇವಾಲಯದಲ್ಲಿ ಪಂಚಲೋಹದ ಉಗ್ರನರಸಿಂಹನ ಶಿಲ್ಪವಲ್ಲದೆ ನೂರಾರು ಸಣ್ಣ ಮೂರ್ತಿಗಳಿವೆ. ಆದ್ದರಿಂದ ಪ್ರಸ್ತುತ ದೇವಾಲಯಕ್ಕೆ ನೂರೆಂಟು ದೇವರಗುಡಿ ಎಂದು ಸ್ಥಳೀಯರು ಕರೆಯುವರು.

ತುರುವೇಕೆರೆಯಲ್ಲಿರುವ ಶಿವಾಲಯಗಳೂ ಸಹಾ ಬಹಳ ವಿಶೇಷತೆಯನ್ನು ಹೊಂದಿದೆ. ಗಂಗಾಧರೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಪರ



ಶಿವನು ಹೆಸರಿಗೆ ಅನ್ವರ್ಥದಂತೆ ಶಿವಲಿಂಗದ ಮೇಲೆ ಗಂಗೆಯನ್ನೇ ಹೊತ್ತಿರುವ ಗಂಗಾಧರನಾಗಿರುವನು ಹಾಗೂ ಇಲ್ಲಿರುವ ನಂದೀಶ್ವರನ ಮೂರ್ತಿಯು ಬಹಳ ಸೊಗಸಾಗಿದ್ದು, ಕನ್ನಡನಾಡಿನ ಸುಂದರ ನಂದಿಯ ಮೂರ್ತಿಗಳಲ್ಲೊಂದು ಇಲ್ಲಿರುವ ಮೂಲೆ ಶಂಕರ ದೇವಾಲಯದ ಶಿಖರವು ಅಪರೂಪದ ಭೂಮಿಜ ಶೈಲಿಯ ಶಿಖರವನ್ನು ಹೊಂದಿದೆ.

**ಹೀಗೆ ಬನ್ನಿ:**

ತುಮಕೂರು ಜಿಲ್ಲೆ ತುರವೇಕೆರೆಗೆ ಬರುವುದು ಬಹಳ ಸುಲಭ. ಬೆಂಗಳೂರಿನಿಂದ 125 ಕಿ.ಮೀ. ದೂರದಲ್ಲಿರುವ ತುರುವೇಕೆರೆಗೆ ಬೆಂಗಳೂರಿನಿಂದ ಬರುವ ಪ್ರವಾಸಿಗರು ಬೆಂಗಳೂರು ಕುಣಿಗಲ್ ಯಡಿಯೂರು-ತುರುವೇಕೆರೆ ತಿರುವು ಮಾಯಸಂದ್ರ ಮುಖಾಂತರ ತುರುವೇಕೆರೆಯನ್ನು ಸೇರಬಹುದು. ತುಮಕೂರಿನಿಂದ ಬರುವವರು ತುಮಕೂರು - ಶಿವಮೊಗ್ಗ ರಸ್ತೆಯಲ್ಲಿ ಕಿಬ್ಬನಹಳ್ಳಿ ತಿರುವಿನಲ್ಲಿ ಎಡಕ್ಕೆ ತಿರುಗಿ (ದೂರ ಸು. 15 ಕಿ.ಮೀ.) ತುರುವೇಕೆರೆಯನ್ನು ತಲುಪಬಹುದು.



....ಹಬ್ಬದ ಪ್ರಯುಕ್ತ

# ಹೋಳಿ ಹುಣ್ಣಿಮೆ



- ಶ್ರೀಮತಿ. ಮಾಧುರಿ ದೇಶಪಾಂಡೆ

9481070245

ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಗೆ ಎರಡು ಮುಖ್ಯ. ಹಿನ್ನೆಲೆಗಳಿವೆ. ಮೊದಲನೆಯದು ಶಿವ ಪಾರ್ವತಿಯರ ವಿವಾಹಕ್ಕೆ ಪೂರ್ವ ಪೀಠಿಕೆ ಮತ್ತು ನರಸಿಂಹ ದೇವರ ಅವ ತಾರ ಈ ಎರಡೂ ಹಿನ್ನೆಲೆಯನ್ನು ನಾವು ಹೋಳಿ ಹುಣ್ಣಿಮೆಗೆ ವಿಶೇಷವಾಗಿ ಹೇಳುತ್ತೇವೆ.

ದಕ್ಷ ಪ್ರಜಾಪತಿಯ ಯಜ್ಞದಲ್ಲಿ ಪತಿಗೆ ಆದ ಅವ ಮಾನಕ್ಕೆ ಸತಿಯು ಯಜ್ಞ ಕುಂಡದಲ್ಲಿ ಹಾರಿದ ನಂತರ ರುದ್ರದೇವರು ತಪೋನಿಧಿಯಾಗಿ ಕುಳಿತಾಗ ತಾರಕಾಸುರನು 7 ದಿನದ ಶಿವಪುತ್ರನಿಂದ ಸಾವು ಎಂಬ ವರವನ್ನು ಬೇಡಿ ಪಡೆ ದಿರುತ್ತಾನೆ. ಆ ಕಾಲಕ್ಕೆ ಸತಿ ದೇವಿಯು ತಂದೆಯಾದ ದಕ್ಷ ಪ್ರಜಾಪತಿಯಿಂದ ಪತಿಗಾದ ಅವಮಾನಕ್ಕಾಗಿಯೇ ಅಲ್ಲಿಯೇ ಹೋಮಕುಂಡದಲ್ಲಿ ಆತ್ಮಾಹುತಿ ಮಾಡಿಕೊಂಡಿರುತ್ತಾಳೆ. ಸತೀ ದೇವಿಯ ವಿಯೋಗದಿಂದ ರುದ್ರ ದೇವರು ತಪಸ್ಸಿಗೆ ಕುಳಿತ ನಂತರ ಪುನಃ ಎದ್ದಿರುವುದಿಲ್ಲ. ರುದ್ರ ದೇವರು ಬೇರೆ ಯಾರನ್ನೂ ಮದುವೆಯಾಗು ಎಂಬ ಭರವಸೆಯಲ್ಲಿ ತಾರಕಾಸುರನು ವರವನ್ನು ಪಡೆದಿರುತ್ತಾನೆ. ತಾರಕಾಸುರನ ಉಪಟಳವು ಹೆಚ್ಚಾದಾಗ ದೇವತೆಗಳೆಲ್ಲ ಬ್ರಹ್ಮ ವಿಷ್ಣುವಿನ ಬಳಿ ಹೋದಾಗ ರುದ್ರ ದೇವರ ತಪಸ್ಸನ್ನು ಭಂಗ ಮಾಡಿ ಪರ್ವತರಾಜ ಹಿಮ ವಂತನ ಮಗಳಾದ ಪಾರ್ವತಿಯನ್ನು ಮದುವೆ ಮಾಡಿಸಲು ತಪಸ್ಸು ಭಂಗ ಮಾಡುವ ವಿಚಾರವನ್ನು ದೇವತೆಗಳು ಮಾಡಿದಾಗ ಮನ್ಮಥನು ಲೋಕ ಕಲ್ಯಾಣಕ್ಕಾಗಿ ತನ್ನ ಪ್ರಾಣದ ಹಂಗು ತೊರೆದು ಬಾಣವನ್ನು ಬಿಡುತ್ತಾನೆ. ಆಗ ರುದ್ರ ದೇವರು ಸಿಟ್ಟಾಗಿ ತನ್ನ ಮೂರನೇ ಕಣ್ಣು ತೆರೆದಾಗ ಕಾಮನ ಶರೀರವು ಸುಟ್ಟು ಬೂದಿಯಾಗಿರುತ್ತದೆ. ನಂತರ ತಪಸ್ಸಿನಿಂದ ಹೊರ ಬಂದ ರುದ್ರದೇವರಲ್ಲಿ ದೇವತೆಗಳೆಲ್ಲರೂ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ.ಸತೀ ದೇವಿಯು ಮರು ಜನ್ಮವನ್ನು ಪರ್ವತ ಗಳ ರಾಜ ಹಿಮಂತನ ಮನೆಯಲ್ಲಿ ಪಾರ್ವತಿ ದೇವಿಯಾಗಿ ಜನ್ಮ ತಾಳಿ ಶಿವನೇ ತನ್ನ ಪತಿಯಾಗಬೇಕೆಂದು ತಪಸ್ಸನ್ನು ಆಚರಿಸುತ್ತಾ ಇರುತ್ತಾಳೆ. ಈ ಎಲ್ಲ ವೃತ್ತಾಂತವನ್ನು ದೇವತೆಗಳು ರುದ್ರ ದೇವರಿಗೆ ತಿಳಿಸುತ್ತಾರೆ ಮತ್ತು ಮನ್ಮಥನ ಸಹಾಯದಿಂದ ಶಿವನ ತಪಸ್ಸಿನಿಂದ ಎಚ್ಚರಿಸಿದ ಬಗೆಯನ್ನು ಹೇಳುತ್ತಾರೆ.

ರುದ್ರದೇವರು ತಪೋನಿರತಳಾದ ಪಾರ್ವತಿಯ ಬಳಿ ಕಿರಾತಕನ ವೇಷದಲ್ಲಿ ಹೋಗಿ ತನ್ನನ್ನು ತಾನೇ ಹಳಿದು ಕೊಳ್ಳುತ್ತಾನೆ. ಎಷ್ಟೇ ಪ್ರಯತ್ನ ಪಟ್ಟರೂ ಪಾರ್ವತಿಯು ವಿಚಲಿ ತಳಾಗದೆ ಶಿವನನ್ನೇ ವರಿಸುವುದಾಗಿ ಹೇಳಿದಾಗ ಶಿವನು ಒಲಿದು ವರವನ್ನು ನೀಡಿ ಗಿರಿಜೆಯನ್ನು ಮದುವೆ ಮಾಡಿ ಕೊಳ್ಳುತ್ತಾನೆ.

ಆಗ ಶಿವನ ಮೂರನೇ ಕಣ್ಣಿಗೆ ಭಸ್ಮನಾದ ಕಾಮನನ್ನು ಸುಡುವ ಹಬ್ಬವೇ ಹೋಳಿ ಹುಣ್ಣಿಮೆ. ನಮ್ಮ ಮನದ ಕೆಟ್ಟ ಕಾಮವನ್ನು ಸುಟ್ಟು ಉತ್ತಮವಾದ ಗತಿ ಹೊಂದಲು ಕಾಮ ದಹನ ಮಾಡಬೇಕು. ಸಾಮಾನ್ಯವಾಗಿ ಕೆಟ್ಟ ಕಾಮನೆಗಳು ಪರ ಸ್ತ್ರೀ, ಪರ ಧನ ಮೊದಲಾದವುಗಳ ಮೂಲಕ ಬರುವುದ ರಿಂದ ಕಾಮನ ಪ್ರತಿಕೃತಿ ಮಾಡಿ ಸುಡುವ ಅಭ್ಯಾಸವನ್ನು ನಮ್ಮ ಪೂರ್ವಜರು ಮಾಡಿಕೊಂಡು ಬಂದಿದ್ದಾರೆ.

ಇನ್ನೊಂದು ಹೋಳಿ ಹುಣ್ಣಿಮೆಯ ಕತೆ ಕೃತಯುಗದ ನರಸಿಂಹ ಅವತಾರಕ್ಕೆ ಸಂಬಂಧಿಸಿದ ಕತೆಯಾಗಿದೆ. ಹಿರಣ್ಯ ಕಶ್ಯಪುವಿನ ಸಹೋದರಿ ಹೋಲಿಕಾ, ಪ್ರಹ್ಲಾದನು ಹರಿ ಭಕ್ತಿ ಬಿಡದ ಕಾರಣ ಹಿರಣ್ಯಕಶ್ಯಪು ತನ್ನ ಮಗನನ್ನೇ ಕೊಲ್ಲಿಸಲು ಸಾಕಷ್ಟು ಪ್ರಯತ್ನ ಪಟ್ಟಿರುತ್ತಾನೆ ಆದರೂ ಕೂಡ ಪ್ರಹ್ಲಾದನು ತನ್ನ ಭಕ್ತಿಯಿಂದ ಭಗವಂತನ ಕೃಪೆಯಿಂದ ಉಳಿದಿರುತ್ತಾರೆ. ಹಿರಣ್ಯಕಶ್ಯಪುವಿನ ತಳಮಳ ನೋಡಿ ಅವನ ಸಹೋದರಿ ಯಾದ ಹೋಲಿಕಾ ಅಣ್ಣನಿಗೆ ಸಲಹೆಯನ್ನು ನೀಡುತ್ತಾಳೆ. ಹೋಲಿಕಾಳನ್ನು ಅಗ್ನಿಯಿಂದ ಸುಡುವುದಿಲ್ಲ ಎಂಬ ವರವು ದೊರೆತಿರುತ್ತದೆ. ಸಣ್ಣ ಹುಡುಗನಾದ ಪ್ರಹ್ಲಾದನನ್ನೂ ಅಗ್ನಿ ಕುಂಡದಲ್ಲಿ ಸ್ವತಃ ತಾನೇ ಕೂಡಿಸಿಕೊಂಡು ಅವನನ್ನು ಕೊಲ್ಲುವ ಭರವಸೆಯನ್ನು ಅಣ್ಣನಿಗೆ ನೀಡುತ್ತಾಳೆ. ಸಹೋ ದರಿಯ ಮಾತು ರುಚಿಸಿ ಹಿರಣ್ಯಕಶ್ಯಪುವೂ ಕೂಡ ಅವಳ ಉಪಾಯವನ್ನು ಒಪ್ಪಿ ಮಗನನ್ನು ಕರೆಸುತ್ತಾನೆ. ಪ್ರಹ್ಲಾದನನ್ನೂ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಚಿತೆಯನ್ನು ಏರಿ ಕುಳಿ ತಾಗ ಹೋಲಿಕಾಳೇ ಸುಟ್ಟು ಭಸ್ಮವಾಗುತ್ತಾಳೆ.

ಹೋಳಿ ಹುಣ್ಣಿಮೆಯಂದು ಕಾಮನ ಪ್ರತಿ ಕೃತಿ ಸುಟ್ಟು, ಆ ಬೂದಿಯೊಂದಿಗೆ ಬಣ್ಣವನ್ನು ಸೇರಿಸಿ ಬಣ್ಣವನ್ನು ಆಡಲಾಗು ತ್ತದೆ.ಎರಡೂ ಕತೆಗಳಲ್ಲಿ ನಾವೂ ಕಲಿಯಬೇಕಾದ್ದು ಬಹಳ ಇದೆ. ಕೆಟ್ಟ ಕಾಮನೆಗಳು ಮನೆಯಲ್ಲಿ ಮನೆ ಮಾಡಿದರೆ ನಾವೇ ಸುಟ್ಟು ಭಸ್ಮವಾಗುತ್ತೇವೆ.ಮತ್ತೊಬ್ಬರನ್ನು ಸುಡಲು ಮಾಡಿದ ತಯಾರಿ ನಮ್ಮನ್ನೇ ಸುಡುತ್ತದೆ. ಕೆಟ್ಟದನ್ನು ಮಾಡದೇ ಎಲ್ಲ ರೊಂದಿಗೂ ಪ್ರೀತಿ ವಿಶ್ವಾಸದಿಂದ ಬದುಕಬೇಕು ಎಂಬ ಪಾಠ ಕಲಿಯುತ್ತೇವೆ.

ಬದುಕಿನಲ್ಲಿ ಬಣ್ಣಗಳನ್ನು ತುಂಬುವ ಹೋಳಿ ಹುಣ್ಣಿಮೆಯ ಧಾರ್ಮಿಕ ಮಹತ್ವ ಅಳವಡಿಸಿಕೊಂಡು ಲೌಕಿಕ ಸಂಪ್ರದಾಯ ಗಳನ್ನು ಆಚರಿಸುತ್ತ ಸಂಭ್ರಮ ಪಡುವ ವಸಂತ ಋತುವಿನ ಆಗಮನಕ್ಕೆ ಸಂಭ್ರಮದ ಸ್ವಾಗತಕ್ಕೆ ಸಜ್ಜುಗೊಳ್ಳುವ ಹಬ್ಬವೇ ಹೋಳಿ ಹುಣ್ಣಿಮೆ.




ತಿರುಮಲೆ ಶ್ರೀ ವೇಂಕಟೇಶ್ವರ ಸ್ವಾಮಿಯವರ
ಯುಗಾದಿ ಆಸ್ಥಾನ
22-03-2023

# ಶ್ರೀರಾಮಚಂದ್ರ ಚರಣೌ ಶರಣಂಪ್ರಪದ್ಯೆ



– ತೆಲುಗುಮೂಲ : ಡಾ॥ ಐ.ಎಲ್.ಎನ್.ಚಂದ್ರಶೇಖರರಾವ್

ಅನುವಾದ : ಕೆ.ಎಸ್. ರಾಮಮೂರ್ತಿ

ಸಕಲ ಸದ್ಗುಣಗಳಿಂದ ಕೂಡಿದ,ತನ್ನ ಶೀಲಸಂಪತ್ತಿನಿಂದ ಪ್ರಪಂಚಕ್ಕೆ ಆದರ್ಶ ಪುರುಷನಾಗಿರುವ ಶ್ರೀರಾಮಚಂದ್ರಮೂರ್ತಿ, ಸಕಲಲೋಕ ಆರಾಧ್ಯನು. ನಮ್ಮ ದೇಶದ ಅನೇಕ ಪ್ರದೇಶಗಳವರೆಗೆ ಆರಾಧ್ಯನಾದ ಶ್ರೀರಾಮಚಂದ್ರಮೂರ್ತಿ ಪ್ರತಿಯೊಂದು ಗ್ರಾಮದಲ್ಲೂ ದರ್ಶನ ನೀಡುತ್ತಿರುವುದು ಭಾರತೀಯರಿಗೆ ಶ್ರೀರಾಮನ ಮೇಲಿರುವ ಭಕ್ತಿಗೆ ನಿದರ್ಶನವಾಗಿದೆ.ಇದಲ್ಲದೆ ಶ್ರೀರಾಮನ ರಾಜ್ಯ ಅಯೋಧ್ಯೆಯಾದರೂ ಸಹ ಆತನು ತೆಲುಗು ಭೂಮಿಯ ಅನೇಕ ಪ್ರಾಂತ್ಯಗಳನ್ನು ತನ್ನ ಪಾದದೂಳಿನಿಂದ ಪವಿತ್ರನಾಗಿಸಿರುವನು ಶ್ರೀರಾಮನು ವನವಾಸ ಸಮಯದಲ್ಲಿ ಸೀತಾನ್ವೇಷಣೆ ಸಮಯದಲ್ಲಿ ರಾವಣಾಸುರನನ್ನು ಸಂಹರಿಸಿ ಅಯೋಧ್ಯೆಗೆ ಹಿಂತಿರುಗಿದ ಸಮಯದಲ್ಲಿ ನಾ ಸ್ತವ್ಯ ಹೂಡಿದ ಸಂದರ್ಶಿಸಿದ ಅನೇಕ ಪುಣ್ಯಕ್ಷೇತ್ರಗಳು ತೆಲುಗು ನಾಡಿನಲ್ಲಿದೆ. ಇಂತಹ ಪುಣ್ಯ ಕ್ಷೇತ್ರಗಳಲ್ಲಿ ಪ್ರಮುಖವಾದವು ತಿರುಮಲೆ ತಿರುಪತಿ ದೇವಾಲಯಗಳ ಆಡಳಿತಕ್ಕೊಳಪಟ್ಟಿವೆ. ಶ್ರೀರಾಮನವಮಿ ಸಂದರ್ಭದಲ್ಲಿ ಇಂತಹ ಪುಣ್ಯ ಕ್ಷೇತ್ರಗಳನ್ನು ದರ್ಶಿಸಿದರೆ, ಸ್ಮರಿಸಿದರೆ ಅನಂತವಾದ ಪುಣ್ಯಫಲಗಳು ಲಭಿಸುತ್ತವೆ.



## ಶ್ರೀರಾಮನ ಸನ್ನಿಧಿ ತಿರುಮಲೆ :

ಕಲಿಯುಗದ ಪ್ರತ್ಯಕ್ಷದೈವನಾದ ಶ್ರೀವೆಂಕಟೇಶ್ವರಸ್ವಾಮಿಯು ನೆಲೆಸಿರುವ ಆನಂದ ನಿಲಯ ದಲ್ಲಿ ಘಂಟಾಮಂಟಪ, ಸ್ನಪನ ಮಂಟಪದ ನಂತರ ಇರುವುದೇ ಶ್ರೀರಾಮನಸನ್ನಿಧಿ ಸೀತಾರಾಮ ಲಕ್ಷ್ಮಣರ ಉತ್ಸವ ಮೂರ್ತಿಗಳನ್ನು ಇಲ್ಲಿ ಮಂಟಪದಲ್ಲಿತ್ತಿದ್ದವುದರಿಂದ ಇದನ್ನು ಶ್ರೀರಾಮರ ಮಂಟಪ ವೆಂದು ಹೆಸರು ಬಂದಿದೆ. ಸೀತಾದೇವಿಯನ್ನು ಹುಡುಕುತ್ತಾ ರಾಮಲಕ್ಷ್ಮಣರು ವೆಂಕಟಾದ್ರಿ ಯನ್ನು ಸಂದರ್ಶಿಸಿದ ನೆನಪಿನಲ್ಲಿ ಅವರ ಉತ್ಸವ ಮೂರ್ತಿಗಳನ್ನು ಇಲ್ಲಿ ನೆಲೆಗೊಳಿಸಿದರೆಂದು ಹೇಳುತ್ತಾರೆ. ಪ್ರಸ್ತುತ ಈ ಮೂವರ ಮಾರ್ತಿಗಳು ಗರ್ಭಗೃಹದಲ್ಲಿ ದರ್ಶನ ನೀಡುತ್ತಿದೆ.ಜಗಲ ಇಕ್ಕೆಲ ಗಳಲ್ಲಿ ಶ್ರೀರಾಮನ ಪರಿವಾರದ ಅಂಗದ, ಹನುಮಂತ, ಸುಗ್ರೀವ ಹಾಗೂ ಶ್ರೀವೆಂಕಟೇಶ್ವರ ಸ್ವಾಮಿಯ ಪರಿವಾರದೇವತೆಗಳಾದ ವಿಶ್ವಕ್ಸೇನ,ಅನಂತ ಹಾಗೂ ಗರುಡರ ಉತ್ಸವಮೂರ್ತಿಗಳಿವೆ. ತ್ರೇತಾ ಯುಗದ ಶ್ರೀರಾಮನೇ ಕಲಿಯುಗ ಶ್ರೀನಿವಾಸನು. ಶ್ರೀರಾಮನವಮಿಯ ಪರ್ವದಿನದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡುತ್ತಾರೆ. ಪ್ರತಿ ತಿಂಗಳಲ್ಲಿ ಬರುವ ಪುನರ್ವಸು ನಕ್ಷತ್ರದ ದಿನದಂದು ಶ್ರೀರಾಮ ಚಂದ್ರದೇವರು ಸಹಸ್ರದೀಪಾಲಂಕರಣ ಸೇವೆಯಲ್ಲಿ ಪಾಲ್ಗೊಳ್ಳುವರು.ವರ್ಷಕ್ಕೊಮ್ಮೆ ತೆಪ್ಪೋತ್ಸವವು ನಡೆಯುತ್ತದೆ.



## ಒಂಟಿಮಿಟ್ಟ, ಶ್ರೀಕೋದಂಡರಾಮ :

ತ್ರೇತಾಯುಗದಲ್ಲಿ ದಂಡಕಾರಣ್ಯವೆಂದು ಪ್ರಸಿದ್ಧಿ ಪಡೆದ ಈ ಪ್ರದೇಶದಲ್ಲಿ ಅನೇಕ ಮಹರ್ಷಿಗಳು ತಪ್ಪಸ್ಸು ಕೈಗೊಂಡಿದ್ದರು. ಇವರು ಮಾಡುತ್ತಿದ್ದ ಯಜ್ಞಯಾಗಗಳಿಗೆ ರಾಕ್ಷಸರು ಅಡ್ಡಿ ಉಂಟು ಮಾಡುತ್ತಿದ್ದರು. ಇವರನ್ನು ನಿಗ್ರಹಿಸಲು ಋಷಿಗಳು ಶ್ರೀರಾಮನನ್ನು ಪ್ರಾರ್ಥಿಸಿದಾಗ ಶ್ರೀರಾಮನು ಇಲ್ಲಿಗೆ ಬಂದು ಋಷಿ ಮುನಿ ಗಳಿಗೆ ನೆರವಾದುದ್ದರಿಂದ ಶ್ರೀರಾಮನಿಗೆ ಕೋದಂಡರಾಮನೆಂದು ಹೆಸರಾಯಿತಂತೆ ರಾಮನು ಋಷಿಗಳ ಕೋರಿಕೆ ಯಂತೆ ತನ್ನ ಪ್ರತಿಮೆಗಳನ್ನು ನೀಡಿದನೆಂದು, ಆ ಪ್ರತಿಮೆಗಳನ್ನು ಪೂಜಿಸುತ್ತ ಋಷಿಮುನಿಗಳು ಯಜ್ಞಯಾಗಾದಿ ಗಳನ್ನು ನಿರ್ವಿಘ್ನವಾಗಿ ನೆಡೆಸುತ್ತಿದ್ದರೆಂದು ಹೇಳಲಾಗುತ್ತಿದೆ. ಜಾಂಬವಂತನು ಇಲ್ಲಿಗೆ ಬಂದು ವಿಶ್ರಮಿಸುತ್ತಿದ್ದಾಗ ರಾತ್ರಿ ಸ್ವಪ್ನದಲ್ಲಿ ಶ್ರೀರಾಮನು ಕಾಣಿಸಿಕೊಂಡು ನಾನು ಇಲ್ಲಿ ವಿಗ್ರಹ ರೂಪದಲ್ಲಿದ್ದೇನೆಂದು ಹೇಳಿ ತನ್ನ ವಿಗ್ರಹ ಗಳನ್ನು ಇಲ್ಲಿ ಪ್ರತಿಷ್ಠಾಪಿಸಿಬೇಕೆಂದು ಸೂಚಿಸಿದನಂತೆ. ಅದರಂತೆ ಜಾಂಬವಂತನು ಮರುದಿನ ಶ್ರೀರಾಮನ ವಿಗ್ರಹ ವನ್ನು ಪ್ರತಿಷ್ಠಾಪಿಸಿದನಂತೆ ಶಿಲ್ಪಕಲಾ ನೈಪುಣ್ಯದಿಂದ ಕೂಡಿದ ಈ ದೇವಾಲಯದ ಗರ್ಭಗೃಹದಲ್ಲಿ ಏಕಶಿಲೆಯಲ್ಲಿ ಶ್ರೀಸೀತಾರಾಮ ಲಕ್ಷ್ಮಣ ಮೂರ್ತಿಗಳನ್ನು ಕೆತ್ತಲಾಗಿದೆ. ಆದ್ದರಿಂದ ಈ ಕ್ಷೇತ್ರಕ್ಕೆ ಏಕಶಿಲಾನಗರವೆಂದು ಹೆಸರು ಬಂದಿದೆ. ಕಡಪದಿಂದ 25ಕಿ.ಮೀ.ತಿರುಪತಿಯಿಂದ 120 ಕಿ.ಮೀ. ದೂರದಲ್ಲಿರುವ ಕಡಪ-ಚನ್ನೈ ರಾಷ್ಟ್ರೀಯ ಹೆದ್ದಾರಿ ಯಲ್ಲಿದೆ. ಒಂಟಿಮಿಟ್ಟ ಪೋತನಾಮಾತ್ಯನು ಭಾಗವತವನ್ನು ಈ ಸ್ಥಳದಲ್ಲಿ ರಚಿಸಿದನೆಂದು ಪ್ರಖ್ಯಾತವಾಗಿದೆ. ಒಂಟಿಮಿಟ್ಟ ಕೋದಂಡರಾಮನನ್ನು ದರ್ಶಿಸುವುದರಿಂದ ಭಕ್ತರಿಗೆ ಸ್ವಾಮಿಯ ಕರುಣೆ ಕಟಾಕ್ಷೆಗಳು ಲಭಿಸುತ್ತದೆ.

# ಶ್ರೀರಾಮಚಂದ್ರ ಚರಣೌ ಶರಣಂಪ್ರಪದ್ಯೆ



## ಶ್ರೀ ಕೋದಂಡರಾಮ ದೇವಾಲಯ, ತಿರುಪತಿ :

ಶ್ರೀ ವೆಂಕಟೇಶ್ವರನು ನೆಲೆಸಿರುವ ತಿರುಮಲೆಯ ಪಾದಗಳ ಸನಿಹದಲ್ಲಿರುವ ತಿರುಪತಿ ಪಟ್ಟಣದಲ್ಲಿದೆ ಈ ದೇಗುಲ. ತನ್ನನ್ನು ದರ್ಶಿಸಿದ ಭಕ್ತರ ಕೋರಿಕೆಗಳನ್ನು ಈಡೇರಿಸುವನೀತನೆಂದು ಪ್ರಸಿದ್ಧಿ ಪಡೆದಿರುವನು ಲಂಕೆಯ ಮೇಲೆ ದಂಡೆತ್ತಿ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆದುಕೊಂಡು ಅಯೋಧ್ಯೆಗೆ ಹೊರಟಾಗ ಶ್ರೀರಾಮನೊಂದಿಗೆ ಲಕ್ಷ್ಮಣ, ಹನುಮಂತ,ಸುಗ್ರೀವ,ಜಾಂಬವಂತ,ಅಂಗದ ಮೊದಲಾದವರು ಹೊರಟರು. ಮಾರ್ಗ ಮಧ್ಯದಲ್ಲಿ ತಿರುಪತಿಯಲ್ಲಿ ಕೆಲ ಸಮಯ ವಿಶ್ರಮಿಸಿದರೆಂದು ಪ್ರತೀತಿಯಿದೆ. ಈ ಸಂದರ್ಭದಲ್ಲಿ ಜಾಂಬವಂತನು ಈ ದೇವಾಲಯ ನಿರ್ಮಿಸಿದ. ತಿರುಪತಿ ನಗರದ ಅಗ್ರ ಭಾಗದಲ್ಲಿ ವಿಶಾಲವಾದ ಸ್ಥಳದಲ್ಲಿ ಈ ದೇವಾಲಯ ನಿರ್ಮಾಣವಾಗಿದೆ. ಗರ್ಭಗುಡಿಯಲ್ಲಿ ಕೋದಂಡ ಬಾಣಗಳಿಂದ ಕೂಡಿದ ಶ್ರೀರಾಮಚಂದ್ರನ ಮೂರ್ತಿ ಇದ್ದು ಬಲಭಾಗದಲ್ಲಿ ಸೀತಾದೇವಿಯ ವಿಗ್ರಹ ಹಾಗೂ ಲಕ್ಷ್ಮಣಸ್ವಾಮಿಯ ವಿಗ್ರಹವಿದೆ.ಇಲ್ಲಿ ಹನುಮಂತನ ಮೂರ್ತಿ ಇಲ್ಲದಿರುವುದು ವಿಶೇಷವೆನಿಸಿದೆ. ಜಾಂಬವಂತನು ಪ್ರತಿಷ್ಠಾಪಿಸಿರುವುದರಿಂದ ಇಲ್ಲಿ ಆಂಜನೇಯನ ವಿಗ್ರಹವಿಲ್ಲ. ಆದರೆ ದೇವಾಲಯದ ಹೊರ ಭಾಗದಲ್ಲಿ ಹನುಮಂತನ ಮೂರ್ತಿ ಇದೆ. ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಗಳಿಂದ ಸುಮಾರು 2 ಕಿ.ಮೀ.ದೂರದಲ್ಲಿದೆ.ಈ ದೇವಾಲಯ ತಿರುಪತಿಯಲ್ಲಿ ನೆಲೆಗೊಂಡಿರುವ ಶ್ರೀ ಕೋದಂಡರಾಮಸ್ವಾಮಿಯನ್ನು ದರ್ಶಿಸಿದರೆ ಕೋರಿಕೆಗಳು ಈಡೇರುತ್ತದೆ.



## ಶ್ರೀಪಟ್ಟಾಭಿರಾಮ, ವಾಲ್ಮೀಕಿಪುರಂ :

ಬಹಳ ಹಿಂದೆ ಒಮ್ಮೆ ಜಾಂಬವಂತನು ಅಯೋಧ್ಯೆಯಲ್ಲಿ ಶ್ರೀರಾಮನನ್ನು ದರ್ಶಿಸಿ ಹಿಂತಿರುಗುವಾಗ ಮಾರ್ಗ ಮಧ್ಯ ಈ ಪ್ರದೇಶಕ್ಕೆ ಬರುವಾಗ ಒಂದು ಹುತ್ತದಿಂದ ಬೆಳಕು ಬರುತ್ತಿರುವುದನ್ನು ಗಮನಿಸಿದ ಹುತ್ತದಲ್ಲಿದ್ದ ಶ್ರೀರಾಮಚಂದ್ರನ ಮೂರ್ತಿಯನ್ನು ಹೊರತೆಗೆದು ಆಲಯವನ್ನು ನಿಲ್ಲಿಸಿ ಪ್ರತಿಷ್ಠಾಪಿಸಿದನಂತೆ. ವಾಲ್ಮೀಕಿ ಪುರದ ಅಗ್ರಭಾಗದಲ್ಲಿ ವಿಶಾಲವಾದ ಪ್ರಾಂಗಣದಲ್ಲಿನ ದೇವಾಲಯದ ಗರ್ಭಗೃಹದಲ್ಲಿ ಶ್ರೀರಾಮನು ಸೀತಾದೇವಿ ಹಾಗೂ ತನ್ನ ಸಹೋದರರೊಂದಿಗೆ ಕಾಣ ಸಿಗುತ್ತಾನೆ. ಬಲಹಸ್ತದಲ್ಲಿ ಗ್ರಾಸಮುದ್ರೆ, ಎಡಗೈಯಲ್ಲಿ ವರದಹಸ್ತ ಕೂಡಿರುವ ಶ್ರೀರಾಮನ ಬಲಭಾಗದಲ್ಲಿ ಸೀತಾದೇವಿಯಿರುವಳು.ಆಕೆಯ ಬಲಕ್ಕೆ ಚಾಮರಧಾರಿ ಭರತನು,ಎಡಕ್ಕೆ ಧನುರ್ಧಾರಿಯಾದ ಲಕ್ಷ್ಮಣನ ಮೂರ್ತಿಗಳಿವೆ. ಆಂಜನೇಯನ ವಿಗ್ರಹ ಪ್ರದಕ್ಷಿಣ ಮಂಟಪದಲ್ಲಿರುವುದು ಇಲ್ಲಿನ ವಿಶೇಷವಾಗಿದೆ. ತಿರುಪತಿಯಿಂದ 100 ಕಿ.ಮೀ. ಮದನಪಲ್ಲಿಯಿಂದ 20 ಕಿ.ಮೀ. ದೂರದಲ್ಲಿ ವಾಲ್ಮೀಕಿಪುರವಿದೆ. ಪದ ಕವಿತಾ ಪಿತಾಮಹ ಅನ್ನಮಾಚಾರ್ಯನು ಸ್ತುತಿಸಿರುವ ವಾಲ್ಮೀಕಿಪುರಂನ ಶ್ರೀಪಟ್ಟಾಭಿರಾಮ ಸ್ವಾಮಿಯನ್ನು ದರ್ಶಿಸುವುದರಿಂದ ಕೋರಿದ ಕೋರಿಕೆಗಳೆಲ್ಲ ನೆರವೇರುತ್ತವೆ.



## ಶ್ರೀ ಕೋದಂಡರಾಮ, ಚಂದ್ರಗಿರಿ:

ಚಂದ್ರಗಿರಿಯಲ್ಲಿರುವ ಶ್ರೀಕೋದಂಡರಾಮನನ್ನು ದರ್ಶಿಸಿದರೆ ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯತೆಯುಂಟಾಗುತ್ತದೆಯೆಂದು ಪ್ರಖ್ಯಾತವಾಗಿದೆ.ಚಂದ್ರಗಿರಿ ಪ್ರಾಂತ್ಯ ವಿಜಯನಗರದ ಅರಸರ ಆಳ್ವಿಕೆಗೊಳಪಟ್ಟಿತ್ತು. ವಿಜಯನಗರದ ಚಕ್ರವರ್ತಿಗಳು ಆಗಾಗ ಇಲ್ಲಿಗೆ ಬರುತ್ತಿದ್ದರು. ಇಲ್ಲಿಂದ ತಿರುಮಲೆಗೆ ತೆರಳಿ ಶ್ರೀವೆಂಕಟೇಶ್ವರನನ್ನು ದರ್ಶಿಸಿ ಸೇವೆಸಲ್ಲಿಸುತ್ತಿದ್ದರು.ಇವರ ಸಾಮಂತನು 16 ನೇ ಶತಮಾನದಲ್ಲಿ ಇಲ್ಲಿಗೆ ಬಂದು ವಿಶ್ರಮಿಸುತ್ತಿದ್ದಾಗ, ಸ್ವಪ್ನದಲ್ಲಿ ಸ್ವಾಮಿಯು ಸಾಕ್ಷತ್ಕಾರನಾಗಿ ದೇವಾಲಯ ನಿರ್ಮಿಸಿ ತನ್ನನ್ನು ಪ್ರತಿಷ್ಠಾಪಿಸಬೇಕೆಂದು ಹೇಳಿದನಂತೆ. ಅದರಂತೆ ಆ ಸಾಮಂತನು ಈ ದೇಗುಲ ನಿರ್ಮಿಸಿದ. ಗರ್ಭಗೃಹದಲ್ಲಿ ಸೀತಾಸಮೇತ ಶ್ರೀರಾಮಚಂದ್ರನು ತನ್ನೆಲ್ಲ ಸೋದರರೊಂದಿಗೆ ದರ್ಶನ ನೀಡುತ್ತಿರುವನು. ಇಕ್ಕೆಲಗಳಲ್ಲಿ ಗರುತ್ಮಂತನು ಹಾಗೂ ಹನುಮಂತನು ಇರುವನು. ಈ ಎಲ್ಲ ವಿಗ್ರಹಗಳು ಏಕಪೀಠದಲ್ಲಿರುವುದು ಇಲ್ಲಿನ ವಿಶೇಷವೆನಿಸಿದೆ. ಚಂದ್ರಗಿರಿ ತಿರುಪತಿಯಿಂದ 15 ಕಿ.ಮೀ. ದೂರದಲ್ಲಿದೆ. ಈ ಸ್ವಾಮಿಯ ಸಂದರ್ಶನದಿಂದ ಕುಟುಂಬದ ಸದಸ್ಯರ ನಡುವಿನ ಬಾಂಧವ್ಯ ವೃದ್ಧಿಸುತ್ತದೆ.





28-01-2023 ರಂದು ತಿರುಮಲೆಯಲ್ಲಿ ನಡೆದ ರಥಸಪ್ತಮಿಯ ಸೂರ್ಯಪ್ರಭವಾಹನ ಸೇವೆಯಲ್ಲಿ ಪಾಲ್ಗೊಂಡ ಆಂಧ್ರಪ್ರದೇಶದ ಮುಖ್ಯ ಕಾರ್ಯದರ್ಶಿ ಡಾ|| ಕೆ.ಎಸ್.ಜವಹರ್‌ರೆಡ್ಡಿ, ಐ.ಎ.ಎಸ್.ದಂಪತಿಗಳು ಮತ್ತು ತಿ.ತಿ.ದೇ. ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಸ್. ಭಾರ್ಗವಿ, ಐ.ಎ.ಎಸ್. ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರ ಪತ್ನಿ ವೈ. ಸ್ವರ್ಣಲತ ಹಾಗೂ ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



28-01-2023 ರಂದು ತಿರುಮಲೆಯಲ್ಲಿ ನಡೆದ ರಥಸಪ್ತಮಿ ಸಂದರ್ಭದಲ್ಲಿ ಕಲ್ಪವೃಕ್ಷವಾಹನ ಸೇವೆಯಲ್ಲಿ ಪಾಲ್ಗೊಂಡ ತಿ.ತಿ.ದೇ., ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ಸಿ.ವಿ.ಓ. ಶ್ರೀ ಶೇಷಶೈಲೇಂದ್ರ ಐ.ಆರ್.ಎಸ್., ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರ ಪತ್ನಿ ವೈ. ಸ್ವರ್ಣಲತ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



28-01-2023 ರಂದು ತಿರುಚಾನೂರಿನಲ್ಲಿ ರಥಸಪ್ತಮಿ ಸಂದರ್ಭದಲ್ಲಿ ಸೂರ್ಯ ಪ್ರಭವಾಹನ ಸೇವೆಯಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಭಕ್ತರಿಗೆ ಆಶೀರ್ವದಿಸುತ್ತಿರುವ ದೃಶ್ಯ



25-01-2023 ರಂದು ತಿ.ತಿ.ದೇ., ಬರ್ಡ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ನೂತನ ರಕ್ತ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ.ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್., ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ.ಎಸ್.ಭಾರ್ಗವಿ ಐ.ಎ.ಎಸ್., ಬರ್ಡ್ ಆಸ್ಪತ್ರೆಯ ಪ್ರತ್ಯೇಕಾಧಿಕಾರಿ ಡಾ|| ರೆಡ್ಡಪ್ಪರೆಡ್ಡಿ, ಶ್ರೀ ಪದ್ಮಾವತಿ ಚಿಕ್ಕಮಕ್ಕಳ ಹೃದಯಾಲಯ ಆಸ್ಪತ್ರೆ ನಿರ್ದೇಶಕ ಡಾ|| ಶ್ರೀನಾಥ್ ರೆಡ್ಡಿ ಹಾಗೂ ಇತರ ಅಧಿಕಾರಿಗಳು ಮತ್ತು ವೈದ್ಯರು ಪಾಲ್ಗೊಂಡರು.



26-01-2023 ರಂದು ತಿರುಪತಿ ಆಡಳಿತ ಮಂಡಳಿ ಭವನದಲ್ಲಿ ಭಾರತ ಗಣರಾಜ್ಯೋತ್ಸವದ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಏರಿಸಿ ವಂದನೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ ಐ.ಡಿ.ಇ.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ಶ್ರೀ ವೀರಬ್ರಹ್ಮ ಐ.ಎ.ಎಸ್., ಸಿ.ವಿ. ಮತ್ತು ಎಸ್.ಓ. ಶ್ರೀ ನರಸಿಂಹ ಕಿಶೋರ್ ಐ.ಎ.ಎಸ್., ಅಡಿಷನಲ್,ಸಿ.ವಿ.ಮತ್ತು ಎಸ್.ಓ. ಶ್ರೀ ಶಿವಕುಮಾರ್ ರೆಡ್ಡಿ ಮತ್ತು ಇತರ ತಿ.ತಿ.ದೇ., ಉನ್ನತಾಧಿಕಾರಿಗಳು ಪಾಲ್ಗೊಂಡರು.



31-01-2023 ರಂದು ವಿಶಾಖ ಶಾರದ ಪೀಠದಲ್ಲಿ ಚತುರ್ವೇದಾಹವನ ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿಶಾಖಶಾರದಾ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಮಹಾಸ್ವಾಮಿಗಳು ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



21-01-2023 ರಂದು ತಿರುಮಲೆ ನಾರಾಯಣಗಿರಿ ಉದ್ಯಾನವನದಲ್ಲಿ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವದಲ್ಲಿ ಕರ್ನಾಟಕದ ಮುಳಬಾಗಲ್ ಶ್ರೀಪಾದರಾಜಮಠಾಧಿಪತಿ ಶ್ರೀ ಶ್ರೀ ಶ್ರೀ ಸುಜಯನಿಧಿ ತೀರ್ಥಸ್ವಾಮಿಯವರು, ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರ ಪತ್ನಿ ವೈ. ಸ್ವರ್ಣಲತ ದಾಸಸಾಹಿತ್ಯ ಪ್ರಾಜೆಕ್ಟ್ ವಿಶೇಷಾಧಿಕಾರಿ ಶ್ರೀ ಆನಂದತೀರ್ಥಾಚಾರ್ಯ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



27-01-2023 ರಂದು ತಿ.ತಿ.ದೇವಸ್ಥಾನಮ್ಸ್ ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿದ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್.ರವರು ಪಾಲ್ಗೊಂಡರು.

# ಭಾವಿ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರ ರಥೋತ್ಸವ

- ಶ್ರೀಧರ ರಾಯಸಂ
98453 27129

ಅಮರಾವತಿಯಲ್ಲಿ ಇಂದ್ರದೇವರು ವಜ್ರಾಯುಧ ಪಾಣಿಯಾಗಿ ಶಚಿದೇವಿರೊಡನೆ ಒಡ್ಡೋಲಗದಲ್ಲಿರುವಾಗ, ದೇವಲೋಕದ ವೈಭವಗಳೆಲ್ಲವೂ, ಭೂಲೋಕವನ್ನು ಕುರಿತು ವರ್ಣನೆ ಮಾಡುವುದು ಕಂಡು, ಶಚಿದೇವಿಯು, ಆಶ್ಚರ್ಯಚಕಿತಳಾಗಿ, ಇಂದ್ರದೇವರಿಗೆ,ನಾಥಾ, ಇದೇನಿದು ಆಶ್ಚರ್ಯ!!! ಸುರಲೋಕಕ್ಕೆ ಬಂದ ವೈಭವಗಳೆಲ್ಲವೂ, ಭೂಸುರಲೋಕವನ್ನು ಕುರಿತು ಪಯಣ ಮಾಡುವುವು. ವಿಮಾನಗಳು ಸುತ್ತಿ ಸುತ್ತಿ ಭೂಲೋಕಕ್ಕೆ ಅವರೋಹಣ ಮಾಡುವುವು ಏನು ವಿಪರೀತ ಕಾಲವಿದು ?

**ದೇವೇಂದ್ರ:-** ಅಹುದು. ನಿಜವಾಗಿಯೂ ವಿಪರೀತ ಕಾಲವಿದು. ಕಾರಣವೇನಿರಬಹುದು? ಅಗೋ, ನಾರದ ಮಹರ್ಷಿಗಳು ಆಗಮಿಸುತ್ತಿರುವರು. ಅವರು ತ್ರಿಲೋಕ ಸಂಚಾರಿಗಳು. ಅವರಿಗೆ ತಿಳಿಯದ ವಿಷಯವೇ ಇಲ್ಲ!!! ವಿಚಾರಿಸುವೆ.

ನಾರಾಯಣ, ನಾರಾಯಣ

ನಾರಾಯಣನು. ನೆನೆ ಮನವೇ

(ನಾರದ ಮಹರ್ಷಿಗಳ ಆಗಮನ) ಸಭೆಯಲ್ಲಿ ಎಲ್ಲರೂ ಎದ್ದು ನಿಂತು ಉಚಿತಾಸನವನ್ನು ಕೊಟ್ಟು ನಾರದರನ್ನು ಸನ್ಮಾನಿಸುವರು.)

**ದೇವೇಂದ್ರ :** ನಾರದರೇ , ಸಾಧಾರಣವಾಗಿ ಭೂಲೋಕದಿಂದ ಸುರಲೋಕಕ್ಕೆ ವಿಮಾನಗಳೇರಿ, ನರಸುರಾದಿಗಳು ಬರುವುದುಂಟು. ಕಾಲವೈಪರಿತ್ಯದಿಂದ ಜಗತ್ತು ಉತ್ತಮವಾಗಿ ನಡೆಯುತ್ತಲಿರುವುದು. ಏನಾಶ್ಚರ್ಯವಿದು? ಸುರಲೋಕಕ್ಕೆ ಬರುವ ವೈಭವಗಳೆಲ್ಲವೂ ಭೂಸುರ ಲೋಕವನ್ನು ಕುರಿತು ಪಯಣ ಮಾಡುವುವು.ಅಗೋ ನೋಡಿ ವಿಮಾನಗಳು, ಭರತ ಖಂಡದ ವಿಂಧ್ಯ ಪರ್ವತದ ದಕ್ಷಿಣ ದಿಕ್ಕನ್ನು ಕುರಿತು ಶ್ವೇತದ್ವೀಪ, ಅನಂತಾಸನ, ವೈಕುಂಠ ಎನಿಸಿದ ತಾಣಕ್ಕೆ ಯಾವ ರೀತಿ ಸಂಚಾರ ಮಾಡುತ್ತಿವೆ ನೋಡಿ.

**ನಾರದರು :** ಹೇ. ಸುರವರ್ಯ, ಇದರಲ್ಲಿ ಆಶ್ಚರ್ಯ ಏನಿದೆ? ಯಾವ ವ್ಯಕ್ತಿಯನ್ನು ಉದ್ಧರಿಸುವುದಕ್ಕೆ ಪರಮಾತ್ಮ "ಹಯವದನ."ರೂಪದಿಂದ ವ್ಯಕ್ತನಾದನೋ, ಆ ವ್ಯಕ್ತಿಯೇ, ಭಾವಿಸಮೀರ ವಾದಿರಾಜ ಗುರು ಸೌರ್ವಭೌಮರಾಗಿ, ಯತಿ ಶ್ರೇಷ್ಠರಾಗಿ, ಶ್ರೀಹಯಗ್ರೀವ ದೇವರ ಪಾದ ಪದ್ಮಯುಗಳ,ಚಿಂತಾಮೃತಸ್ವಾದ ಮತ್ತು ಮಧುಕರನಾಗಿ, "ಶ್ರೀಮಧ್ವಮತೋದ್ಧಾರಕ."ನೆಂದು ಜಗದ್ವಿಖ್ಯಾತರಾಗಿ "ಜಗದ್ಗುರು" ಎನಿಸಿ ಸೋದಾ ಕ್ಷೇತ್ರದಲ್ಲಿ ಸಶರೀರ ಬೃಂದಾವನಸ್ಥರಾಗಿ,ಭಕ್ತರಿಗೆ ಕಾಮಿತಾರ್ಥಗಳನ್ನು ನೀಡುವ ಹಯಗ್ರೀವ ದಯಾಶ್ರಯರೆಂದು ಪ್ರಸಿದ್ಧಿಯಾದ ಭಾವಿಸಮೀರ ಶ್ರೀವಾದಿರಾಜರ ರಥೋತ್ಸವ ಜರುಗುತ್ತಲಿದೆ.ಇದನ್ನು ವೀಕ್ಷಿಸಲು ತ್ರಿಮೂರ್ತಿಗಳು. ಅಷ್ಟದಿಕ್ಪಾಲಕರು,ನವಗ್ರಹ ದೇವತೆಗಳು, ಋಷಿಗಳು, ದೇವಗಂಧರ್ವಾದಿಗಳು,ವಿಮಾನರೂಢರಾಗಿ ಅತಿ ಸಂಭ್ರಮದಿಂದ ತೆರಳುತ್ತಿರುವರು.ಸಾಕ್ಷಾತ್. ಶ್ರೀಹರಿಯೇ ಹಯಗ್ರೀವ ರೂಪದಿಂದ ವೈಕುಂಠದಿಂದ ಗರುಡಾರೂಢನಾಗಿಯೂ, ಬ್ರಹ್ಮ ಸರಸ್ವತಿಯರು ಹಂಸಾರೂಢರಾಗಿ ತೆರಳುತ್ತಿದ್ದಾರೆ. ಸರ್ವದೇವತೆಗಳೂ ಇವರನ್ನು ಹಿಂಬಾಲಿಸುವರು. ಸುರೋತ್ತಮನಾದ ನೀನೂ ಸಹ ಶಚಿದೇವಿಯರೊಡನೆ ದಿಗ್ವಿಜಯ ಮಾಡಿರಬಹುದೆಂದು ಅರಿತ್ತಿದ್ದೆವು. ಆಕಸ್ಮಾತ್ತಾಗಿ ನಿನ್ನ ಲೋಕಕ್ಕೆ ನಾವು ಬಂದು ನೋಡಲು, ನೀವು ಇನ್ನೂ ಇಲ್ಲೇ ಇರುವಿರಿ.ಸಾಕ್ಷಾತ್ ಶ್ರೀಹರಿಯೇ ತೆರಳಿರುವುದರಿಂದ ನಾವುಗಳು ಕಾಲ ವಿಳಂಬ ಮಾಡಲು ಸಾಧ್ಯವಿಲ್ಲ ನಾವಿನ್ನು ಹೊರಡುವೆವು.

**ಶಚೀದೇವಿ:** ಏನು ನಾರದರೇ, ತ್ರಿಲೋಕ ಸಂಚಾರಿಗಳು, ತ್ರಿಕಾಲ ಜ್ಞಾನಿಗಳಾದ ನೀವು, ಜರಾಮರಣಾಗ್ರಸ್ತರಾದ, ಅತಿ ವ್ಯಾಧಿಗಳಿಂದ ಪೀಡಿತರಾದ, ನರಮಾನವರನ್ನು, ನರಲೋಕವನ್ನು ಈ ರೀತಿ ಮೂರು ಲೋಕದ ಒಡೆಯನಾದ. ದೇವೇಂದ್ರನ ಸಭೆಯಲ್ಲಿ ಮಿತಿಮೀರಿ ಸ್ತೋತ್ರ ಮಾಡುವಿರಿ? ನರ ಸ್ತುತಿ ನಿಂದ್ಯವಲ್ಲವೇ? ಮನೋಹರ, ಪರಿಮಳ, ಶೀತಲ ಮಂದ ಮಾರುತಗಳಿಂದಲೂ,ಕಾಮಧೇನು,ಕಲ್ಪವೃಕ್ಷ, ಚಿಂತಾಮಣಿ ಪ್ರಮುಖ ಸಕಲ ಸೌಭಾಗ್ಯಗಳಿಂದ ಶೋಭಿಸುತ್ತಿರುವ ಮಹೇಂದ್ರ ಲೋಕವೆಲ್ಲಿ?

ಮಾತೃಗರ್ಭದ ಮೂಲಕ ದಶಮಾಸದಲ್ಲಿ ಅಧೋಮುಖವಾಗಿ ಜನಿಸುವ ನರಸ್ತುತಿಯನ್ನು, ಭೂಸುರ ವರ್ಣನೆಯನ್ನು. ಅತಿಯಾಗಿ ಸ್ತೋತ್ರ ಮಾಡುವುದು ನಿಲ್ಲಿಸಿರಿ.

**ನಾರದರು :** ತಾಯಿ ಶಚಿದೇವಿ, ನಿಮ್ಮ ಸುರಲೋಕದ ವೈಭವ ನನಗೆ ಹೆಮ್ಮೆ ತಂದಿದೆ. ದೇವೇಂದ್ರನ ಸುಖಸಾಧನ ಪರಾಕ್ರಮ, ಕೀರ್ತಿ ತ್ರಿಲೋಕದಲ್ಲಿಯೂ ಹಬ್ಬಿದೆ. ಆದರೆ, ಸೋದೆಯಲ್ಲಿ ಪಂಚವೃಂದಾವನದ ಪೂಜೆ, ಮೂಲ ವೃಂದಾವನದಲ್ಲಿ ಬೃಂದಾವನಸ್ಥರಾಗಿರುವ, ಲಕ್ಷ ಅಲಂಕಾರ ಕೃತಿ

ರಚಿಸಿ, ವೇದವ್ಯಾಸ ದೇವರಿಗೆ ಸಮರ್ಪಿಸಿ,ತಾಯಿ ಗೌರೀ ದೇವಿಯ ಹರಕೆ ಪೂರ್ಣ ಮಾಡಿದ, ಶ್ರೀವಾದಿರಾಜರ ಆರಾಧನೆಯ ಸಂಭ್ರಮ ವರ್ಣಿಸಲಸಾಧ್ಯ!! ಪಂಚ ವೃಂದಾವನಗಳಲ್ಲಿ ಸುತ್ತಲೂ ಬ್ರಹ್ಮ ದೇವರು, ಮುಖ್ಯ ಪ್ರಾಣ ದೇವರು, ಮಹಾವಿಷ್ಣು ರುದ್ರ ದೇವರು, ಮಧ್ಯದಲ್ಲಿ ವಾದಿ ರಾಜರು, ಇರುವರು. ಮಧ್ಯ ವೃಂದಾವನದ ಮುಂಭಾಗದ ಮೇಲೆ, ಹಯಗ್ರೀವ ದೇವರು, ಸುತ್ತಲೂ ಹನುಮ, ಭೀಮ, ಮಧ್ವರು ಮತ್ತು ಅವರ ಉಪಾಸನಾ ಮೂರ್ತಿಗಳು ಕ್ರಮ ವಾಗಿ ಶ್ರೀರಾಮ, ಶ್ರೀಕೃಷ್ಣ, ಶ್ರೀವೇದವ್ಯಾಸರ ಸನ್ನಿಧಿಯಿದೆ. ಶ್ರೀವಾದಿರಾಜರು ವಿರಾಜಮಾನರಾಗಿರುವರು. ಉಪ ವೃಂದಾವನದಲ್ಲಿ, ದಕ್ಷಿಣ ಪೂರ್ವದಲ್ಲಿ ಮತ್ಸ್ಯ,ಕೂರ್ಮ, ವರಾಹ, ದಕ್ಷಿಣ,ಪಶ್ಚಿಮದಲ್ಲಿ ನರಸಿಂಹ, ವಾಮನ, ಉತ್ತರ ಪಶ್ಚಿಮದಲ್ಲಿ ಪರಶುರಾಮ ಶ್ರೀರಾಮ. ಉತ್ತರ ಪೂರ್ವದಲ್ಲಿ, ಮೂರ್ತಿಗಳನ್ನು ಅಲಂಕರಿಸಿರುತ್ತಾರೆ. ಮೂಲ ವೃಂದಾ ವನದ ಮಧ್ಯಭಾಗದಲ್ಲಿ ವಾದಿರಾಜರು, ಮೇಲೆ ಹಯ ಗ್ರೀವ, ಭೂವರಾಹ ದೇವರ ಸನ್ನಿಧಿಯಿದೆ. ಪಂಚವೃಂದಾ ವನದ ಎದುರಿಗೆ ಶ್ರೀ ವೇದವ್ಯಾಸರ ಮೂರ್ತಿ ಕಂಗೊ ಳಿಸುತ್ತಿದೆ.

ಶ್ರೀವಾದಿರಾಜರು ಜನನ ಮರಣಾದಿ ದುಃಖಗಳಿಂದ ದೂರವಾಗಿದ್ದಾರೆ. ಋಜು ದೇವತೆಯಾಗಿ ಭಕ್ತರಿಗೆ ವೃಂದಾ ವನದಲ್ಲಿದ್ದು ಅಭಯ ನೀಡುವರು. ಒಂದಂಶದಲ್ಲಿ ಪಂಚ ವೃಂದಾವನದಲ್ಲಿ, ಮತ್ತೊಂದು ಅಂಶದಲ್ಲಿ ಶ್ವೇತ ದ್ವೀಪ ದಲ್ಲಿರುವರು. ಮಹಾವಿಷ್ಣು, ಮಹಾಲಕ್ಷ್ಮಿ, ಬ್ರಹ್ಮದೇವರು, ವಾಯುದೇವರು, ರುದ್ರದೇವರೊಂದಿಗೆ ಪಂಚ ವೃಂದಾ ವನದ ಸೇವೆಯಿಂದ ತೃಪ್ತರಾಗಿ, ಭಕ್ತ ಜನರ ಅಭೀಷ್ಟೆ ಗಳನ್ನು ಪೂರೈಸಿ ಅನುಗ್ರಹಿಸುವ ಶ್ರೀವಾದಿರಾಜರು ನೆಲೆ ಸಿದ್ದಾರೆ.

ಪಂಚಪರ್ವದಲ್ಲಿ ಶುಕ್ಲ ಪಕ್ಷ ಪಂಚಮಿ. ಪಂಚ ವೃಂದಾವನದ ಸೇವೆ ಮಾಡಿದರೆ ಪೂಜಿಸಿದರೇ, ವಿಶೇಷ ಫಲ ಶ್ರೀವಾದಿರಾಜರು ನೀಡುವರು.

ತೀರ್ಥಾನಾಮುತ್ತಮಂ ತೀರ್ಥಂ ವನಾನಂ ಉತ್ತಮಂ ವನಮ್।
ಕ್ಷೇತ್ರಾಣಾಮುತ್ತಮಂ ಕ್ಷೇತ್ರಂ ಮಮ ವೃಂದಾವನಂ ದ್ವಿಜಃ
ತಸ್ಮಾವೃಂದಾವನ ಮಿದಂ ಸರ್ವಾಭೀಷ್ಟಪ್ರದಂ ಸತಾಮ್
ಪಂಚವೃಂದಾವನೇ ಪುಣ್ಯೇ ಸುಪರ್ವಾಣಶ್ಚ ಸರ್ವದಾ
ವಸಂತಿ ಪುಣ್ಯ ಕರ್ಮಾಣೋ ವಿಶೇಷಾಸ್ತೇ ಚ ಪರ್ವಸು !
ಪಂಚಮ್ಯಾ ಚ ತಿಥೌ ನಿತ್ಯ ಪಂಚಪರ್ವಸು ಪೂಜಯೇತ್ ॥

ಫಾಲ್ಗುಣ ಶುಕ್ಲ ಹುಣ್ಣಿಮೆ ರಮಾತ್ರಿವಿಕ್ರಮ ದೇವರ ರಥೋತ್ಸವ, ಭೂತರಾಜರ ಸನ್ನಿಧಿ, ಧವಳಗಂಗಾ, ಆಕಾಶ ಗಂಗಾ, ಅಂತರಗಂಗಾ, ಅಮೃಕುತಗಂಗಾ, ಪಾತಾಳ ಗಂಗಾ, ಉತ್ತರದಲ್ಲಿ ವೇಣುಗೋಪಾಲ ದೇವರ ಸನ್ನಿಧಾನ, ಪಶ್ಚಿಮದಲ್ಲಿ ಪ್ರಾಣದೇವರ, ರುದ್ರದೇವರ ಸನ್ನಿಧಾನವಿದೆ. ಶ್ರೀವಾದಿರಾಜರು ತಮ್ಮ ಐದನೇ ಪರ್ಯಾಯ ಸೋದೆಯಲ್ಲಿ ವೇಣುಗೋಪಾಲ ದೇವರ ಸನ್ನಿಧಿಯಲ್ಲಿ ಪೂರೈಸಿದ ಸಂದರ್ಭ ನ ಭೂತೋ ನ ಭವಿಷ್ಯತೀ!! ಒಂದು ರೀತಿ ಯಿಂದ ಶ್ವೇತದ್ವೀಪ,ಅನಂತಾಸನ,ವೈಕುಂಠ ಭೂಸುರ ಲೋಕದ ಸೋದೆಯಲ್ಲಿ ಸನ್ನಿಹಿತವಾಗಿದೆ.

ರಮಾ ತ್ರಿವಿಕ್ರಮ ದೇವರ ರಥೋತ್ಸವ ಫಾಲ್ಗುಣ ಶುಕ್ಲ ಹುಣ್ಣಿಮೆ ವಿಜೃಂಭಣೆಯಿಂದ ಜರುಗಿಸಿ, ಶ್ರೀ ವಾದಿರಾಜರು ಸಮಸ್ತ ಭಕ್ತ ಜನರ ಸಮೂಹದೊಂದಿಗೆ, ಭೂತರಾಜರ, ವೇದವೇದ್ಯರ ಸಮಕ್ಷಮದಲ್ಲಿ ಫಾಲ್ಗುಣ ಕೃಷ್ಣ ತೃತೀಯಾ ಬುಧವಾರ, ಸ್ವಾತೀ ನಕ್ಷತ್ರದಲ್ಲಿ ಸಶರೀರ ಬೃಂದಾವನ ಪ್ರವೇಶ ಮಾಡಿದ್ದಾರೆ. ಸಕಲ ಇಷ್ಟಾರ್ಥ ಸಿದ್ಧಿಸುವ ಭಾವಿ ಸಮೀರ ಶ್ರೀವಾದಿರಾಜರು, ವಾಯು ದೇವರ ಮೂರನೇ ಅವತಾರವಾದ ಆನಂದತೀರ್ಥರ ಸಹೋದರರಾದ ವಿಷ್ಣು ತೀರ್ಥರ ಪರಂಪರೆಯಿಂದ ಬಂದ ಯತಿಗಳಾದ ಶ್ರೀವಾಗೀಶ ತೀರ್ಥರಿಂದ ಆಶ್ರಮ ಸ್ವೀಕರಿಸಿ, ವೇದವೇದ್ಯ ತೀರ್ಥರಿಗೆ ವೇದನಿಧಿತೀರ್ಥರಿಗೆ, ಭೂತರಾಜರಿಗೆ, ಸಕಲ ಭಕ್ತ ಜನರಿಗೆ ಇಷ್ಟಾರ್ಥ ನೀಡಿದ ಮಹಾನುಭಾವರು. ಸಕ ಲರೂ ಧನ್ಯತೆ ಪಡೆದ ಪುಣ್ಯಶಾಲಿಗಳು, ಶ್ರೀವಿಶ್ವಪ್ರಿಯ ತೀರ್ಥರು. (ವೃಂದಾವನಾಚಾರ್ಯರು) ಶಿಲಾಲೇಖನ ಮಾಡಿಸಿ, ಅಣು ವೃಂದಾವನಾಖ್ಯಾನ ಸ್ತೋತ್ರ ಭಕ್ತ ಜನರಿಗೆ ರಾಜರ ಮಹಿಮೆ ತಿಳಿಸಿದ ಮಹನೀಯರು. ಸ್ವಾಪ್ನ ವೃಂದಾ ವನಾಖ್ಯಾನ ಶ್ರೀವಾದಿರಾಜರು ತಮ್ಮ ಮಹಿಮೆಯನ್ನು ಏಡ ಮೂಕ ಬ್ರಾಹ್ಮಣ ಲಕ್ಷ್ಮೀಪತಿಗೆ ನಿತ್ಯ ಸ್ವಪ್ನದಲ್ಲಿ ಬೋಧಿಸಿದ ವಿವರವೇ,"ಸ್ವಾಪ್ನವೃಂದಾವನಖ್ಯಾನ" ಎಂದು ಭೂಸುರ ಲೋಕದಲ್ಲಿ ಪ್ರಸಿದ್ಧಿಯಾಗಿದೆ. ಶ್ರೀವಾದಿರಾಜರ ಅದ್ಭುತ ಮಹಿಮೆಗಳಿಂದ ವರ್ಣಿತವಾದ 22 ಅಧ್ಯಾಯಗಳುಳ್ಳ ಸಾರರೂಪದ ವೃಂದಾವನಾಖ್ಯಾನದ ಕೆಲವು ಶ್ಲೋಕ ಗಳನ್ನು ಸಂಗ್ರಹಿಸಿ,"ಅಣುವೃಂದಾವನಾಖ್ಯಾನ" ಎಂಬ ಶಿಲಾಲೇಖನ ಶ್ರೀವಾದಿರಾಜರ ಮೂಲವೃಂದಾವನದ ಹತ್ತಿರ, ಕೆತ್ತಿಸಿ, ಸ್ಥಾಪಿಸಿದ್ದಾರೆ. ಪವಿತ್ರವಾದ ಶಾಲ್ಮಲಾ ನದಿ ದಂಡೆ ಮೇಲೆ ಶ್ರೀವಾದಿರಾಜರು ತಪೋವನದಲ್ಲಿ ತಪಸ್ಸು ಮಾಡಿದ ಸ್ಥಳ,ಶ್ರೀವಾದಿರಾಜರ ಮೃತ್ತಿಕಾಲೇಪನ ತೀರ್ಥ ಪ್ರಾಶನ ಪ್ರಸಾದದಿಂದ ಭೂಸುರ ಲೋಕದ ಜನರ ಅಸಾಧ್ಯ ರೋಗ ಪರಿಹಾರವಾಗುವುದು. ಸಂತಾನ ಪ್ರಾಪ್ತಿಯಾಗಿ ಗುವುದು.

ಶ್ರೀವಾದಿರಾಜರು ಅನೇಕ ಕಾವ್ಯ ಗ್ರಂಥಗಳನ್ನು, ಟೀಕಾ ಟಿಪ್ಪಣಿಗಳನ್ನು ವಿಮರ್ಶಾ ಗ್ರಂಥಗಳನ್ನು, ಅನೇಕ ದೇವರನಾಮಗಳನ್ನು, "ಹಯವದನ". "ಅಂಕಿತನಾಮ ದಿಂದ. ರಚಿಸಿ ಭಕ್ತ ಜನರಿಗೆ ನೀಡಿದ ಮಹಾನುಭಾವರು.

ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ ನಿರೂಪಿಸಿ ಶ್ರೀಮಧ್ವಾಚಾರ್ಯರ ಪಥ ಪಥಿಕರಾದ ಋಜೋತ್ತಮರು.

ಇನ್ನೆಷ್ಟು ವರ್ಣಿಸಲಿ, ಸೋದೆ ಶ್ರೀವಾದಿರಾಜರ ಸೊಬಗನ್ನು. ನಾನು ಜಾಗ್ರತೆಯಾಗಿ,ಭೂಸುರ ಲೋಕದ ಸೋದೆಯ ಶ್ರೀವಾದಿರಾಜರ ಆರಾಧನೆಗೆ ಹೊರಡುವೆನು.ತ್ವರಿತವಾಗಿ ನೀವು ಭೂಸುರಲೋಕಕ್ಕೆ ಹೊರಡಿರಿ !!

ಸೋದಾ ಕ್ಷೇತ್ರದಲ್ಲಿ ಶ್ರೀವಾದಿರಾಜರ ಆರಾಧನಾ ಮಹೋತ್ಸವ ಫಾಲ್ಗುಣ ಕೃಷ್ಣ ತೃತೀಯಾ ಸಂಭ್ರಮದಿಂದ ಜರುಗುತ್ತಿರುವುದು. ಶ್ರೀವಾದಿರಾಜರ ಋಜುತ್ವದಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದ. 64 ವರ್ಷ ರಮಾ ತ್ರಿವಿಕ್ರಮ, ದೇವರ ರಥೋತ್ಸವ, ಶ್ರೀವಾದಿರಾಜರ ಆರಾಧನೆ ಜರುಗಿಸಿದ, ಶ್ರೀವಿಶ್ವೋತ್ತಮತೀರ್ಥರ ಕರಕಮಲ ಸಂಜಾತರಾದ, ಶ್ರೀ ವಿಶ್ವ ವಲ್ಲಭತೀರ್ಥರಿಂದ ಮತ್ತು ಇನ್ನಿತರ ಮಾಧ್ವಯತಿಗಳಿಂದ ವಿಬುಧ ಜನರಿಂದ ಶ್ರೀವಾದಿರಾಜರ ರಥೋತ್ಸವ ಜರುಗತ್ತಲಿದೆ. ದೇವತೆಗಳೆಲ್ಲ ರೂಡಗೂಡಿ, ಶಚಿದೇವಿರೊಡನೆ ದೇವೇಂದ್ರ ಸಹ ವಿಮಾನ ರೂಢರಾಗಿ ಆಗಮಿಸಿದರು. ಗರುಡಾ ರೂಢನಾಗಿ ರುಕ್ಮಿಣಿ ಸಹಿತ ಶ್ರೀಹರಿ ದರ್ಶಿಸುತ್ತಿದ್ದಾರೆ.

ಹರಿದಾಸರು, ಶ್ರೀಹರಿಯನ್ನು, ಮುಖ್ಯ ಪ್ರಾಣ ದೇವರನ್ನು, ಶ್ರೀವಾದಿರಾಜರನ್ನು ಅನನ್ಯ ಭಕ್ತಿಯಿಂದ ಕೊಂಡಾಡುತ್ತಿದ್ದಾರೆ.

ವಾದಿರಾಜ ಮುನಿಪ. ಹಯಮುಖ ಪಾದಕಮಲ ಮಧುಪ ಎಂಬ ಸಂಗೀತನಾದ ಭಕ್ತರಿಂದ ಹೊರ ಹೊಮ್ಮುತ್ತಿದೆ. ಪ್ರೇಮದಿ ಭಜಿಸುವ ಧೀಮಂತರಿಗೆ ಸುಕಾಮಿತವ ಕೊಡುವ, ಮಹಾಮುನೀಶರಿಗೆ ಭಕ್ತ ಜನರು ವಂದಿಸುತ್ತಿದ್ದಾರೆ. ಭಕ್ತರು ಶ್ರೀವಾದಿರಾಜರ ಪರಮಾನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.

ನಾರದರೂ ಸೋದಾ ಕ್ಷೇತ್ರಕ್ಕೆ ಆಗಮಿಸಿ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ, ನಲಿಯುತ್ತಾ, ರಥೋತ್ಸವ ವೀಕ್ಷಿಸಿ ಸಂಭ್ರಮಕ್ಕೆ ಆನಂದಿಸಿದರು. ಬಾಣ, ಬಿರುಸು , ಪಟಾಕಿ ಶಬ್ದ ಆಕಾಶಕ್ಕೆ ತಲುಪಿರಲು, ಶ್ರೀವಾದಿರಾಜರೂ ವೈಕುಂಠಲೋಕ ದಿಂದ ಬಂದು, ಆರಾಧನೆ ವೀಕ್ಷಿಸಿ, ಮುದಗೊಂಡರು.

ತಪೋವಿದ್ಯಾ ವಿರಕ್ತ್ಯಾದಿ ಸದ್ಗುಣೋ ಘಾಕರಾನಮ್ ।
ವಾದಿರಾಜ ಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್॥

॥ಶ್ರೀಕೃಷ್ಣಾರ್ಪಣಮಸ್ತು॥



## ರಸಪ್ರಶ್ನೆಗಳು

**ಸಪ್ತಗಿರಿ ಕ್ವಿಜ್ ಜನವರಿ 2023 ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಎಳ್ಳೆಣ್ಣೆ
2. ಓಂ
3. ಸಂಕ್ರಾತಿ
4. ಉಪಾಸನೆ
5. ಏಳು ಕುದುರೆಗಳು
6. ರಾಮಾವತಾರ
7. ಸೌಮ್ಯ ಕೇಶವ
8. ಸೂರ್ಯ
9. ಸರಸ್ವತಿ
10. ಎಳ್ಳಿನ ದಾನ
11. ಗಂಗಾನದಿ
12. ಗೋಧಿ
13. 96 ಕೋಟಿ
14. ಗದುಗಿನ ಕೋಳಿವಾಡ
15. ಗೋಪಾಲವಿಠಲ

6

**ಜನವರಿ 2022 ತಿಂಗಳ ರಸಪ್ರಶ್ನೆಯ ವಿಜೇತರು**

**ಎನ್.ಎಸ್. ಶುಭಾಷಿಣಿ**
I.M. 26012208580181
ನಂದುಬಳ್ಳಿ ಗ್ರಾಮ,
ಚಾಮರ ಹಳ್ಳಿ ಅಂಚೆ
ಕೋಲಾರ - 563 103



# ಗಜ್ಜುಗದ ಕಾಯಲ್ಲಿ ಔಷಧೀಯ ಗುಣಗಳು ಹೇರಳ

ತೆಲುಗು ಮೂಲ : ಡಾ॥ ಸಿ. ಮಧುಸೂದನಶರ್ಮ
90007 61390
ಅನುವಾದ :- ಶ್ರೀಮತಿ.

ಪ್ರಕೃತಿ ಮಾತೆಯು ಅಸಂಖ್ಯಾತ ಅತ್ಯುತ್ತಮ ಔಷಧೀಯ ಗುಣಗಳನ್ನು ಗಜ್ಜುಗದ ಕಾಯಲ್ಲಿ ಅಡಗಿಸಿ ಮನುಕುಲಕ್ಕೆ ಪ್ರಸಾದಿಸಿದ್ದಾಳೆ.ಗಜ್ಜುಗವು ಒಂದು ಗಟ್ಟಿ ಸಿಪ್ಪೆಯುಳ್ಳ ಬೀಜ ಕೋಶ. ಈ ಬೀಜಗಳು ಬೂದಿ ಬಣ್ಣದಲ್ಲಿದ್ದು ಗಟ್ಟಿಯಾದ ಚಿಪ್ಪನ್ನು ಹೊಂದಿರುತ್ತವೆ. ಆಯುರ್ವೇದ ಔಷಧಾಲಯಗಳಲ್ಲಿ, ಆಯುರ್ವೇದ ಚಿಕಿತ್ಸಾಲಯಗಳಲ್ಲಿ ವರ್ಷವಿಡೀ ಕಡಿಮೆ ದರದಲ್ಲಿ ಲಭಿಸುತ್ತಾ, ಎಲ್ಲಾ ವರ್ಗದ ಜನರಿಗೆ ಕೈಗೆಟುಕುವಂತೆ ದೊರೆಯುತ್ತವೆ.

ಸಂಸ್ಕೃತದಲ್ಲಿ 'ಕುಬೇರಾಕ್ಷ" ಎಂದು ಕರೆಯಲ್ಪಡುವ ಈ ಗಜ್ಜುಗ ಆಂಗ್ಲದಲ್ಲಿ ಫಿವರ್‌ನಟ್ ಎಂದೂ, ಹಿಂದಿಯಲ್ಲಿ ಕಂಟಕರೇಜ ಎಂದು ಕರೆಯಲ್ಪಡುತ್ತದೆ. ಸಿಸಾಲ್ಪಿನೇಸಿ ಎಂಬ ವೃಕ್ಷ ಕುಟುಂಬಕ್ಕೆ ಹೊಂದಿರುವ ಇದರ ಶಾಸ್ತ್ರೀಯ ನಾಮಧೇಯ ಸಿಸಾಲ್ಪಿನಿಯಾ ಬಾಂಡುಕ್. ಈ ಔಷಧ ತಕ್ಕುದಾದ ರೋಗಗಳನ್ನು ಶಮನಗೊಳಿಸಿ ಅತಿ ಸಮರ್ಥವಾದ ರೀತಿಯಲ್ಲಿ ಹೇಗೆ ಕೆಲಸ ಮಾಡುತ್ತದೆಂಬುದನ್ನು ಪ್ರಸ್ತುತ ತಿಳಿದು ಕೊಳ್ಳೋಣ.

**ವೀರ್ಯವೃದ್ಧಿಗೆ:**

ಗಜ್ಜುಗದ ಪುಡಿ 10 ಗ್ರಾಂನ್ನು 50 ಮಿ.ಲೀ. ಹರಳೆಣ್ಣೆ ಬೆರೆಸಿ, ಪುಡಿ ಬಣ್ಣ ಬಿಡುವವರೆಗೂ ಬಿಸಿ ಮಾಡಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಸೋಸಿ ಸಂಗ್ರಹಿಸಿಟ್ಟುಕೊಂಡು ದಿನವೂ ಒಂದು ಬಾರಿ ಲೇಪಿಸಿಕೊಳ್ಳುತ್ತಿದ್ದರೆ ಪುರುಷರಲ್ಲಿ ಉಂಟಾಗುವ ವೃಷಣಗಳ ಬಾವು, ನೋವು, ಸೆಳೆತ, ತುರಿಕೆ, ವೃಕ್ಷಣಗಳ ನರಗಳ ಸೆಳೆತವಂಥವು ತಗ್ಗುತ್ತವೆ.

ಗಜ್ಜುಗ ಬೀಜವನ್ನು ಆಗಾಗ ಸೇವಿಸಬೇಕಾಗಿ ಬಂದಲ್ಲಿ ಅದನ್ನು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಮಾಡಿ ತುಪ್ಪದಲ್ಲಿ ಹುರಿದು ಪುಡಿ ಮಾಡಿ ಬಳಸಬೇಕಾಗುತ್ತದೆ.

**ಒಣಕೆಮ್ಮು ಕಡಿಮೆಯಾಗಲು :**

ಗಜ್ಜುಗ ಬೀಜದ ಪುಡಿ, ಹಿಪ್ಪಲಿ ಪುಡಿ 10 ಗ್ರಾಂ ನಷ್ಟು ತಕ್ಕಂತೆ ತೆಗೆದುಕೊಂಡು ದಿನವೂ ಬೆಳಗ್ಗೆ 1-2 ಗ್ರಾಂ ನಷ್ಟು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಕಫವೆಲ್ಲಾ ಹೊರಬಂದು, ಶ್ಲೇಷ್ಮ ದೋಷ ತೊಲಗಿ ಶ್ವಾಸಕ್ರಿಯೆ ಸಕ್ರಿಯವಾಗುತ್ತದೆ.

**ಮೂಲವ್ಯಾಧಿ :**

ಗಜ್ಜುಗದ ಬೀಜದ ಚೂರ್ಣಕ್ಕೆ ತಕ್ಕಷ್ಟು ಲೋಳೆಸರ (ಅಲೋವೇರ) ಕಲಿಸಿ ನಾದಿ ಶೇಂಗಾ ಬೀಜದಷ್ಟು ಮಾತ್ರೆಗಳನ್ನು ಮಾಡಿ, ನೆರಳಲ್ಲಿ ಚೆನ್ನಾಗಿ ಒಣಗಿಸಿ ಶೇಖರಿಸಿಕೊಂಡು ದಿನವೂ 3 ಬಾರಿ ಆಹಾರ ಸೇವನೆಯ ನಂತರ ಮಾತ್ರೆ ನುಂಗಿ ತಕ್ಕಷ್ಟು ನೀರು ಸೇವಿಸುತ್ತಿದ್ದರೆ. ಮೂಲವ್ಯಾಧಿಯಿಂದ ಉಂಟಾಗುವ ನೋವು, ಗಂಟು, ಉರಿತ, ತುರಿಕೆ, ಸೆಳೆತಗಳು ಕಡಿಮೆಯಾಗುತ್ತವೆ.

**ಪ್ರೋಸ್ಟೇಟ್ ಗ್ರಂಥಿ (ಪುರುಷಗ್ರಂಥಿ ) ಬಾವಿಗೆ:**

ಗಜ್ಜುಗ ಬೀಜದ ಪುಡಿ 40 ಗ್ರಾಂ ಕಾಳಮೆಣಸಿನ ಪುಡಿ 10 ಗ್ರಾಂ, ಸ್ವಲ್ಪ ಇಂಗು, ತುಪ್ಪದೊಂದಿಗೆ ಹುರಿದು ಮಾಡಿದ ಪುಡಿ 5 ಗ್ರಾಂನಷ್ಟು ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ. ಮೂತ್ರ ಸ್ವಲ್ಪ ಸ್ವಲ್ಪ ಸ್ರವಿಸುತ್ತಿದ್ದರೆ ಅಸಂಪೂರ್ಣ ಮೂತ್ರ ವಿಸರ್ಜನೆಯಂಥ ಪುರುಷರಲ್ಲಿ ಬರುವ ಮೂತ್ರ ಸಂಬಂಧಿ ಕಾಯಿಲೆಗಳಿಗೆ ಉತ್ತಮವಾದ ಪರಿಷ್ಕಾರ ದೊರಕುತ್ತದೆ.

**ಮುಟ್ಟಿನ ನೋವಿಗೆ :**

ಗಜ್ಜುಗದ ಪುಡಿ, ಹಿಪ್ಪಲಿ, ಕಾಳಮೆಣಸು , ಶುಂಠಿ ಪುಡಿಗಳನ್ನು ಸಮಾನವಾಗಿ ಕಲಿಸಿಟ್ಟುಕೊಂಡು ದಿನಕ್ಕೆ ಒಂದೆರಡು ಬಾರಿ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಶೀಘ್ರವಾಗಿ ಈ ಸಮಸ್ಯೆ ಬಗೆಹರಿಯುತ್ತದೆ. ಇದರ ಜೊತೆಗೆ ಸ್ತ್ರೀಯರಲ್ಲಿ ಮುಟ್ಟಿಗೆ ಮೊದಲು ಉಂಟಾಗುವ ಶಾರೀರಕ ಅಸೌಕರ್ಯ, ಸೊಂಟನೋವು ತಲೆನೋವು, ಹಸಿವಾಗದಿರು ವುದು ಇಂತಹ ಸಮಸ್ಯೆಗಳು ತಗ್ಗುವುದಲ್ಲದೇ ಮುಟ್ಟು ಕಾಲಕ್ಕೆ ಸರಿಯಾಗಿ ಆಗುತ್ತಾ,ಮುಟ್ಟಿನ ಸ್ರಾವ ಸಹಾ ಸಕ್ರಮವಾಗಿ ಜರಗುತ್ತದೆ.

**ಮಲೇರಿಯಾ :**

ಇದೇ ಪುಡಿಯನ್ನು ದಿನವೂ ಮೂರು ಬಾರಿ ಇದೇ ಪ್ರಮಾಣದಲ್ಲಿ 50 ಮಿ.ಲೀ. ಮಜ್ಜಿಗೆಯಲ್ಲಿ ಕಲಿಸಿ ತೆಗೆದುಕೊಳ್ಳುತ್ತಿದ್ದರೆ ಮಲೇರಿಯಾದಂತಹ ವಿವಿಧ ಬಗೆಯ ಜ್ವರಗಳು ಕಡಿಮೆಯಾಗುತ್ತವೆ. ಹಿಪ್ಪಲಿ,ಕಾಳಮೆಣಸು,ಶುಂಠಿ ಸಮಾನವಾಗಿ ಕಲಿಸಿ ಮಾಡಿದ ಚೂರ್ಣವು (ತ್ರಿಕೂಟ ಚೂರ್ಣ) ಎಂಬುವ ಹೆಸರಿನಲ್ಲಿ ಆಯುರ್ವೇದ ಔಷಧಾಲಯಗಳಲ್ಲಿ ಲಭಿಸುತ್ತದೆ.

**ಚೇಳು ಕಡಿತಕ್ಕೆ:**

ಗಜ್ಜುಗದ ಬೀಜವನ್ನು ನೀರಿನಲ್ಲಿ ನೆನೆಸಿ ತೇಯಿದ ಗಂಧವನ್ನು ಹಚ್ಚಿ ಕೆಂಡದ ಶಾಖಕ್ಕೆ ಬಡ್ಡಿದರೆ ತಕ್ಷಣವೇ ಚೇಳು ವಿಷ ನಿಸ್ತೇಜಗೊಂಡು ಉರಿ, ನೋವು, ಬಾಧೆಗಳು ತೊಲಗುತ್ತವೆ.

**ದಂತಧಾವನ ಚೂರ್ಣ :**

ಗಜ್ಜುಗದ ಬೀಜಗಳನ್ನು ಸುಟ್ಟು ಮಾಡಿದ ಬೂದಿ, ಅಡಿಕೆ ದಂಟಿನ ಬೂದಿ, ಸ್ಪಟಿಕದ ಪುಡಿ ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ದಂತಧಾವನ ಚೂರ್ಣವಾಗಿ ಬಳಸಿದರೆ ಹಲ್ಲುನೋವು ಹಳದಿ ಹಲ್ಲು, ವಸಡು ಬೇನೆ, ನೋವು,ವಸಡಿನಿಂದ ಕೀವು,ರಕ್ತ ಸೋರು ವುದು ಮೊದಲಾದ ಹಲ್ಲು-ವಸುಡು ಸಮಸ್ಯೆಗಳು ತಗ್ಗುತ್ತವೆ.

**ಕೀಲು ನೋವಿಗೆ:**

100 ಗ್ರಾಂ ಬೆಳ್ಳುಳ್ಳಿ ಎಸಳುಗಳನ್ನು ಚೆನ್ನಾಗಿ ನುರಿದು ಅದರಲ್ಲಿ ಗಜ್ಜುಗದ ಬೀಜ ಪುಡಿ 50 ಗ್ರಾಂ,ಕಾರ್ಜಿಕಾಯಿ ಪುಡಿ 50 ಗ್ರಾಂ, ಬೇಹುದಾ ಪುಡಿ 50 ಗ್ರಾಂ ಕಲಿಸಿ ಮೆತ್ತಗೆ ನುರಿದು ಬಟಾಣಿ ಅಳತೆಯ ಮಾತ್ರೆಗಳನ್ನು ಮಾಡಿ ನೆರಳಿನಲ್ಲಿ ಒಣಗಿಸಿ ಬೆಳಗ್ಗೆ ಸಾಯಂಕಾಲ ಬಾರಿಯೊಂದಕ್ಕೆ ಒಂದು ಮಾತ್ರೆಯನ್ನು ಎರಡು ಬಾರಿ ಚಪ್ಪರಿಸಿ ಸೇವಿಸುತ್ತಿದ್ದರೆ ವಿವಿಧ ಬಗೆಯ ಕೀಲು ನೋವು, ಮಾಂಸಖಂಡದನೋವು, ಸೊಂಟ ನೋವು, ಭುಜದನೋವು,ಮೊಣಕಾಲುನೋವು ಕಡಿಮೆಯಾಗಿ ಆರೋಗ್ಯ ವಾಗಿರುತ್ತದೆ.

**ಗರ್ಭಾಶಯದ ಗಂಟುಗಳು (ಫೈಬ್ರಾಯ್ಡ್ಸ್) ಮುಟ್ಟಿನ ಸಮಸ್ಯೆಗಳು (ಪಿ.ಸಿ.ಓ.ಡಿ):**

ದಿನವೂ ಒಂದೆರೆಡು ಬಾರಿ 200 ಮಿ.ಲೀ ನೀರಿನಲ್ಲಿ ಒಂದು ಗಜ್ಜುಗದ ಬೀಜವನ್ನು ಪುಡಿ ಮಾಡಿ ಹಾಕಿ ಆಯುರ್ವೇದ ವಿಕ್ರಯಾಲಯಗಳಲ್ಲಿ ಲಭಿಸುವ ಗುರ್ಮಾರ್ ಪುಡಿ, ಕುಟ್ಟಿದ 10 ಕಾಳಮೆಣಸು ಹಲಿದು 100 ಮಿ.ಲೀ.ನೀರು ಮಿಗುಲುವಂತೆ ಸಣ್ಣ ನುರಿಯಲ್ಲಿ ಮರಳಿಸಿ, ಕೆಳಗಿಳಿಸಿ ಆರಿದ ನಂತರ ಶೋಧಿಸಿ ಒಂದು ಟೀ ಸ್ಪೂನ್ ಜೇನು ಕಲಿಸಿ ಸೇವಿಸುತ್ತಿದ್ದರೆ ಕಡಿಮೆಯಾಗುತ್ತದೆ.

ಕೇಂದ್ರ ಸರ್ಕಾರದ 'ಆಯುಷ್' ವಿಭಾಗದವರು ಪರಿಶೋಧನೆಗಳನ್ನು ಮಾಡಿ ರೂಪುಗೊಳಿಸಿರುವ ಮಲೇರಿಯಾ ಜ್ವರವನ್ನು ಶಮನಗೊಳಿಸಬಲ್ಲ ಔಷಧಿ ಆಯುಷ್ -64 ನಲ್ಲಿ ಗಜ್ಜುಗದ ಬೀಜದ ಪುಡಿಯನ್ನು ಸಹಾ ಬಳಸುತ್ತಾರೆ.

ಕುಬೇರಾಕ್ಷದಿವಟಿ, ವಿಷಮಜ್ವರಘ್ನವಟಿ ಇಂತಹ ಆಯುರ್ವೇದ ತಯಾರಿಕೆಗಳಲ್ಲೂ ಸಹಾ ಈ ಗಜ್ಜುಗ ಬೀಜದ ಪುಡಿಯನ್ನು ಉಪಯೋಗಿಸಲಾಗುತ್ತದೆ.



## ನಾಗಲಾಪುರಂ ಶ್ರೀ ವೇದನಾರಾಯಣ ಸ್ವಾಮಿಯ ತೆಪ್ಪೋತ್ಸವಗಳು

ನಾಗಲಾಪುರಂ ಶ್ರೀವೇದನಾರಾಯಣ ಸ್ವಾಮಿಗೆ ಈ ವರ್ಷ ಮಾರ್ಚ್ 24 ರಿಂದ 28 ರ ವರೆಗೆ ಐದು ದಿನಗಳ ಕಾಲ ಸೂರ್ಯ ಸೇವೆ ನಡೆಯಲಿದೆ.

ಸಂಜೆ ನಾಲ್ಕರಿಂದ ಐದು ಗಂಟೆಯೊಳಗೆ ನಡೆಯುವ ಈ ಸೂರ್ಯ ಸೇವೆಯಲ್ಲಿ ಧ್ವಜಸ್ತಂಭ, ಬಲಿಪೀಠ ಅಡ್ಡ ಬರುವುದಿಲ್ಲ. ಸೂರ್ಯಕಿರಣಗಳು ಮೊದಲೆರಡು ದಿನ ಪಾದಗಳನ್ನು ಸ್ಪರ್ಶಿಸಿ ನಂತರ ಹೊಕ್ಕಳು, ಕೊನೆಯ ಎರಡು ದಿನಗಳು ಮುಖಾರವಿಂದವನ್ನು ಸ್ಪರ್ಶಿಸುತ್ತದೆ. ಇದನ್ನು ನೋಡಲು ಅಧಿಕ ಸಂಖ್ಯೆಯಲ್ಲಿ ಜನರು ಹಾಜರಾಗುತ್ತಾರೆ.

ಈ ಸೂರ್ಯ ಸೇವೆಗೆ ತೆಪ್ಪೋತ್ಸವಗಳೂ ನಡೆಯುತ್ತವೆ. ಮೊದಲನೆ ದಿನ ಶ್ರೀ ಸೀತಾ ಸಮೇತ ಶ್ರೀರಾಮಚಂದ್ರ ಸ್ವಾಮಿಗೆ, ಎರಡನೆಯ ದಿನದಿಂದ ಐದನೇ ದಿನದವರೆಗೆ ಶ್ರೀ ವೇದವಲ್ಲಿ ಸಮೇತ ಶ್ರೀವೇದನಾರಾಯಣ ಸ್ವಾಮಿಗೆ ನಡೆಯುತ್ತದೆ.

ತಿರುಮಲೆ ಬ್ರಹ್ಮೋತ್ಸವಗಳ ಕ್ರಮದಲ್ಲಿಯೇ ಇಲ್ಲಿಯೂ ಕೂಡ ಬ್ರಹ್ಮೋತ್ಸವಗಳು ನಡೆಯುತ್ತವೆ. ಮತ್ಸ್ಯಜಯಂತಿಯನ್ನೂ (24-03-2023) ಅದ್ದೂರಿಯಾಗಿ ಆಚರಿಸಲಾಗಿದೆ.



# ಆದರ್ಶಮಾತಾ ಕೌಶಲ್ಯದೇವಿ

- ಎಸ್. ಆರ್. ಪೂಜಾರ್ ಕುಕನೂರು

ಈ ಸೃಷ್ಟಿಯ ಆಧಾರ ನಾರಿಮಣಿಯಾಗಿದ್ದಾಳೆ. ಆದ್ದರಿಂದ ನಾರಿಯ ಮಹತ್ವವು ನಿರ್ವಿವಾದ ರೂಪದಿಂದ ಸ್ವೀಕೃತವಾಗಿದೆ. ಆದಿದೇವ ಶ್ರೀಶಿವನ ಅರ್ಧನಾರೀಶ್ವರರ ರೂಪವು ಇದೇ ತತ್ವವನ್ನು ಪ್ರಮಾಣಿತಗೊಳಿಸುತ್ತದೆ. ನಾರಿಯು ನರನ ತೇಜವನ್ನು ಧಾರಣೆ ಮಾಡುತ್ತಾಳೆ. ಈ ಪೃಥ್ವಿಯಲ್ಲಿ ಜನಿಸಿದ ಮಗುವು ತನ್ನ ತಾಯಿಯ ಅಮೃತತ್ವದ ದುಗ್ಧವನ್ನು ಪಾನಮಾಡಿ ದೊಡ್ಡದಾಗುತ್ತದೆ ಹಾಗೂ ಸಂಸ್ಕಾರವನ್ನು ಪಡೆಯುತ್ತದೆ. ಆದ್ದರಿಂದ ಸಂತಾನದ ಮೇಲೆ ಪಿತನಿಗಿಂತಲೂ ಮಾತೆಯದು ಅಧಿಕವಾಗಿರುತ್ತದೆ. ಸಂತಾನವು ಮಾತಾ-ಪಿತರಿಗೆ ಋಣಿಯಾಗಿರುತ್ತದೆ.

ಗೋಸ್ವಾಮಿ ತುಳಸಿದಾಸರು ತಮ್ಮ "ಶ್ರೀರಾಮ ಚರಿತ ಮಾನಸ" ದಲ್ಲಿ ಮಾತಾ ಕೌಶಲ್ಯಾಳ ಮುಖದಿಂದ ಈ ತಥ್ಯವನ್ನು ಸ್ಪಷ್ಟ ರೂಪದಲ್ಲಿ ಹೊಗಳಿದ್ದಾರೆ. ಪ್ರಭು ಶ್ರೀರಾಮನ ಮಲತಾಯಿಯಾದ ಕೈಕಾದೇವಿಯು ತನ್ನ ಪತಿದೇವರಾದ ಮಹಾರಾಜಾ ದಶರಥನಿಂದ ಎರಡು, ವರಗಳನ್ನು ಕೇಳುವಳು ಹಾಗೂ ಪಡೆಯುವಳು. ಆ ಎರಡು ವರಗಳು ಯಾವುವೆಂದರೇ ತನ್ನ ಮಗನಾದ ಭರತನಿಗೆ ಅಯೋಧ್ಯೆಯ ಸಿಂಹಾಸನ ನೀಡುವುದು. ಇನ್ನೊಂದು ವರ ಯಾವುದೆಂದರೆ ಕೌಶಲ್ಯಾದೇವಿಯ ಪುತ್ರನಾದ ಶ್ರೀರಾಮನಿಗೆ ಹದಿನಾಲ್ಕು ವರ್ಷಕಾಲ ವನವಾಸಕ್ಕೆ ಕಳಿಸುವುದು ಹಾಗೂ ವನವಾಸದ ಸಂದರ್ಭ ಸನ್ಯಾಸಿಯಂತೆ ಇರುವುದು. ಕೈಕೇಯಿಯ ಈ ಎರಡು ವರಗಳು ದಶರಥ ಮಹಾರಾಜನನ್ನು ಕಂಗೆಡಿಸಿದವು ಆದರೆ ಕೊಟ್ಟಮಾತಿಗೆ ತಪ್ಪಿ ನಡೆಯಲಾರದೆ ಅನಿವಾರ್ಯತೆ ಉಂಟಾಯಿತು. ಆತನು ದುಃಖ ವ್ಯಾಕಲತೆಯಿಂದ ಬಳಲಿ ಬೆಂಡಾದನು. ಆದರೆ ಕೌಶಲ್ಯಾನಂದನ ಶ್ರೀರಾಮನು ತನ್ನ ಪಿತೃವಾಕ್ಯ ಪರಿಪಾಲನೆಗಾಗಿ ತುಂಬ ಸಂತಸದಿಂದ ವನಕ್ಕೆ ನಾರುಮುಡಿಯುಟ್ಟು ಸಿದ್ಧನಾದನು ಹಾಗೂ ತನ್ನ ಮಾತಾಶ್ರೀ ಕೌಶಲ್ಯಳ ಬಳಿಗೆ ಬಂದು ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ತೆರಳು ಅಪ್ಪಣೆ ಕೊಡುವಂತೆ ವಿನಂತಿಸಿದನು. ಶ್ರೀರಾಮನೇನೋ ಯಾವುದೇ ಆತಂತಕವಿಲ್ಲದೆ ದೃಢಮನಸ್ಸಿನಿಂದ ತನ್ನ ಮಾತಾಶ್ರೀಯವರ ಅಪ್ಪಣೆಗಾಗಿ ಭಿನ್ನವಿಸಿದನು. ಆದರೆ ಕೌಶಲ್ಯಾದೇವಿ ಮಗನ ಅಗಲಿಕೆ ತಾಳಲಾರದೆ ಮೂಕವಿಸ್ಮಯಳಾಗಿ ದುಃಖ ತಾಳಲಾರದೆ ನೆಲಕ್ಕೆ ಕುಸಿದಳು. ಹದಿನಾಲ್ಕು ವರ್ಷ ಪ್ರೀತಿಯ ಮಗ ಶ್ರೀರಾಮನನ್ನು ಅಗಲಿರಲಾರದೆ ದಿಗ್ಭ್ರಾಂತಳಾದಳು. ಕೌಶಲ್ಯಾದೇವಿ ವನವಾಸಕ್ಕೆ ತೆರಳಲು ಒಪ್ಪಿಗೆ ನೀಡಲು ಕಂಗಾಲಾದಳು. ಸ್ವಲ್ಪ ಸಮಯ ಯೋಚಿಸಿದ ಬಳಿಕ ಶಾಂತಚಿತ್ತಳಾಗಿ ನಾನು ಶ್ರೀರಾಮನಿಗೆ ವನವಾಸಕ್ಕೆ ತೆರಳಲಿರುವುದನ್ನು ತಡೆಯಲಾರೆ, ಹಾಗೂ ಆತನ ಪಿತೃ ವಾಕ್ಯ ಪರಿಪಾಲಿಸಲು ಸಮ್ಮತಿಸದೆ ಇರಲಾರೆ. ನಾನು ನನ್ನ ಪುತ್ರವಾತ್ಸಲ್ಯದಿಂದ ನನ್ನ ಪತಿವ್ರತಾ ಧರ್ಮಕ್ಕೆ ಭಗವನ್ನುಂಟು ಮಾಡಲಾರೆ. ಆಗ ಕೌಶಲ್ಯಾದೇವಿ ಉಕ್ಕುತ್ತಿರುವ ಕಣ್ಣೀರನ್ನು ತಡೆದು ತನ್ನ ಸುಪುತ್ರ ಶ್ರೀರಾಮನಿಗೆ ಹೀಗೆ ಹೇಳಿದಳು. - ಮಗು ಶ್ರೀರಾಮ ನಿನ್ನ ಪಿತರಾದ ದಶರಥ ಮಹಾರಾಜರು ನಿನಗೆ ಏಕೆ ಇಂಥಹ ದಂಡವನ್ನು ವಿಧಿಸಿದರು? ಇದರ ಕಾರಣವಾದರೂ ಏನು? ಎಂದು ಪ್ರಶ್ನಿಸಿದಳು. ಶ್ರೀರಾಮನು ತನ್ನ ತಾಯಿಯ ಪ್ರಶ್ನೆಗೆ ಶಾಂತ ರೀತಿಯಿಂದ ಹೇಳಿದ್ದೇನೆಂದರೆ ಮಾತಾ ನನ್ನ ಪಿತಾಶ್ರೀಯವರು ಮಾತೆ ಕೈಕಾದೇವಿಗೆ ವಚನ ನೀಡಿದ ತಪ್ಪಿಗೆ ನನಗೆ ಅನಿವಾರ್ಯವಾಗಿ ಈ ರೀತಿ ಆದೇಶಿಸಿದ್ದಾರೆ. ಇದರಲ್ಲಿ ಅವರ ಯಾವ ತಪ್ಪು ಇರುವುದಿಲ್ಲ. ಇದಲ್ಲದೆ ನನ್ನ ಸಹೋದರ ಭರತನಿಗೆ ಅಯೋಧ್ಯಾ ಸಿಂಹಾಸನದಲ್ಲಿ ಪಟ್ಟಾಭಿಷೇಕ ನೆರವೇರಿಸಲು ಒಪ್ಪಿಗೆ ನೀಡುವಲ್ಲಿ ವಚನವನ್ನು ನೀಡಿದ್ದಾರೆ ಎಂದು ಶ್ರೀರಾಮನು ವಿವರವಾಗಿ ಹೇಳಿದಾಗ ಕೈಕಾದೇವಿಯ ಪುತ್ರ ವಾತ್ಸಲ್ಯದ ಬಗ್ಗೆ ಕೌಶಲ್ಯಾದೇವಿಗೆ ಅಸೂಯೆಯುಂಟಾಗಲಿಲ್ಲ. ಇಂಥಹ ಸಮಯದಲ್ಲಿ ನಾನು ಶ್ರೀರಾಮನನ್ನು ವನವಾಸಕ್ಕೆ ತೆರಳದಂತೆ ತಡೆದರೆ ತನ್ನ ಪಾತಿವ್ರತ್ಯಕ್ಕೆ ಭಂಗ ಬರುವುದು

ಹಾಗೂ ಕೈಕಾದೇವಿಯೊಂದಿಗೆ ವಿರೋಧ ಕಟ್ಟಿಕೊಳ್ಳ ಬೇಕಾಗುವುದು ಎಂದು ಯೋಚಿಸಿದ ಕೌಶಲ್ಯಾದೇವಿ ಎಚ್ಚರ ಗೊಂಡು ತನ್ನ ಪ್ರೀತಿಯ ಪುತ್ರನಾದ ಶ್ರೀರಾಮನಿಗೆ ಹೀಗೆ ಹೇಳಿದಳು - ಶ್ರೀರಾಮ ನಿನ್ನ ಪಿತಾಶ್ರೀಯವರ ಆಜ್ಞೆಹಾಗೂ ಕೈಕಾದೇವಿಯ ಅನುಮೋದನೆಗೆ ನನ್ನ ಅನುಮೋದನೆ ಸಂಪೂರ್ಣವಿದೆ. ನೀನು ಪಿತೃವಾಕ್ಯ ಪರಿಪಾಲಕನಾಗಿರುವೆ. ವನವಾಸದ ಹದಿನಾಲ್ಕು ವರ್ಷಗಳು ಕಣ್ಣುಮುಚ್ಚಿ ಕಣ್ಣು ತೆರೆಯುವುದರಲ್ಲಿ ಬರುತ್ತವೆ.ನೀನು ಯಾವ ತೊಂದರೆ ಇಲ್ಲದೆ ಮರಳಿ ಅಯೋಧ್ಯೆಗೆ ಬರುವೆ. ಆದರೆ ನೀನು ನನ್ನನ್ನು ಮರೆಯದಿರು.ನೀನು ವನವಾಸದ ಅವಧಿ ಮುಗಿಸಿ ಬರುವವರೆಗೆ ನಿನ್ನ ನಿರೀಕ್ಷೆಯಲ್ಲಿರುವೆ. ನಾನು ಪ್ರತಿದಿನಗಳನ್ನು ನಿನ್ನ ನೆನಪಿನಲ್ಲಿಯೇ ಇರುವೆ ಎಂದು ತನ್ನ ಕಣ್ಣೀರನ್ನು ತಡೆದು ಆಶೀರ್ವದಿಸಿ ತನ್ನ ಮಗನನ್ನು ಬೀಳ್ಕೊಟ್ಟಳು.

ಶ್ರೀರಾಮನು ವನವಾಸಕ್ಕೆ ತೆರಳಿಲಿರುವ ಸಮಾಚಾರವನ್ನು ಕೇಳಿದ ಸೀತಾದೇವಿ ಧಾವಿಸಿ ತನ್ನ ಅತ್ತೆಯವರ ಬಳಿಗೆ ದುಃಖಿತಪ್ತಳಾಗಿ ಓಡೋಡಿ ಬಂದಳು. ಕೌಶಲ್ಯದೇವಿಯ ಪಾದಗಳನ್ನು ತನ್ನ ಕಣ್ಣೀರಿನಿಂದ ತೊಳೆದು ಅಮ್ಮಾನನಗೂ ಕೂಡಾ ನನ್ನ ಪತಿದೇವರೊಂದಿಗೆ ವನವಾಸಕ್ಕೆ ಹೋಗಲು ಅಪ್ಪಣೆ ನೀಡಿ ಎಂದು ಅಂಗಲಾಚಿನದಳು. ಆಗ ಮಾತಾ ಕೌಶಲ್ಯಾದೇವಿ ಸೀತೆಗೆ ಹೀಗೆ ಹೇಳಿದಳು. ಮಗು ನೀನಿನ್ನೂ ಚಿಕ್ಕವಳು. ವನವಾಸದ ಕಠಿಣ ಜೀವನವನ್ನು ನೀನು ಸಹಿಸಲಾರೆ. ಅರಣ್ಯದಲ್ಲಿ ಕಲ್ಲು-ಮುಳ್ಳುಗಳಿಂದ ಕೂಡಿದ ಮಾರ್ಗಗಳು ಭಯಾನಕವಾದ ಕಾಡು, ಹಾಗೂ ಕ್ರೂರ ಮೃಗಗಳ ಧ್ವನಿ ಹಾಗೂ ಅಪಾಯ ಇವುಗಳನ್ನು ಎದುರಿಸಲು ನೀನು ಇನ್ನೂ ಸಮರ್ಥಳಾಗಿಲ್ಲ. ನೀನು ಸಮತಲ ರಾಜಮಾರ್ಗದಲ್ಲಿ ಕೂಡಾ ತಿರುಗಾಡಿಲ್ಲ. ಅಂತಹದರಲ್ಲಿ ಬರಿಗಾಲಲ್ಲಿ ಹೇಗೆ ನಿನ್ನ ಪತಿಯನ್ನು ಹಿಂಬಾಲಿಸುವೆ? ಆದ್ದರಿಂದ ಹಟಮಾಡದೆ ನಿನ್ನ ಪತಿದೇವರು ಮರಳಿ ಬರುವವರೆಗೆ ನನ್ನ ಜೊತೆಗೆ ಅರಮನೆಯಲ್ಲಿ ಇರು ಎಂದು ಪ್ರೀತಿಯಿಂದ ಸೀತೆಯ ಮೈದಡವಿ ಸಮಾಧಾನ ಪಡಿಸಿದಳು.ಮಗು ನಿನಗೆ ಬೇಸರವುಂಟಾದರೆ ನಿನ್ನ ತವರಿಗೆ ಕೆಲದಿನ ಹೋಗಿಬಾ. ನನ್ನ ಶ್ರೀರಾಮ ವನವಾಸದಿಂದ ಬರುವವರೆಗೆ ನನಗೆ ಆಸರೆಯಾಗಿರು ಎಂದು ಪ್ರೀತಿಯಿಂದ ಸಮಾಧಾನ ಪಡಿಸಲು ನೋಡಿದಳು.ತನ್ನ ಅತ್ತೆಯವರ ಸಮಾಧಾನದ ನುಡಿ ಸೀತೆಗೆ ಬೇಕಾಗಿರಲಿಲ್ಲ. ಆಗ ಸೀತೆ ಹೀಗೆ ವಿನಂತಿಸಿದಳು. ನೀವು ಮಾತ್ರ ಪತಿವ್ರತಾ ಧರ್ಮಪಾಲನೆಗಾಗಿ ನಿಮ್ಮ ಪ್ರಾಣಪ್ರಿಯ ಮಗುನಿಗೆ ವನವಾಸಕ್ಕೆ ಹೋಗಲು ಅನುಮತಿಸಿದ್ದೀರಿ. ಅದೇ ಪ್ರಕಾರ ನನಗೂ ಪತಿವ್ರತಾ ಪಾಲನೆಗಾಗಿ ಅನುಮತಿ ನೀಡಿರಿ ಎಂದು ದೀನಳಾಗಿ ಪ್ರಾರ್ಥಿಸಿದಳು. ಸೀತಾದೇವಿಯ ಬೇಡಿಕೆ ಕೌಶಲ್ಯಾದೇವಿಗೆ ಸರಿ ಎಂದು ಕಂಡು ಬಂದಿತು. ಕೂಡಲೇ ಸೀತೆಗೆ ಹೀಗೆ ಹೇಳಿದರು. ನೀನೂ ಕೂಡಾ ನಿನ್ನ ಪತಿಯೊಂದಿಗೆ ವನವಾಸಕ್ಕೆ ಹೋಗಲು ನನ್ನ ಅನುಮತಿ ಇದೆ ಎಂದು ಹೇಳಿದಾಗ ಸೀತಾದೇವಿಯು ಸಂತೋಷದಿಂದ ತನ್ನ ಅತ್ತೆಯ ಪಾದಗಳಿಗೆ ನಮಸ್ಕರಿಸಿ ಆನಂದಾಶೃಗಳನ್ನು ಸುರಿಸಿ ತನ್ನ ಕೋರಿಕೆ ಈಡೇರಿದ್ದಕ್ಕಾಗಿ ಖುಷಿಪಟ್ಟಳು.

ಶ್ರೀರಾಮನು ವನವಾಸಕ್ಕೆ ಸಿದ್ಧನಾದದ್ದನ್ನು ಕೇಳಿದ ಸಹೋದರ ಲಕ್ಷ್ಮಣನು ದುಗುಡದಿಂದ ತನ್ನ ಅಣ್ಣನ ಬಳಿಗೆ ಧಾವಿಸಿ ಬಂದನು. ನಾನೂ ಕೂಡಾ ನಿಮ್ಮೊಂದಿಗೆ ವನವಾಸಕ್ಕೆ ಬರುವೆನೆಂದ ಚಿಕ್ಕ ಮಗುವಿನಂತೆ ಹಟ್ಟ ಹಿಡಿದನು.ಲಕ್ಷ್ಮಣನ ಪ್ರೀತಿವಾತ್ಸಲ್ಯ ಅರಿತಿದ್ದ ಶ್ರೀರಾಮನು ಆತನನ್ನೂ ವನವಾಸಕ್ಕೆ ತಮ್ಮೊಂದಿಗೆ ಬರಲು ಸಮ್ಮತಿಸಿದನು. ಇದನ್ನೆಲ್ಲ ವೀಕ್ಷಿಸಿದ ಕೌಶಲ್ಯಾದೇವಿ ತನ್ನ ಪುತ್ರ ಶ್ರೀರಾಮನಿಗೆ ಹೀಗೆ ಹೇಳಿದಳು. - ಶ್ರೀರಾಮ ನೀನು ಸೀತಯನ್ನಲ್ಲದೆ ನನ್ನ ಪ್ರೀತಿಯ ಲಕ್ಷ್ಮಣನನ್ನೂ ನಿನ್ನ ಸಂಗಡ ಕರೆದುಕೊಂಡು ಹೊರಟಿರುವೆ ಆದರೆ ನಿನಗೆ ನಾನು ಶರತ್ತನ್ನು ವಿಧಿಸುವೆ ನೀನು ವನವಾಸ ಮುಗಿಸಿ ಹಿಂದಿರುಗಿ ಬಂದಾಗ ಲಕ್ಷ್ಮಣನನ್ನು ನನಗೆ ಸುರಕ್ಷಿತವಾಗಿ ಒಪ್ಪಿಸಬೇಕು ಎಂದು ಹೇಳಿದ್ದಲ್ಲದೆ ಲಕ್ಷ್ಮಣನನ್ನು ಮರಳಿ ಬರುವಾಗ ಕಾಡಿನಲ್ಲಿಯೇ ಬಿಟ್ಟು ಬಂದರೆ ನೀನೂ ಕೂಡಾ ಅಲ್ಲಿಯೇ ಇರು ಎಂದು ಹೇಳಿದಾಗ ಎಲ್ಲರೂ ಕೌಶಲ್ಯಾದೇವಿಯ ಮಾತೃವಾತ್ಸಲ್ಯದ ಬಗ್ಗೆ ಹಾಗೂ ಲಕ್ಷ್ಮಣನ ಮೇಲಿನ ಪ್ರೀತಿಯ ಬಗ್ಗೆ ಹೆಮ್ಮೆ ಪಟ್ಟರು.

ಮಾತಾ ಕೌಶಲ್ಯಾದೇವಿಗೆ ಕೈಕೆಯು ಶ್ರೀರಾಮನನ್ನು ಹದಿನಾಲ್ಕು ವರ್ಷಗಳ ಕಾಲ ವನವಾಸ ಕಳಿಸಿದ ಬಗ್ಗೆ ಹಾಗೂ ಭರತನಿಗೆ ರಾಜ್ಯಾಭಿಷೇಕ ಮಾಡುವ ಬಗ್ಗೆ ಅಸೂಯೇ, ದ್ವೇಷ ಯಾವುದೂ ಇರಲಿಲ್ಲ. ಬದಲಾಗಿ ಭರತನ ಪಟ್ಟಾಭಿಷೇಕದ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ಕಾತುರಳಾಗಿದ್ದಳು.

ಕೌಶಲ್ಯಾದೇವಿಯು ಶ್ರೀರಾಮನಷ್ಟೇ ಪ್ರೀತಿ ವಾತ್ಸಲ್ಯಗಳನ್ನು ಲಕ್ಷ್ಮಣ, ಭರತ, ಶತ್ರುಘ್ನರ ಮೇಲೆ ಇಟ್ಟಿದ್ದಳು. ಇದರಿಂದ ಕೌಶಲ್ಯಾದೇವಿಯ ಹಿರಿಮೆ ವ್ಯಕ್ತವಾಗುತ್ತದೆ.



# 108 ವೈಷ್ಣವ ದಿವ್ಯ ಕ್ಷೇತ್ರಗಳು

# ತಿರುಕ್ಕೊಡಲೂರ್

## (ಆಡುದೊರೈ ಪೆರುಮಾಳ್ ಕೋಯಿಲ್)

ತಾಂದಮ್ ಪೆರುಮ್ಮೈ ಯರಿಯಾರ್
ತೂದು ವೇಂದರ್ಕಾಯವೇಂದರೂರ್ ಪೋಲ್
ಕಾಂದಲೇ ವಿರಲ್ ಮೆನ್‌ಕಲ್ಲೈ
ನನ್ಮಡವಾರ್ ಕೂಂದಲ್ ಕಮ್ಮುಮ್ ಕೂಡಲಾರೇ
ತಕ್ಕ ನೇವೇಳ್ವಿ ತ್ತರ್ಕರ್ತ ತಲ್ಲೈವನ್
ತುಕ್ಕಂದುಡ್ಡೈ ತುಣ್ಣೈವರೂರ್ ಪೋಲ್
ಎಕ್ಕಲಿಡು ನುಣ್‌ಮಣಲ್ ಮೇಲ್, ಎರುಮ್ ;
ಕೊಕ್ಕಿನ ಷ್ಮಯ್‌ಮ್ಮಿ ಕೂಡಲೂರೆ

**ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಕನ್ನಡ ಅನುವಾದ : ಸೂರ್ಯವಂಶಿ**

ಸರ್ವಜ್ಞನ್ನೂ ಸವಾಂತರ್ಯಾಮಿಯಾದ ಶ್ರೀಮನ್ನಾರಾಯಣನು ತನಗೇನೂ ತಿಳಿಯದಂತೆ ತನ್ನ 'ಆಶ್ರಿತವತ್ಸಲ'' ನೆಂಬ ಹೆಸರಿಗೆ ತಕ್ಕಂತೆ ಎಲ್ಲರನ್ನೂ ಅನುಗ್ರಹಿಸುವ ರೀತಿಯಲ್ಲಿ ಈ ತಿರುಕ್ಕೂಡಲೂರ್ ಎಂಬ ದಿವ್ಯ ದೇಶದಲ್ಲಿ ಜಗದ್ರಕ್ಷಕನಾಗಿ ನೆಲೆಸಿರುವನೆಂದು ತಿರುಮಂಗೈ ಆಳ್ವಾರರು ಮಂಗಳಾಶಾಸನವನ್ನು ರಚಿಸಿದ್ದಾರೆ. ಕೃಷ್ಣಾವತಾರದಲ್ಲಿ ದೇವ ದೇವನು ಭಕ್ತವತ್ಸಲನೆಂದು ಅನೇಕ ಬಾರಿ ತೋರಿಸಿ ಕೊಟ್ಟಿದ್ದಾನೆಂದು ಆಳ್ವಾರರು ಕೀರ್ತಿಸಿದ್ದಾರೆ.

ಈ ದಿವ್ಯ ದೇಶವು ತಂಜಾವೂರು ಜಿಲ್ಲೆಯ ತಿರುವಯ್ಯಾರು- ಕುಂಭಕೋಣಕ್ಕೆ ಹೋಗುವ ಮಾರ್ಗದಲ್ಲಿ ಹನ್ನೊಂದು ಕಿಲೋ ಮೀಟರ್ ದೂರದಲ್ಲಿದೆ. ಮಧುರೈ ನಗರದಲ್ಲಿರುವ ಈ ದಿವ್ಯ ದೇಶಕ್ಕೆ ತೆಂತಿರುಕ್ಕೂಡ ಲೂರ್ ಎಂದೂ ತಂಜಾವೂರು ಜಿಲ್ಲೆಯಲ್ಲಿ ಇರುವಂತಹಾ ಈ ಪವಿತ್ರ ಕ್ಷೇತ್ರವನ್ನು ವಡಾತಿರುಕ್ಕೂಡಲೂರ್ ಎಂದು ಕರೆಯುತ್ತಾರೆ. ಎಲ್ಲರಿಗೂ ತಿರುಕ್ಕೂಡಲೂರ್ ಎಂಬ ಹೆಸರಿಗಿಂತಲೂ "ಆಡುದರೈ ಪೆರುಮಾಳ್ ಕೊಯಿಲ್'' ಎಂದರೇ ಸುಲಭವಾಗಿ ಅರ್ಥವಾಗುತ್ತದೆ. ಈ ದಿವ್ಯ ದೇಶ ದಲ್ಲಿ ನೆಲಸಿರುವಂತಹಾ "ಮೂಲವರ್ಕಿ ವಯ್ಯಂ ಕಾರ್ತ ಪೆರುಮಾಳ್'' ಜಗತ್ತನ್ನು ರಕ್ಷಿಸಿದಂತಹಾ ದೇವರು ಆದ್ದರಿಂದ ಜಗದ್ರಕ್ಷಕನೆಂದು ಕರೆಯುತ್ತಾರೆ. ಇಲ್ಲಿ ಸ್ವಾಮಿಯು ಪೂರ್ವಮುಖವಾಗಿ ನಿಂತಿರುವಂತಹಾ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿದ್ದಾರೆ. ಇಲ್ಲಿ ಚಕ್ರತೀರ್ಥ, ಶುದ್ಧ ಸತ್ಯ ವಿಮಾನದ ಆಲಯ ಗೋಪುರವು ಬಹಳ ಅದ್ಭುತವಾಗಿದೆ. ದಶಾವತಾರ ಶಿಲ್ಪಗಳೊಂದಿಗೆ ಅತ್ಯದ್ಭುತವಾದ ಕಲಾವೈಭವದಿಂದ ಶೋಭಾಯಮಾನ ವಾಗಿದೆ. ಕಣ್ಮನಸೆಳೆಯುವಂತಹಾ ಮಂಟಪಗಳು ಚಕ್ರತ್ತಾಳ್ವಾರರು ಉತ್ತರ ದಿಕ್ಕನ್ನು ವೀಕ್ಷಿಸುತ್ತಾ ಷೋಡಶಕರ್ಮಗಳಿಂದ ನೆಲಸಿದ್ದಾರೆ. ಅವರ ಹಿಂದೆಯೇ ನರಸಿಂಹಸ್ವಾಮಿ ನಮಗೆ ದರ್ಶನವನ್ನು ನೀಡುತ್ತಿದ್ದಾರೆ. ಮಂಟಪದ ದಕ್ಷಿಣ ಭಾಗದಲ್ಲಿ ಭೂಮಾದೇವಿ. ಭೂವರಾಹಸ್ವಾಮಿ ಭೂಮಾದೇವಿಯನ್ನು ಉದ್ಧರಿಸಿದಂತಹಾ ಭಂಗಿಯಲ್ಲಿ ನೆಲಸಿರುತ್ತಾರೆ. ವರಾಹ ಸ್ವಾಮಿಯ ವಾಮಭಾಗದಲ್ಲಿ ಭೂದೇವಿ ಅಸೀನಳಾಗಿದ್ದು, ಭಕ್ತ ರನ್ನು ಅನುಗ್ರಹಿಸುತ್ತಿದ್ದಾರೆ.ಗರ್ಭಾಲಯದ ಮಂಟಪದ ಸಮೀಪದಲ್ಲಿ ವಿಶ್ವಕ್ಸೇನರು ಹಾಗೇ ಶ್ರೀದೇವಿ, ಭೂದೇವಿ ಸಮೇತನಾದ ವರದರಾಜ ಸ್ವಾಮಿ ನೆಲಸಿದ್ದಾರೆ. ಪ್ರಾಕಾರದಲ್ಲಿ ತಿರುಮಂಗೈ ಆಳ್ವಾರರು ಮತ್ತು ಉಳಿದ ಆಚಾರ್ಯರೆಲ್ಲರಿಗೂ ಪ್ರತ್ಯೇಕವಾದ ಸನ್ನಿಧಿಯಲ್ಲಿ ನಮಗೆ ದರ್ಶನ ಭಾಗ್ಯವನ್ನು ಕಲ್ಪಿಸುತ್ತಾರೆ. ಈ ಕ್ಷೇತ್ರದ ಮಹಾತಾಯಿಯಾದ ಪುಷ್ಪವಲ್ಲಿ, ಪದ್ಮಾಸನವಲ್ಲಿ ತಾಯಾರು ಎಂದು ಕರೆಯುತ್ತಾರೆ. ಅಮ್ಮನವರ ವಿಗ್ರಹವು ಒಕ ವಲತ್ತೂರ್ ಎಂಬ ಊರಿನಲ್ಲಿ ಇರುವಂತೆ ಇಲ್ಲಿನ ಪ್ರಜೆಗಳು ಹೇಳು ತ್ತಾರೆ. ಅಮ್ಮನವರ ಸನ್ನಿಧಿಯ ಸಮೀಪದಲ್ಲಿ ಅದ್ಭುತವಾದ ಒಂದು ಹಲಸಿನ ಮರ ಕಂಡು ಬರುತ್ತದೆ. ಇದನ್ನು ಆಲಯದ ವೃಕ್ಷವೆಂದು ಭಾವಿಸುತ್ತಾರೆ. ಹಾಗೇ ಆ ಹಲಸಿನ ವೃಕ್ಷವು ಒಂದು ದೊಡ್ಡ ಶಂಖ ಆಕಾರದಲ್ಲಿ ಕಂಡು ಬರುತ್ತದೆ. ಭಗವಂತನ ಸನ್ನಿಧಾನವಾದ್ದರಿಂದ ಈ ರೀತಿ ಶಂಖಾಕಾರದಲ್ಲಿ ಇರುವಂತೆ ಪ್ರಜೆಗಳ ನಂಬಿಕೆ. ಸ್ಥಲವೃಕ್ಷವಾದ ಆ ಹಲಸಿನ ಮರದ ಸಮೀಪ



ದಲ್ಲಿ ಗೋದಾದೇವಿಯ ಆಲಯವಿದೆ. ಈ ಆಲಯದ ನಾಲಕ್ಕೂ ಮೂಲೆಗಳಲ್ಲಿ ಒಂದು ಮೃಗಶಿಲ್ಪಗಳೂ ಇವೆ.

## ಸ್ಥಳ ಪುರಾಣ:

ಮೊಟ್ಟಮೊದಲು ಲೋಕವನ್ನು ಪೀಡಿಸುತ್ತಿರುವಂತಹಾ ಹಿರಣ್ಯನನ್ನು ವಧಿಸಿದ ಸಂದರ್ಭದಲ್ಲಿ ದೇವತೆಗಳು ಮತ್ತು ನಂದಕ ಮಹರ್ಷಿ ಎಲ್ಲರೂ ಒಂದೆಡೆ ಸೇರಿದರು. ಆದ್ದರಿಂದಲೇ ಇದಕ್ಕೆ "ತಿರುಕ್ಕೂಡಾಲೂರ್'' ಎಂಬ ಹೆಸರು ಬಂದಿದೆ. ದೇವಾನುದೇವತೆಗಳು, ಋಷಿಗಳು, ಮುನಿಗಳು ಎಲ್ಲರೂ ಒಂದೇ ಕಡೆ ಸಮಾವೇಶಗೊಂಡಿದ್ದರಿಂದ ಈ ಹೆಸರು ಬಂದಿದೆ. ಭಗವಂತನು ವರಾಹ ಅವತಾರವನ್ನು ಸ್ವೀಕರಿಸಿ ಆ ಭೂಮಿಯ ಒಳಗೆ ಹೋಗಿದ್ದರಿಂದ ತಿರುಕ್ಕೂಡಲೂರ್ ದಿವ್ಯ ದೇಶದಲ್ಲಿ ಹಿರಣ್ಯನ ಸಂಹಾರವೂ ನಡೆದಿದ್ದಂತೆ ಪುರಾಣಗಳು ತಿಳಿಸುತ್ತಿವೆ. ವರಾಹ ಅವತಾರ ನಡೆದ ಪ್ರದೇಶವೆಂದು ಆಳ್ವಾರರು ಕೀರ್ತಿಸುತ್ತಿದ್ದಾರೆ. ನಂದಕ ಮಹರ್ಷಿಯ ಮಗಳು ಉಷ, ಚಂದ್ರವಂಶೋದ್ಧಾರಕ ನಾದ ವಿಶ್ವಜಿತ್ ಎಂಬ ರಾಜನು ಆಕೆಯನ್ನು ಪ್ರೇಮ ವಿವಾಹ ಮಾಡಿ ಕೊಂಡ. ಆ ಉಷೆಯ ಮೇಲೆ ಕೆಲವು ರಾಜ ಮನೆತನದವರು ಮಿಥ್ಯಾ ರೋಪ ಮಾಡಿದರು. ಅದನ್ನು ನಂಬಿದ ರಾಜ ತನ್ನ ಪತ್ನಿಯನ್ನು ರಾಜ್ಯದಿಂದ ಬಹಿಷ್ಕರಿಸಿದ. ನಿರಪರಾಧಿಯನ್ನು ಶಿಕ್ಷಿಸಿದ್ದರಿಂದ ರಾಜನ ಐಶ್ವರ್ಯವೆಲ್ಲವೂ ನಾಶವಾಯಿತು. ಆ ರಾಜನು ಭಯಂಕರ ವ್ಯಾಧಿಯಿಂದ ನರಳತೊಡಗಿದ ತಾನು ಮಾಡಿದ ದ್ರೋಹದಿಂದ ಪಶ್ಚಾತ್ತಾಪ ಪಟ್ಟು ಹೆಂಡತಿಯನ್ನು ಹುಡುಕುತ್ತಾ ಹೊರಟ ರಾಜನಿಗೆ ಓರ್ವ ಸನ್ಯಾಸಿಯು ಎದಿರಾದ. ಆಗ ಸನ್ಯಾಸಿಯ ಬಳಿ ತನ್ನ ಅಳಲನ್ನು ತೋಡಿಕೊಂಡ ರಾಜನಿಗೆ ಆ ಸನ್ಯಾಸಿ ಅಭಯವನ್ನು ನೀಡಿ, ತಿರುಕ್ಕೂಡಲೂರ್ ಕ್ಷೇತ್ರದಲ್ಲಿ ನೆಲೆಸಿರುವ ಜಗದ್ರಕ್ಷಕ ಸ್ವಾಮಿಯನ್ನು ಸೇವಿಸಿದರೆ ನಿನ್ನ ಹೆಂಡತಿಯನ್ನು ಮರಳಿ ಪಡೆಯುತ್ತೀ ಹಾಗೂ ರೋಗದಿಂದ ಮುಕ್ತನಾಗುತ್ತೀ ಎಂದು ಸಾಂತ್ವನ ಹೇಳಿದ. ರಾಜನು ಆ ಸನ್ಯಾಸಿಯ ಮಾತಿನಂತೆಯೆ ಜಗದ್ರಕ್ಷಕ ಸ್ವಾಮಿಯನ್ನು ಸೇವಿಸಿ ತನ್ನ ವ್ಯಾಧಿಯನ್ನು ಪರಿಹರಿಸಿಕೊಂಡು ಪತ್ನಿಯನ್ನೂ ಹಿಂಪಡೆದನಂತೆ ಆದ್ದರಿಂದ ಈ ಕ್ಷೇತ್ರದ ವಿಶೇಷತೆ ಏನೆಂದರೆ ಯಾರಾದರೂ ದಂಪತಿಗಳ ನಡುವೆ ಮೈಮನಸ್ಯಗಳು ತಲೆದೋರಿದರೆ ಆ ಸಮಸ್ಯೆಗಳನ್ನು ಪರಿಹರಿಸಿ ಅವರನ್ನು ಮತ್ತೆ ಒಗ್ಗೂಡಿಸುವಂತಹಾ ಕ್ಷೇತ್ರವಿದು ಆದ್ದರಿಂದ ಇದಕ್ಕೆ "ಕೂಟಲೂರ್'' ಎಂದೂ ಕರೆಯುತ್ತಾರೆ. ಹಾಗೇ ಇಲ್ಲಿ ಅತ್ಯದ್ಭುತವಾದ ತೇರು ಕಂಡು ಬರುತ್ತದೆ. ಅದಕ್ಕೆ ಅಂಬರೀಷ ರಥವೆಂದು ಕರೆಯುತ್ತಾರೆ. ರಾಜನಾದ ಅಂಬರೀಷನಿಗೆ ದುರ್ವಾಸ ಮಹರ್ಷಿಯಿಂದ ಒದಗಿದ ಶಾಪವು ತೊಲಗಿದ್ದು. ಭಗವಂತನೇ ತನ್ನ ಕಷ್ಟವನ್ನು ಬಗೆಹರಿಸಿದ್ದರಿಂದ ಅಂಬರೀಷನೇ ರಥವನ್ನು ಮಾಡಿಸಿದನೆಂದು ಹೇಳುತ್ತಾರೆ.



ಒಂದು ಸಂದರ್ಭದಲ್ಲಿ ಕಾವೇರಿ ನದಿ ಪ್ರವಾಹದಿಂದ ಅಂಬರೀಷನಿಂದ ಕಟ್ಟಿಸಲ್ಪಟ್ಟ ಈ ಆಲಯವೂ ಮುಳುಗಿ ಹೋಗಿತ್ತು ಆ ವಿಗ್ರಹಗಳೂ ಹಾಗೇ ಮತ್ಸ್ಯಕಾರರ ಬಲೆಯಲ್ಲಿ ಸಿಕ್ಕಿದುವಂತೆ. ಅವರು ಬಹಳ ಕಾಲ ಭಗವಂತನ ವಿಗ್ರಹಗಳಿಗೆ ಪೂಜೆ ಮಾಡುತ್ತಾ ಇದ್ದಾಗ, ಭಗವಂತನು ಮಧುರನಗರವನ್ನು ಪರಿಪಾಲಿಸುತ್ತಿದ್ದ ರಾಣಿ ಮಂಗಮ್ಮಳ ಕನಸಿನಲ್ಲಿ ಕಾಣಿಸಿಕೊಂಡು ತನಗೆ ಒಂದು ಆಲಯವನ್ನು ನಿರ್ಮಿಸಬೇಕೆಂದು ಆದೇಶಿಸಿದನಂತೆ, ಭಗವಂತನ ಅನುಜ್ಞೆಯನ್ನು ಶಿರಸಾವಹಿಸಿದ ಆ ರಾಣಿ ಒಂದು ಆಲಯವನ್ನು ನಿರ್ಮಿಸಿ ಆ ವಿಗ್ರಹಗಳನ್ನು ಅಲ್ಲಿ ಪ್ರತಿಷ್ಠಾಪನೆ ಮಾಡಿಸಿದಳಂತೆ ಹೀಗೆ ರಾಣಿ ಮಂಗಮ್ಮನ ಕೈಯಿಂದ ಈ ಆಲಯವು ಕಟ್ಟಲ್ಪಟ್ಟ ಆ ಜಗದ್ರಕ್ಷಕ ಭಗವಂತನನ್ನು ನಾವು ಸೇವಿಸುತ್ತಿದ್ದೇವೆ. ಅಂಬರೀಷ ಮಹಾ ರಾಜ ಕಟ್ಟಿದಂತಹಾ ಆಲಯವು ಕಾವೇರಿ ನದಿಯ ಪ್ರವಾಹದಲ್ಲಿ ಕೊಚ್ಚಿ ಹೋದರೂ ಆ ಮರಳು ಇನ್ನೂ ಹಾಗೇ ಕಂಡು ಬರುತ್ತಿದೆ. ಅದಕ್ಕೆ "ಪೆರುಮಾಳ್ ಪೊಕ್ಕಲ್'' ಎಂದು ಹೇಳುತ್ತಾರೆ. ಈ ರೀತಿ ವೈಖಾನಸಆಗಮ ಶಾಸ್ತ್ರದ ಪ್ರಕಾರ ಈ ದೇವಾಲಯವು ಪೂಜೆಗಳನ್ನು ಸ್ವೀಕರಿಸುತ್ತಿದೆ. ಅಂಬರೀಶ ಮಹಾರಾಜ ಮತ್ತು ನಂದಕ ಮಹರ್ಷಿಗೆ ಪ್ರತ್ಯಕ್ಷವಾದ ಈ ಸ್ವಾಮಿಯನ್ನು ತಿರುಮಂಗೈ ಆಳ್ವಾರರು ಹತ್ತು ಪಾಶುರಗಳೊಂದಿಗೆ ಕೀರ್ತಿಸಿದ್ದಾರೆ. ನಾವೂ ಈ ಪದ್ಮಾಸನವಲ್ಲಿ ಅಮ್ಮನವರೊಂದಿಗೆ ನೆಲೆಸಿರುವ ಈ ಜಗದ್ರಕ್ಷಕ ಸ್ವಾಮಿಯನ್ನು ಸೇವಿಸೋಣ. ಆರಾಧಿಸಿ ಧನ್ಯರಾಗೋಣ.

ವಿಶೇಷವಾಗಿ ದಂಪತಿಗಳ ನಡುವೆ ಎಂತಹಾ ವಿರಸವೂ ಬಾರದಿರುವಂತೆ ಬೇಡಿಕೊಳ್ಳೋಣ.

ಶ್ರೀಮತ್ಸರ್ವ ಸುರೇಡ್ಯಮೇಲನಪುರೇ ದೇವೋ ಜಗದ್ರಕ್ಷಕಃ
ತೀರ್ಥಂ ಚಕ್ರಸರೋ ವಿಮಾನಾಪಿ ವೈ ತತ್ ಶುದ್ಧಸತ್ವಾಹ್ವಾಯಮ್
ತಸ್ಮಿನ್ ನಂದಕತಾಪಸಾಯ ವರದೋ ದೇವಿ ತು ಪದ್ಮಾಸನಾ
ಪ್ರೋದ್ಯಾತ್‌ಭಾಸ್ಕರದಿಙ್ಮುಖಃ ಸುರಗಣೈಃ ಸಂಸೇವಿತೋ ದೃಶ್ಯತೇ



# ಲಕ್ಷ್ಮೀ ಲೀಲಾಮೃತ

-ಡಾ|| ಎ. ಕುಮುದ
97319 03752

ಪಾಂಡುರಂಗೀ ವಂಶದ ಶ್ರೀ ಶ್ರೀನಿವಾಸಾಚಾರ್ಯ ಹಾಗೂ ರುಕ್ಮಿಣೀ ಬಾಯಿಯವರ ಸುಪುತ್ರರೇ ಪಾಂಡುರಂಗೀ ಹುಚ್ಚಾ ಚಾರ್ಯರು. ಇವರು ೧೮೬೩ರಲ್ಲಿ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿ ಆಂಗ್ಲ ವಿದ್ಯಾಭ್ಯಾಸ ನಡೆಸುತ್ತಿದ್ದರು. ಒಮ್ಮೆ ಒಬ್ಬ ಬ್ರಾಹ್ಮಣನ ಪ್ರೇರಣೆಯಿಂದ ಚಿತ್ತ ಆಧ್ಯಾತ್ಮ ಜ್ಞಾನ ಹಾಗೂ ಭಕ್ತಿಯ ಕಡೆ ವಾಲಿತು. ಪಾಂಡುರಂಗಿ ವಂಶಜರಲ್ಲಿ ಜನಿಸಿದ್ದರಿಂದ ತಾವೂ ತಮ್ಮ ಪೂರ್ವಜರಂತೆ ಪಾಂಡಿತ್ಯ ಪಡೆಯ ಬೇಕೆಂದು ಯಾರಿಗೂ ಹೇಳದೆ ಕೊಲ್ಹಾಪುರದ ಲಕ್ಷ್ಮಿಯನ್ನು ಭಕ್ತಿಯಿಂದ ಸೇವಿಸಿ ಆಕೆಯ ಅನುಗ್ರಹ ಪಡೆದರು. ಮಧ್ವಾಚಾರ್ಯರ ಮೂವತ್ತೇಳು ಗ್ರಂಥಗಳನ್ನೂ ಅಧ್ಯಯನ ಮಾಡಿ ಆಧ್ಯಾತ್ಮಿಕ ಪ್ರಪಂಚದಲ್ಲಿ ಮಿಂಚ ತೊಡಗಿದರು.

ಹಿರಿಯರ ಬಲವಂತದಿಂದ ಅವರ ಅಕ್ಕನ ಮಗಳಾದ ಹುಚ್ಚವ್ವ ಎಂಬುವಳೊಡನೆ ವಿವಾಹವಾಯಿತು. ಕೊಲ್ಹಾಪುರದಲ್ಲಿ ಶ್ರೀ ಅಂತಾಜಿ ಪಂತ್ ದಂಪತಿಗಳ ಅಂತ್ಯಕಾಲ ದಲ್ಲಿ ಅವರ ಯೋಗಕ್ಷೇಮವನ್ನು ನೋಡಿ ಕೊಂಡರು. ಅವರು ಪರಂಧಾಮಗೈದಾಗ ಅವರು ಹುಚ್ಚಾಚಾರ್ಯರ ಹೆಸರಿಗೆ ಬರೆದಿಟ್ಟ ಆಸ್ತಿಯೆಲ್ಲವನ್ನೂ ಪಂಡಿತರು ಹಾಗೂ ಬಡ ಬಗ್ಗರಿಗೆ ದಾನಮಾಡಿ ತಮ್ಮ ಊರಿಗೆ ವಾಪಸ್ಸಾದರು.

ಒಂದು ದಿನ ಸ್ವಪ್ನದಲ್ಲಿ ಶ್ರೀಮಹಾಲಕ್ಷ್ಮಿಯು ಇವರಿಗೆ ಮುಗುಟಾಖಾನ ಹುಬ್ಬಳ್ಳಿಗೆ ಹೋಗಿ ಶ್ರೀನರಸಿಂಹ ದೇವರ ಸೇವೆ ಮಾಡಲು ಸೂಚನೆಯಿತ್ತಳು. ಗೊಂಡಾರಣ್ಯ ವನ್ಯ ಮೃಗಗಳ ಬೀಡಾಗಿದ್ದು ಮಾನವವಾಸಕ್ಕೆ ಭಯಂಕರ ವಾಗಿತ್ತು. ಆದರೆ ಆ ಲೋಕಮಾತೆಯ ಅಪ್ಪಣೆ ಮೇರೆಗೆ ಸಂಸಾರ ಸಮೇತ ಬಂದರು. ಶ್ರೀನರಸಿಂಹ ದೇವರ ಸೇವೆ ಧ್ಯಾನ ತಪಃ ಶಕ್ತಿಯಿಂದ ಸದ್ಭಕ್ತರೆಲ್ಲಾ ಆಕರ್ಷಿತರಾದರು ಅನೇಕ ರೋಗಿಷ್ಠರು, ಭೂತಬಾಧಕರು, ಮಾನಸಿಕ ಅಸ್ವಸ್ಥರು ಇವರ ತಪಃಶಕ್ತಿ, ಹಾಗೂ ದೈವಶಕ್ತಿಯ ಪ್ರಭಾವದಿಂದ ಗುಣ ಮುಖರಾಗಿ ಅವರ ಗುಣಗಾನ ಮಾಡಲಾರಂಭಿಸಿದರು.

ಮಳಖೇಡದಲ್ಲಿ ಅವರ ಮುತ್ತಾತನ ಆದೇಶದಂತೆ ಬಲೀ ಎರಡು ಉತ್ತತ್ತಿ ಮತ್ತು ಒಂದು ಲೋಟ ಹಾಲನ್ನು ಮಾತ್ರ ಸೇವಿಸುತ್ತಾ ಜಯತೀರ್ಥರನ್ನು ಸೇವಿಸಿ ಅನುಗ್ರಹವನ್ನೂ ಪಡೆದರು. ನಂತರ ಹುಬ್ಬಳ್ಳಿಗೆ ಬಂದು ಅನೇಕ ಬಾರಿ ಸುಧಾಮಂಗಳವನ್ನು ಮಾಡಿದರು. ಇವರ ಜೀವನದಲ್ಲಿ ಹಲವಾರು ಪವಾಡ ಗಲು ಆದುವೆಂದು "ಇಂದಿರೇಶಾಮೃತ" ಎಂಬ ಗ್ರಂಥದಿಂದ ತಿಳಿದು ಬಂದಿದೆ.

ಇವರಿಗೆ ಸ್ವಪ್ನದಲ್ಲಿ ನಾರದರಿಂದ "ಇಂದಿರೇಶ" ಎಂಬ ಅಂಕಿತ ದೊರಕಿದೆ. ಆ ಅಂಕಿತದಿಂದ ನರಸಿಂಹ, ಮಹಾಲಕ್ಷ್ಮಿ, ಕಡಗೋಲು ಕೃಷ್ಣ ಮುಂತಾದ ದೇವದೇವತೆಗಳ ಬಗ್ಗೆ ನೂರಾರು ಪದ್ಯಗಳು, ದೀರ್ಘಕೃತಿಗಳನ್ನು ರಚಿಸಿರುವರು. ಅನೇಕ ಸಂಸ್ಕೃತ ಕೃತಿಗಳನ್ನೂ ರಚಿಸಿರುವರು. ಈ ರೀತಿ ಪರಮಾತ್ಮನ ಲೀಲೆಗಳನ್ನು ಕೊಂಡಾಡುತ್ತ ಅತಿಥಿಗಳನ್ನು ಅನ್ನೋದಕಗಳಿಂದ ಸತ್ಕರಿಸು ತ್ತಿದ್ದರು. ಕಾರ್ತೀಕ ಬಹುಳ ಪಂಚಮಿ ಪ್ರಮಾಥಿ ಸಂವತ್ಸರ ಶಾ.ಶ ೧೮೬೧ ರಂದು (ಕ್ರಿ.ಶ.೧೯೩೯ರಲ್ಲಿ) ತಿರುಪತಿ ಪಾಂಡುರಂಗಿ ಹುಚ್ಚಾ ಚಾರ್ಯರು ಪರಂಧಾಮಗೈದರು.

"ಇಂದರೇಶ ವಿಠಲ" ಅಂಕಿತರಾದ ತಿರುಪತಿ ಪಾಂಡುರಂಗಿ ಹುಚ್ಚಾ ಚಾರ್ಯರು ಕನ್ನಡದಲ್ಲಿ ಗೋಪಿಗೀತ, ಸುಂದರಕಾಂಡ ರಾಮಾಯಣ. ಲಕ್ಷ್ಮೀ ಲೀಲಾಮೃತ ಹಾಗೂ ದೇವತಾ ತಾರತಮ್ಯ ಮುಂತಾದ ಕೃತಿಗಳನ್ನು ಬಹು ಸುಂದರವಾಗಿ ರಚಿಸಿರುವರು. ಅವುಗಳಲ್ಲಿ "ಲಕ್ಷ್ಮೀ ಲೀಲಾಮೃತದ" ಬಗ್ಗೆ ಸಂಕ್ಷಿಪ್ತ ಪರಿಚಯ.

ಲಕ್ಷ್ಮೀಲೀಲಾಮೃತವು ೧೦೮ ನುಡಿಗಳಿಂದ ಕೂಡಿದ್ದಾಗಿದೆ. ಇದರಲ್ಲಿ ಶ್ರೀಹರಿಯ ಮೂಲ, ಅವತಾರ, ಹಾಗೂ ಅವನ ಅನಂತ ರೂಪಗಳ ಚಿತ್ರಣ ವನ್ನು ಕಾಣಬಹುದು. ಈ ಅನಂತ ರೂಪಾವತಾರಗಳಲ್ಲಿ ಶ್ರೀಲಕ್ಷ್ಮೀದೇವಿಯು ಪರಮಾತ್ಮನನ್ನು ಸೇವೆಗೈಯ್ಯುವ ವೈಖರಿ ಅತಿ ಸುಂದರವಾಗಿ ಮೂಡಿ ಬಂದಿದೆ.

ಮೊದಲಿಗೆ ಇಂದಿರೇಶ ವಿಠಲರು ಶ್ರೀಲಕ್ಷ್ಮೀ ನರಸಿಂಹ ದೇವರನ್ನೂ ನಂತರ ಗುರುಗಳನ್ನೂ, ಸ್ಮರಿಸಿ ಅನಂತರ ಪರಮಾತ್ಮನ ಮೂಲರೂಪವನ್ನು ಪ್ರಸ್ತಾಪಿಸಿದ್ದಾರೆ.

ಶ್ರೀಲಕ್ಷ್ಮೀ ನೃಸಿಂಹ ಮಮಲಂ
ನತ್ವಾ ಮಧ್ವಾದಿಕಾನ್ ಗುರೂನ್ ।
ಶ್ರೀ ಲಕ್ಷ್ಮೀಲೀಲಾಮೃತ
ಸ್ತೋತ್ರಂ ಕರಿಷ್ಯಾಮಿ ಯಥಾಮತಿ ॥
ಶ್ರೀ ಲಕ್ಷ್ಮೀಪತಿ ನೀನು ಆಲದೆಲಿಯ ಮೇಲೆ
ಲೋಲನೇತ್ರೆಯ ಕೂಡಿ ಲೀಲೆಯ ಮಾಡುತ
ಮೂಲಪ್ರಕೃತಿಯಿಂದ ಬಹಳ ಸೃಷ್ಟಿಸಿ ಜಗ
ಪಾಲಿಸಿ ಹರಸುವಿ ಕಾಲರೂಪ ॥

ಸ್ಮರಣನಾದ ಶ್ರೀಹರಿಯ ಲೀಲೆಗಳೆಲ್ಲವೂ ತನ್ನನ್ನು ಆಶ್ರಯಿಸಿದವರಿಗಾಗಿ ಹಾಗೂ ಅಂತಹ ಅದ್ಭುತ ರೂಪ ಗಳೆಲ್ಲವನ್ನೂ ಶ್ರೀಭೂದುರ್ಗಾ ರೂಪಿಣಿಯೂ, ನಿತ್ಯ ಸಹಚಾರಿಣಿಯೂ ಆದ ರಮಾದೇವಿಯು ಕಂಡು ಆನಂದಿ ಸುವಳು ಎಂಬುದು ಹರಿದಾಸರುಗಳ ಭಾವನೆ. ಮಹಾ ಲಕ್ಷ್ಮಿಯು ತನ್ನ ಇನ್ನೊಂದು ರೂಪದಿಂದ ಆ ಬಾಲರೂಪಿ ಯನ್ನು ಪ್ರಳಯ ಕಾಲದಲ್ಲಿ ಪತಿಯನ್ನಪ್ಪಿಕೊಂಡು ಮಲಗಿ ಯೋಗ ನಿದ್ರೆಯನ್ನು ನಟಿಸುವಳು ಎಂಬುದನ್ನು ವಿಜಯ ದಾಸರ ಸುಳಾದಿಯಿಂದ ತಿಳಿದುಬರುತ್ತದೆ.

"ಪ್ರಳಯೋದಕದಲ್ಲಿ ಏಕೋನಾರಾಯಣ
ಮಲಗಿದಾ ತನ್ನಯ ಲಲನೆ ಸಹಿತ
ಜಲಜಾಮಿತ್ರನ್ನ ಬಳಿಯಾ ಕಳಾನಿಧಿಯಿದ್ದಂತೆ
ನಳಿನನಾಭನ್ನ ಬಿಗಿದಪ್ಪಿ ಆತನ್ನ ತೋಳ
ಕೆಳಗೆ ಇಪ್ಪಳು ಲಕುಮಿ ಪೊಳೆಯಾದಲೆ"

ರಮಾದೇವಿಯು ದೇಶ ಕಾಲಗಳಿಂದ ಸಮಳು. ಆದ್ದ ರಿಂದ ಹರಿಯ ವೃಕ್ಷಸ್ಥಳವೇ ಆಕೆಗೆ ವಾಸಸ್ಥಳ. ಆದರೆ ಹರಿಯ ಗುಣಗಳಿಗಿಂತ ಅವಳು ಲಕ್ಷ್ಮೀದೇವಿ.

ದೇಶ ಕಾಲಗಳಿಂದ ನೀ ಸಮಳೀಶಗೆ
ವಾಸಮಾಡಿದಿ ವಕ್ಷದೇಶದೊಳಗೆ ॥

ಕೃಷ್ಣ ಹಾಗೂ ರುಕ್ಮಿಣಿಯ ಪಾರಿಜಾತ ಪ್ರಸಂಗವನ್ನು ಈ ರೀತಿ ವರ್ಣಿಸಲಾಗಿದೆ.

ಸುರಮುನಿ ನೀಡಿದ ವರ ಪಾರಿಜಾತವ
ಕರೆದು ತೊಡೆಯೊಳಿಟ್ಟು ಸರಸಿಜಾಕ್ಷಿಯೆ
ನಿನ್ನ ಹರುಷ ದಿಂದಲಿ ಕೃಷ್ಣ ಹೆರಳಿಗೆ ಮುಡಿಸಿ ತಾ
ಸರಿಯಾರು ನಿನಗಿನ್ನು ತರುಣಿಯರು ॥
ರಾಮಾವತಾರದಲ್ಲಿ ಸೀತೆಯನ್ನು ವರಿಸಿದುದನ್ನು
ತರುಳ ರಾಮನು ಮುನಿ ಬರೆಸಿ ಮಿಥಿಲನಾಮ
ಪುರುದೊಳು ಬರುತಲೆ ಹರನ ಛಾಪವ ನೋಡಿ
ಗುರುಳು ಮೇಲಕೆ ಮಾಡಿ ಮುರಿದು ನಿನ್ನನು ಕೂಡಿ
ಸುರಿದ ಸುಖದ ದಿವ್ಯ ಸರಯೂನಲ್ಲಿ

ಈ ರೀತಿಯಲ್ಲಿ ನಿರೂಪಿಸಿರುವರು.

ಮಹಾಭಾರತದಲ್ಲಿ ಪಾಂಡವರ ವನವಾಸ ಪ್ರಸಂಗ ವನ್ನು

ಸರಸಿಜಾಕ್ಷಿಯೆ ನಾವು ಇರುವೆವೀ ಪುರದಲ್ಲಿ
ಪರರು ತಿಳಿಯದಂತೆ ವರವ ಕೊಡೆನ್ನಲು
ಕುರು ಕುಲಾಧಿಪ ಪಂಚ ಧರ್ಮ ಭೀಮಾರ್ಜುನ
ಪರಮ ಸುಂದರ ಮಾದ್ರಿ ತರುಳರಾಗೆ ॥

ಈ ರೀತಿ ಭಾವಿಸಿದ್ದಾರೆ ಇಂದಿರೇಶರು.

ರಾಮಾವತಾರದಲ್ಲಿ ಶ್ರೀಹರಿಯು ಏಕಪತ್ನೀ ವ್ರತಸ್ಥ ನಾಗಿದ್ದನು ಆದ್ದರಿಂದ ವೇದವತಿಯನ್ನು ಮದುವೆಯಾಗಲಿಲ್ಲ. ಮುಂದಿನ ಅವತಾರದಲ್ಲಿ ಆಕಾಶರಾಜನ ಮಗಳು ಪದ್ಮಾವತಿ ಯಾಗಿ ಜನಿಸುವಳು.ಆಗ ಶ್ರೀಹರಿಯು ಶ್ರೀನಿವಾಸನಾಗಿ ಭೂಲೋಕದಲ್ಲಿ ಅವತರಿಸಿ ಆಕೆಯನ್ನು ಮದುವೆಯಾದನು.

ತರುಣಿಯ ಮುಖದಿಂದ ಪುರುಷನುತ್ಸವ ಕೇಳಿ
ಕರವೀರ ಪುರದಿಂದ ಹೊರಟು ರಥದಿ ಕೂತು
ಬರುವ ಸೌಂದರ್ಯವ ಗುರುಳು ಮುಖಿಯೆ ಎನ್ನ
ಎರಡು ಕಣ್ಣಿಗೆ ತೋರೆ ಸರಸಿಜಾಕ್ಷಿ ॥

ಎಂದು ಲಕ್ಷ್ಮೀದೇವಿಯು ತನ್ನ ಗಂಡನ ಕಲ್ಯಾಣಕ್ಕೆ ಸಂತೋಷದಿಂದ ಉತ್ಸಾಹದಿಂದ ಬರುತ್ತಿರುವ ವೈಖರಿಯನ್ನು ಹೀಗೆ ಚಿತ್ರಿಸಿದ್ದಾರೆ.

ಶ್ರೀಹರಿಯು ಅನಿರುದ್ಧನಾಗಿ ಅವತರಿಸಿದಾಗ ಶಾಂತಿ ಯಾಗಿಯೂ, ಪ್ರದ್ಯುಮ್ನನ ಪತ್ನಿ ಕೃತಿಯಾಗಿಯೂ, ಸಂಕ ರ್ಷಣನ ಪತ್ನಿ ಜಯಾ ವಾಸುದೇವನ ಪತ್ನಿಮಾಯಾ, ನಾರಾ ಯಣನ ಪತ್ನಿ ಲಕ್ಷ್ಮಿಯಾಗಿ ಅವತರಿಸಿ ಆ ದಂಪತಿಗಳಿಬ್ಬರ ಲೀಲಾ ವಿನೋದವನ್ನು ಅತಿ ಸುಂದರವಾಗಿ ಚಿತ್ರಿಸಿದ್ದಾರೆ ಇಂದಿರೇಶವಿಠಲರು. ರಾಮಾಯಣ. ಮಹಾಭಾರತ, ಶ್ರೀನಿ ವಾಸಕಲ್ಯಾಣ, ಮುಂತಾದ ಪೌರಾಣಿಕ ಪ್ರಸಂಗಗಳನ್ನು ೧೦೯ ನುಡಿಗಳಲ್ಲಿ ಅಳವಡಿಸಿರುವುದು ಅತಿಶಯವಾಗಿದೆ.

ನಿನ್ನುಪಕಾರಗಳನ್ನೆಷ್ಟು ಸ್ಮರಿಸಲೆ ಎನ್ನ ಮನದೊಳಿದ್ದು
ನಿನ್ನ ಮಹಿಮೆ ತುತಿಯನ್ನುನುಡಿಸಿದನ್ನುಪಕಾರ।
ವಿದನ್ನೆ ಪಲಿಸುವದೆ ಅನ್ಯಯವಿಲ್ಲ॥

ಎಂದು ಲಕ್ಷ್ಮೀದೇವಿಯನ್ನು ಪ್ರಾರ್ಥಿಸಿದ್ದಾರೆ.



# ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
## 20-3-2023 ರಿಂದ 28-03-2023 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 20-03-2023 | ಸೋಮವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 21-03-2023 | ಮಂಗಳವಾರ | ಚಿಕ್ಕಶೇಷವಾಹನ | ಹಂಸವಾಹನ |
| 22-03-2023 | ಬುಧವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 23-03-2023 | ಗುರುವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 24-03-2023 | ಶುಕ್ರವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 25-03-2023 | ಶನಿವಾರ | ಹನುಮದ್ವಾಹನ,ಸಾ॥ ವಸಂತೋತ್ಸವ | ಗಜವಾಹನ |
| 26-03-2023 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 27-03-2023 | ಸೋಮವಾರ | ರಥೋತ್ಸವ | ಅಶ್ವವಾಹನ |
| 28-03-2023 | ಮಂಗಳವಾರ | ಚಕ್ರಸ್ನಾನ | ಧ್ವಜಾವರೋಹಣ |



ತಿರುಮಲೆಯ ಯಾತ್ರಿಕರಿಗೆ, ಶ್ರೀ ವೆಂಕಟೇಶ್ವರಸ್ವಾಮಿಯ ಭಕ್ತರಿಗೆ,

ಸಪ್ತಗಿರಿ ಮಾಸಪತ್ರಿಕೆಯ ಓದುಗರಿಗೆ,ಚಂದಾದಾರರಿಗೆ, ಏಜಂಟರಿಗೆ

"ಶೋಭಕೃತ್" ನಾಮ ಸಂವತ್ಸರ

ಯುಗಾದಿ ಹಬ್ಬವು ಶುಭಪ್ರದವಾಗಿರಲಿ

ಶ್ರೀ ವೆಂಕಟೇಶ್ವರ ಸ್ವಾಮಿಯ ಅನುಗ್ರಹ ಸಂಪೂರ್ಣವಾಗಿ ಇರಲಿಯೆಂದು ಎಲ್ಲರನ್ನೂ ಕಾಪಾಡಲಿ ಎಂದು 'ಸಪ್ತಗಿರಿ' ಯ ಹೃತ್ಪೂರ್ವಕ ಹಾರ್ದಿಕೆಗಳು



## ಮಾರ್ಚ್ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಸಮಸ್ತ ದೋಷಗಳು ತೊಲಗಿ ಸಕಲೈಶ್ವರ್ಯಗಳು ಉಂಟಾಗುತ್ತವೆ. ಮನೆಯಲ್ಲಿ ಆನಂದಕರವಾದ ವಾತಾವರಣವಿರುತ್ತದೆ. ಧನಧಾನ್ಯಗಳುಂಟಾಗುತ್ತವೆ. ಗೃಹದಲ್ಲಿ ಕಲ್ಯಾಣಾದಿ ಶುಭದ ಶೋಭೆಕಳೆಗೂರುತ್ತದೆ. ಆನಂದಮಯವಾದ ಜೀವನ, ನೂತನ ವಸ್ತಲಾಭವುಂಟಾಗುತ್ತದೆ. ರಾಹು ಕೇತುಗಳ ಜನ್ಮರಾಶಿಯ ಸಂಚಾರದಿಂದಾಗಿ ಇನ್ನೂ ಸ್ವಲ್ಪ ಪ್ರತಿಬಂಧಕಗಳಿರುತ್ತವೆ.

**ವೃಷಭ**

ಆಧ್ಯಾತ್ಮಿಕ ಭಾವ ಬೆಳೆಯಲಿದೆ ಸಹನೆಯಿಂದ ಉದಾರವಾಗಿ ಹಾಗೂ ನೈತಿಕತೆಯಿಂದ ಇರುವಿರಿ. ಒಳ್ಳೆಯ ವಿಚಾರಗಳೆಡೆಯ ಅವಗಹನದಿಂದಾಗಿ ಮತ್ತಷ್ಟು ಆನಂದ ಪಡಲಿದ್ದೀರಿ.ಇತರರಿಗೆ ಉಪಕಾರ ಮಾಡುವ ಅವಕಾಶ ಬರುತ್ತದೆ. ಚತುರತೆಯಿಂದ ಒಳ್ಳೆಯ ವರಸೆಯಿಂದ ವ್ಯವಹರಿಸುವಿರಿ. ಕೆಲಸಗಳನ್ನು ಚೊಕ್ಕಟವಾಗಿ ಮಾಡುವಿರಿ. ಆಹ್ಲಾದಕರವಾದ ವಾತಾವರಣವನ್ನು ಸೃಷ್ಟಿಸ ಬಲ್ಲವರಾಗುತ್ತೀರಿ.

**ಮಿಥುನ**

ಭಯಾಂದೋಲನಗಳು ಕುಗ್ಗಿ, ಗೃಹ ಸೌಖ್ಯ ಶರೀರ ಸೌಖ್ಯ ಪ್ರಯಾಣಗಳು ಕಲಿತು ಬರುವುದು, ಅನಾವಶ್ಯಕ ಖರ್ಚುಗಳನ್ನು ಕಡಿತಗೊಳಿಸಿ ಆದಾಯ ವ್ಯಯಗಳಲ್ಲಿ ಸಮತೋಲನೆ ತಂದುಕೊಳ್ಳುತ್ತೀರಿ. ಶರೀರದಲ್ಲಿ ಪುಷ್ಕಳವಾದ ಕಾಂತಿ, ಕಾರ್ಯಸಿದ್ದಿ, ಶರೀರದ ಆರೋಗ್ಯ ಚೆನ್ನಾಗಿರುತ್ತದೆ. ಕುಟುಂಬ ವಿಷಯಗಳಲ್ಲಿ ಪ್ರಗತಿಯುಂಟಾಗುತ್ತದೆ. ಸಂತಾನಾಭಿವೃದ್ದಿ ಕೈಗೂಡಲಿದೆ.

**ಕರ್ಕಾಟಕ**

ಆದಾಯ ಮಾರ್ಗಗಳು, ಆದಾಯ ಗಳಿಕೆ, ಪುಷ್ಕಳವಾಗಿ ವೃದ್ಧಿಯಾಗಲಿವೆ. ಹೊಗಳುವ ಮಿತ್ರರನ್ನು ನಂಬುವುದು ಸರಿಯಲ್ಲ. ವಿದ್ಯಾರ್ಥಿಗಳಿಗೆ ಅನುಕೂಲವಾದ ಸಮಯ. ದೂರ ಪ್ರಯಾಣಗಳು ಕೈಗೂಡಲಿವೆ. ವಿದ್ಯಾ ಉದ್ಯೋಗದಲ್ಲಿ ವಿಜಯ ಅರಸಿ ಬರಲಿದೆ. ಸಮಾಜದಲ್ಲಿ ಗೌರವ ಲಭಿಸುತ್ತದೆ. ಸಹನೆಯಿಂದ ಸಮಭಾವದಿಂದ ಮುನ್ನಡೆಯುವಿರಿ.

**ಸಿಂಹ**

ಗ್ರಹಸ್ಥಿತಿ ಸಾಮಾನ್ಯವಾಗಿರುತ್ತದೆ. ಹೆಂಡತಿ ಮಕ್ಕಳೊಂದಿಗೆ ಕಲಹಗಳೇರ್ಪಡಬಹುದು. ಮನೆಯಲ್ಲಿ ಉಲ್ಲಾಸಕರವಾದ ವಾತಾವರಣವಿಲ್ಲದೇ ಹೋಗುವುದು. ಅನಾವಶ್ಯಕ ಕಲಹಗಳು, ಬಾಹ್ಯ ಪ್ರಪಂಚದೊಂದಿಗೆ ಸಂಬಂಧವಿಲ್ಲದೇ ಹೋಗುವುದು, ದೇಹಾರೋಗ್ಯ ಚೆನ್ನಾಗಿರುತ್ತದೆ. ಆರೋಗ್ಯ ದೃಢವಾಗಲಿದೆ. ಆರ್ಥಿಕವಾಗಿ ಬಲಗೊಳ್ಳುವಿರಿ. ಷೇರು ವ್ಯವಹಾರಗಳಿಂದ ಅಧಿಕ ಲಾಭವಾಗಲಿದೆ.

**ಕನ್ಯ**

ಗೃಹೋಪಕರಣ ವಸ್ತುಗಳಿಗಾಗಿ ಧನವನ್ನು ವ್ಯಯಿಸಲಿದ್ದೀರಿ. ವಿದ್ಯೆಯ ವಿಷಯದಲ್ಲಿ ಮೆರೆಯುವಿರಿ. ಪ್ರತಿಭಾ ಪುರಸ್ಕಾರಗಳು ಲಭಿಸಲಿವೆ. ಪ್ರತಿಭಾ ಪ್ರದರ್ಶನ ಮಾಡಿ ಉದ್ಯೋಗಕ್ಕಾಗಿ ಮಾಡುವ ಯತ್ನಗಳು ಫಲಿಸಲಿವೆ.ಪ್ರಸ್ತುತ ವಿಷಯದಲ್ಲಿ ಉದ್ಯೋಗ ಉನ್ನತಿಯುಂಟಾಗಲಿದೆ. ಶುಭ ವಾರ್ತೆಗಳನ್ನು ಕೇಳುವಿರಿ. ವ್ಯಾಪಾರಸ್ಥರು ಅಧಿಕಲಾಭವನ್ನು ಗಳಿಸುವಿರಿ.

**ತುಲಾ**

ಇಷ್ಟಾರ್ಥ ಲಾಭಗಳು, ಪತ್ನಿ ಪುತ್ರರೊಂದಿಗಾಗಿ ಕಲಹಗಳನ್ನು ತೊರೆದು ಬುದ್ಧಿವಂತಿಕೆಯಿಂದ ಇರುವುದು, ಸೌಖ್ಯ , ಮೃಷ್ಟಾನ್ನ ಭೋಜನ, ಆದಾಯ ಮಾರ್ಗಗಳು ಬೆಳೆಯುವುವು, ವ್ಯವಹಾರ ಪ್ರತಿಬಂಧಕಗಳು ಮಾತ್ರವೇ ಉಳಿವುವು. ಸುಬ್ರಮಣ್ಯ ಆರಾಧನೆ ಮಾಡುವುದು ಒಳಿತು. ವೃತ್ತಿ ವ್ಯಾಪಾರಗಳು ಒದಗಿ ಬರುತ್ತವೆ.

**ವೃಶ್ಚಿಕ**

ಗೃಹ ಸೌಖ್ಯ, ಮನೆಯ ಹತ್ತಿರವೇ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳುವಿರಿ. ಪಶು ಸಂಪತ್ತು ವೃದ್ಧಿಯಾಗಲಿದೆ. ಅಧಿಕಾರವೃದ್ಧಿ ವೃತ್ತಿ, ಉದ್ಯೋಗಗಳು ಒದಗಿ ಬರುತ್ತದೆ. ವ್ಯಾಪಾರ ವೃದ್ಧಿಯಾಗಲಿದೆ. ದೇಹಾರೋಗ್ಯದ ಮೇಲೆ ಗಮನ ಅಗತ್ಯ ವಿದ್ಯೆಯ ವಿಚಾರಗಳಲ್ಲಿ ಹಠ ಸಾಧಿಸುವಿರಿ. ಆದಾಯ ಮಾರ್ಗಗಳು ಬೆಳವಣಿಗೆಯಾಗುತ್ತವೆ.

**ಧನಸ್ಸು**

ಧೈರ್ಯ, ಪ್ರಯತ್ನ, ದೈವಬಲ, ಸದುದ್ದೇಶಗಳಿಂದ ಮಾಡುವ ನಿಮ್ಮೆಲ್ಲಾ ಕೆಲಸಗಳು ವಿಜಯವನ್ನು ತಂದು ಕೊಡುತ್ತವೆ. ಇತರರಿಗೆ ಸಹಾಯಹಸ್ತರಾಗಿರುವುದೊಂದೇ ಅಲ್ಲದೇ, ಮಾರ್ಗದರ್ಶಕರಾಗಲಿದ್ದೀರಿ , ವಿದ್ಯೆಯ ವಿಚಾರಗಳಲ್ಲಿ ಉದ್ಯೋಗ ವಿಷಯಗಳಲ್ಲಿ ನಿಮ್ಮದೇ ಮೇಲುಗೈಯಾಗಿರುತ್ತದೆ. ವಸ್ತು ವ್ಯಾಮೋಹಕ್ಕೊಳಗಾಗದೇ ಧನವನ್ನು ಅತಿಯಾಗಿ ಖರ್ಚುಮಾಡುವುದನ್ನು ನಿಲ್ಲಿಸಬೇಕು.

**ಮಕರ**

ಗೃಹಸ್ಥಿತಿ ಸಾಮಾನ್ಯವಾಗಿರುತ್ತದೆ.ವಿದ್ಯಾರ್ಥಿಗಳಿಗೂ ಪರಿಸ್ಥಿತಿ ಸಾಮಾನ್ಯ ಆದಾಯದೊಂದಿಗೆ, ಖರ್ಚುಗಳು ಸಹಾ ಬೆಳೆಯಲಿವೆ. ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಿರಿ. ವೃತ್ತಿ ವ್ಯವಹಾರಗಳು,ಪೋತ್ಸಾಹಕರವಾಗಿ ರುತ್ತವೆ. ಆರೋಗ್ಯವನ್ನು ಕಾಪಾಡಿಕೊಳ್ಳುವುದೊಂದೇ ಅಲ್ಲದೇ ಗರ್ಭವತಿಯರು ಶ್ರದ್ಧೆ ತೆಗೆದುಕೊಳ್ಳಬೇಕು. ಸುಬ್ರಹ್ಮಣ್ಯ ಆರಾಧನೆ ಮಾಡುವುದು ಉತ್ತಮ.

**ಕುಂಭ**

ವಿದ್ಯಾರ್ಥಿಗಳು ಒಳ್ಳೆಯ ಶ್ರದ್ಧೆ ಶಕ್ತಿಗಳಿಂದ ಪ್ರಯತ್ನ ಮಾಡಿ ಪರೀಕ್ಷೆಯ ಸಿದ್ಧತೆ ಮಾಡುವಿರಿ. ಈ ರಾಶಿಯವರಿಗೆ ಸಂಘಗಳಲ್ಲಿ ಗೌರವ ಮರ್ಯಾದೆಗಳು, ಸಮಸ್ತ ಕಾರ್ಯಗಳು ಸಿದ್ಧಿಸುತ್ತವೆ. ಪ್ರಮುಖರೊಂದಿಗೆ ಪರಿಚಯಗಳು, ಧನಕನಕ ಪ್ರಾಪ್ತಿ, ವಾಹನಗಳು, ವೃದ್ಧಿಯಾಗುತ್ತವೆ. ಮತ್ತು ಪುತ್ರರಿಂದ ಸುಖ ಸಂತೋಷಗಳೂ, ಆನಂದಕರವಾದ ವಾತಾವರಣವೂ, ಉದ್ಯೋಗ ವಿಷಯಗಳಲ್ಲಿಯೂ ಮುನ್ನಡೆಯುವಿರಿ.

**ಮೀನ**

ಗೃಹದಲ್ಲಿ ಕಲ್ಯಾಣಾದಿ ಶುಭಕಾರ್ಯಗಳು , ಒದಗಿ ಬರುತ್ತವೆ. ಶುಭ ವ್ಯಯವಾಗಲಿದೆ. ಆರೋಗ್ಯ ವಿಷಯಗಳು ಅನುಕೂಲಕರ, ದೀರ್ಘ ಪ್ರಯಾಣಗಳು ಮಾಡಬೇಕಾಗಿ ಬರುತ್ತವೆ. ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುವಿರಿ. ಸಂಯಮ ಅಗತ್ಯ ಎದುರಿನವರ ಮೇಲೆ ವಿಮುಖತೆಯನ್ನು ಸಹಾ ಆನಂದದಿಂದ ಅನುಸರಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

# ಹರಿದಾಸ ಯತಿ ಶ್ರೇಷ್ಠ ಶ್ರೀ ವಾದಿರಾಜರು

- ಡಾ॥ ಆರ್.ವಾದಿರಾಜು
97317 33245



ಕನ್ನಡ ಸಾಹಿತ್ಯದಲ್ಲಿ ದಾಸಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಈ ಸ್ಥಾನವನ್ನು ಬೆಳಗಿಸಿದವರು ಹರಿದಾಸರು. ಇವರು ಆತ್ಮೋದ್ಧಾರದ ಮಾರ್ಗದಲ್ಲಿ ನಡೆದವರು. ಸಾಮಾನ್ಯ ಜನರನ್ನು ತಮ್ಮ ಜೊತೆಯಲ್ಲಿ ಸೇರಿಸಿಕೊಂಡು ಬರೆದ ಸಾಹಿತ್ಯ ಇಂತಹ ಹರಿದಾಸ ಪರಂಪರೆಯನ್ನು ಬೆಳೆಸಿ ಬೆಳಗಿಸಿ ಉತ್ತುಂಗು ಶಿಖರಕ್ಕೆ ಏರಿಸಿದ ಯತಿವರ್ಯರಲ್ಲಿ ಶ್ರೀವಾದಿರಾಜರು ಒಬ್ಬರು. ಇವರು ಹರಿದಾಸ ಸಾಹಿತ್ಯದ ಧೀಮಂತ ಶ್ರೇಷ್ಠರು. ತಮ್ಮ ನೂರಿಪ್ಪತ್ತು ವರ್ಷಗಳ ಬದುಕಿನುದ್ದಕ್ಕೂ ಸಂಸ್ಕೃತ ಗ್ರಂಥಗಳನ್ನು ಮತ್ತು ಕನ್ನಡ ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ಪುರಂದರದಾಸರು, ವ್ಯಾಸರಾಜರು, ಮತ್ತು ಕನಕದಾಸರ ಸಮಕಾಲೀನರಾಗಿದ್ದರು. ಯತಿಗಳಾಗಿ ಒಂದು ಸಂಸ್ಥೆಯಂತೆ ಧಾರ್ಮಿಕ ಹಾಗೂ ಸಮಾಜ ಸುಧಾರಣೆಯನ್ನು ಮಾಡಿದವರು. ಸಂಸ್ಕೃತದಲ್ಲಿ ಅನೇಕ ವಿಚಾರ ಪೂರ್ಣ ಗ್ರಂಥಗಳನ್ನು ಬರೆದಂತೆ ಅವರು ಜನಸಾಮಾನ್ಯರಿಗಾಗಿ ಕನ್ನಡ ಕೃತಿಗಳನ್ನು ಮತ್ತು ಕನ್ನಡ ಕೀರ್ತನೆಗಳನ್ನು ರಚಿಸಿ ಹಾಡಿ, ಹಾಡಿಸಿದರು. ತಮ್ಮ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ಸಮಾಜದ ಬಗ್ಗೆ ಅಪಾರ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ದಕ್ಷಿಣಕನ್ನಡ ಜಿಲ್ಲೆಯ ಉತ್ತರದಿಶೆಯಲ್ಲಿರುವ ಕುಂದಾಪುರ ತಾಲೂಕಿನ ಕುಂಭಾಸಿ ಕ್ಷೇತ್ರಕ್ಕೆ ಸಮೀಪವಿರುವ ಹೂವಿನಕೆರೆಯಲ್ಲಿ ತುಳು ಬ್ರಾಹ್ಮಣ ಮನೆತನದ ಶ್ರೀರಾಮಾಚಾರ್ಯ ಮತ್ತು ಶ್ರೀಮತಿ ಸರಸ್ವತಿ ದಂಪತಿಗೆ ಮಗನಾಗಿ ಜನಿಸಿದರು. ಇವರಿಗೆ ಭೂವರಾಹ ಎಂದು ನಾಮಕರಣ ಮಾಡಿದರು.ಚಿಕ್ಕಂದಿನಿಂದಲೂ ಅಸಾಧಾರಣ ಪ್ರತಿಭೆವುಳ್ಳವರು. ಸೋದೆಮಠದ ಯತಿಗಳಾದ ಶ್ರೀವಾಗೀಶತೀರ್ಥರು ಇವರ ಗುರುಗಳು. ಗುರುಗಳಿಂದ 8ನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆಯನ್ನು ಪಡೆದು, ಅವರಿಂದಲೇ ವಾದಿರಾಜ ಎಂದು, ಸಾಮಾನ್ಯ ಜನರು ಗೌರವಪೂರ್ಣವಾಗಿ ಅವರನ್ನು ಗುರುರಾಜರು ಅಥವಾ ರಾಜರು ಎಂದು ಕರೆಯುತ್ತಿದ್ದರು. ವಿಜಯನಗರದ ರಾಜನು ಅವರನ್ನು ಪ್ರಸಂಗ ಭರಣತೀರ್ಥ ರೆಂದು ಕರೆದು ಗೌರವಿಸಿದರು.

ಮಧ್ವಮತ ಪ್ರಸಾರಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟು ಭಾರತದಾದ್ಯಂತ ಸಂಚರಿಸಿದರು. ಅಂದಿನ ಕಾಲದಲ್ಲಿ ಅವರು ಕೈಗೊಂಡ ಅನೇಕ ಸಮಾಜ ಸುಧಾರಣೆ ಹಾಗೂ ಧಾರ್ಮಿಕ ಸುಧಾರಣೆಗಳು ಮಹತ್ವವೆನಿಸುತ್ತವೆ. ವಾದಿರಾಜರು ಕೃಷ್ಣನ ಪೂಜೆಯ ಕಾರ್ಯಕ್ರಮವನ್ನು ಒಂದು ವ್ಯವಸ್ಥೆಯನ್ನು ಅನುಸರಿಸಿ ಮಾಡಬೇಕೆಂದು ನಿಯಮಗಳನ್ನು ಮಾಡಿದರು. ಎರಡು ತಿಂಗಳ ಕಾಲದ ಪೂಜೆಗೆ ಸೀಮಿತವಾಗಿದ್ದ ಉಡುಪಿಯ ಅಷ್ಟಮಠಗಳ ಪರ್ಯಾಯ ವ್ಯವಸ್ಥೆಯನ್ನು ಎರಡು ವರ್ಷಗಳ ಕಾಲ ಹಿಗ್ಗಿಸಿ ಸುಧಾರಣೆ ಮಾಡಿದರು. ಮಠಗಳಲ್ಲಿ ಭಾಗವತರ ಭಜನ ಪದ್ಧತಿಯನ್ನು ಆಚರಣೆಗೆ ತಂದರು. ಇದರಿಂದ ಮಠಗಳಲ್ಲಿ ದೇವರ ಸೇವೆಗೆ ಹರಿದಾಸರ ಕನ್ನಡ ಕೀರ್ತನೆಗಳು ಬಳಕೆಯಾದವು.

ಅ) ಹೀಗೆ ಸತತವಾದ ನಿರಂತರ ಕಾರ್ಯ ಚಟುವಟಿಕೆಗಳ ನಡುವೆಯೂ ಸಹ ಶ್ರೀವಾದಿರಾಜರು ಸಾಹಿತ್ಯ ರಚನೆ ಮಾಡಿದ್ದಾರೆ.ಇವರು ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲೂ ಅಪಾರವಾದ ಪಾಂಡಿತ್ಯ ಪಡೆದಿದ್ದರು.

ಆ) ತೀರ್ಥಪ್ರಬಂಧ ಅಖಂಡ ಭರತಖಂಡವನ್ನು ಪ್ರವಾಸ ಮಾಡಿ ಆಯಾ ಕ್ಷೇತ್ರದ ಮಹಿಮೆಯನ್ನು ನಿರೂಪಿಸುವರು. ಸಂಸ್ಕೃತದಲ್ಲಿ ಪ್ರವಾಸಗ್ರಂಥ ರಚನೆಗೆ ಮಾದರಿಯಾಗಿದೆ. ಇದರಲ್ಲಿ ಪಶ್ಚಿಮ, ಪೂರ್ವ, ಉತ್ತರ , ದಕ್ಷಿಣ ಪ್ರಬಂಧಗಳೆಂಬ

ನಾಲ್ಕು ಭಾಗಗಳಿವೆ. ಈ ಗ್ರಂಥದಲ್ಲಿ ಅವರು ಸಂದರ್ಶಿಸಿದ ಕ್ಷೇತ್ರಗಳ ವರ್ಣನೆಯು ಸಹ ಕಂಡು ಬರುತ್ತದೆ.

ಇ) ರುಕ್ಮಿಣೀಶ ವಿಜಯ ಇದು ನವರಸಭರಿತವಾದ ಕಾವ್ಯ, ನಾನಾಲಂಕಾರ ಭರಿತ, ವಿಚಿತ್ರ ವೃತ್ತಗಳಿಂದ ಕೂಡಿದೆ. ಇದು ರುಕ್ಮಿಣೀಹರಣ, ರುಕ್ಮಿಣಿ ವಿವಾಹ ಇದರ ಕಥಾವಸ್ತುವಾಗಿದೆ. ಈ ಕಾವ್ಯ ಪುಣೆಯ ವಿದ್ವಾಂಸರಿಂದ ಮೆಚ್ಚುಗೆ ಗಳಿಸಿದೆ.

ಈ) 'ಲಕ್ಷಾಲಂಕಾರ' ಕಾವ್ಯ ಶ್ರೀ ಮನ್ಮಹಾಭಾರತದ ಒಂದು ಲಕ್ಷ ಕಠಿಣ ಪದಗಳಿಗೆ ಟೀಕೆಯನ್ನು ರಚಿಸಿದ್ದಾರೆ. ಇದು ಅನೇಕ ಪ್ರಾಚೀನ ಕೋಶಗಳನ್ನು ಅವಲಂಬಿಸಿರುವ ಅಪೂರ್ವ ಕೃತಿಯಾಗಿದೆ.

ಶ್ರೀವಾದಿರಾಜರು ಕನ್ನಡದಲ್ಲಿ ತತ್ವ ವಿಚಾರವನ್ನು ತರಲು ಮಾಡುವ ಪ್ರಯತ್ನ ಅಗಾಧವಾಗಿದೆ ಮತ್ತು ಅಪಾರ ವಾಗಿದೆ. ಈ ಉದ್ದೇಶಕ್ಕಾಗಿಯೇ ಕೀರ್ತನೆಗಳನ್ನು ರಚಿಸಿದ್ದಾರೆ. ಜೊತೆಗೆ ನೀಳ ಕೀರ್ತನೆಗಳಲ್ಲದೆ, ದೀರ್ಘಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಅ) ವೈಕುಂಠವರ್ಣನೆ ಆ) ಸ್ವಪ್ನಪದ ಇ) ಗುಂಡಕ್ರಿಯ ಈ)ಅವತಾರತ್ರಯ ಮಧ್ವ ಸುವ್ವಾಲಿ ಉ) ಭ್ರಮರಗೀತೆ ಊ) ಲಕ್ಷ್ಮೀಶೋಭಾನೆ.

ಕನ್ನಡದಲ್ಲಿ ವಾದಿರಾಜರು ಕೀರ್ತನೆಗಳನ್ನು ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇದರ ಜೊತೆಗೆ ಕೆಲವು ಕನ್ನಡ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಇವರ ಇಷ್ಟದೈವ 'ಹಯವದನ' ಅವರ ಅಂಕಿತವಾಗಿದೆ. ವಸ್ತುವಿ ಗನುಗುಣವಾಗಿ ಶ್ರೀ ವಾದಿರಾಜರ ಕೃತಿ ರಾಶಿಯನ್ನು ದೇವತಾ ಸ್ತುತಿ, ಆತ್ಮನಿವೇದನೆ,ತತ್ವ ಪ್ರತಿಪಾದನೆ,ಲೋಕನೀತಿ, ಪುರಾಣ, ಸಂಪ್ರದಾಯ ಎಂದು ವಿಂಗಡಿಸಬಹುದು. ಈ ರಚನೆಗಳ ಹಿನ್ನೆಲೆ ಎಂದರೆ ಭಕ್ತಿ ಪರವಶತೆ. ಅವರ ಭಾಷೆ ಶೈಲಿ, ವರ್ಣನಾ ಸಾಮಾರ್ಥ್ಯ ಅನನ್ಯವಾದುದು.

ಶ್ರೀವಾದಿರಾಜರ ಶೈಲಿಯಲ್ಲಿ ಸಂಕ್ಷಿಪ್ತತೆಯೂ ರೂಪಕ ಪ್ರತಿಭೆಯೂ ಇದೆ.ಎಷ್ಟು ವರ್ಣಿಸಿದರೂ ತೃಪ್ತವಾಗದ ಭಾವುಕ ಕವಿ ಮನಸ್ಸಿನಲ್ಲಿದೆ.ಭಕ್ತನಾದವನಿಗೆ ಭಗವಂತನಲ್ಲಿ ಅಚಲ ವಾದ ಭಕ್ತಿ, ಶ್ರದ್ಧೆಗಳು ಉಂಟಾಗುವವರೆಗೆ ಆಗುವ ಆತಂಕ ಅಷ್ಟಿಷ್ಟಲ್ಲ. ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಚಿತ್ತದ ಕೈಗೊಂಬೆಗಳೇ ಸರಿ. ವಾದಿರಾಜರ ವಾಣಿಯಲ್ಲಿಯೂ ಭಕ್ತಿ ಭಾವವನ್ನೂ ಕಾಣಬಹುದು. ಇನ್ನೇನು ಮಾಡುವೆ ಇನ್ನಾರ ಬೇಡುವೆ ಪ್ರಸನ್ನ ಚನ್ನಕೇಶವ ಎನ್ನ ಭಿನ್ನಪವ ಮನ್ನಿಸಿ ದಿನ ದಿನದಲ್ಲಿ ನಿನ್ನನರ್ಚಿಪಂತೆ ಮಾಡು ಎಂದು ಹಯವದನನ್ನು ಬೇಡಿಕೊಂಡಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ "ಇನ್ನಾರಿಗು ಸುರುವೆ ಇನ್ನಾರ ಬಳಲಿಸುವೆ ನಿನ್ನ ಚಿತ್ತ ಬಂದಂತೆ ನೀನೆ ಕಾಯಯ್ಯ ಎಂದಿದ್ದಾರೆ. ಭಗವಂತನನ್ನು "ಎನಗೆ ನೀ ಬಂಧು ಎಂದೆಂದು ದಯಾಸಿಂಧು''ಎಂದು ಕೊಂಡಾಡಿದ್ದಾರೆ. "ಮಾಧವ ಭಕ್ತ ವತ್ಸಲ ಹಯವದನನೇ ನೀ ದಯಮಾಡಿ ನಿನ್ನಂತೆ ಮಾಡೆನ್ನಮನ" ಎಂದು ಬೇಡುವ ಬಗೆ ಹೃದಯ ಸ್ಪರ್ಶಿಯಾದುದು.

ಲೋಕನೀತಿಯ ಕೀರ್ತನೆಗಳು ವಾದಿರಾಜರ ಸಾಮಾ ಜಿಕ ಪ್ರಜ್ಞೆಯ ಮತ್ತೊಂದು ಆಯಾಮವನ್ನು ತೆರೆದಿಡುತ್ತದೆ. ಜನ ಸಾಮಾನ್ಯರು ಭಕ್ತಿಯನ್ನು ಆಚರಿಸದೆ ಬರಿಯ ಲೌಕಿಕವಾದ ಸುಖಭೋಗಗಳಲ್ಲಿ ಮುಳುಗಿದ್ದನ್ನು ನೋಡಿ ನಾನಾ ರೀತಿಯಿಂದ ಯತಿಗಳು ಅವರನ್ನು ಎಚ್ಚರಿಸಿದ್ದಾರೆ. ಕೆಲವು ಸಾರಿ ಮೃದುವಾದ ಭಾಷೆಯಲ್ಲಿ, ತಿಳಿ ಹೇಳಿದ್ದಾರೆ. ಕೆಲವೊಮ್ಮೆ ಸಾತ್ವಿಕ ಅಕ್ರೋಶ ಎಂದು ಬೈದು ಬುದ್ಧಿ ಹೇಳುತ್ತಾರೆ.

ಈ ಎಲ್ಲ ರಚನೆಗಳಲ್ಲಿ ಅವರು ಬಳಸಿದ ಭಾಷೆ ಸರಳ ವಾಗಿದೆ ಮತ್ತು ಜನ ಸಾಮಾನ್ಯರ ಆಡು ಭಾಷೆಯಲ್ಲಿ ಬರೆದಿ ದ್ದಾರೆ. ಅವರು ಬಳಸಿರುವ ಉಪಮೆಗಳು ಪರಿಣಾಮಕಾರಿ ಯಾಗಿವೆ. ಇದು ಅವರ ಅಂದಿನ ಸಮಯ ಪ್ರಜ್ಞೆಯನ್ನು ತೋರಿಸುತ್ತದೆ. ಹಲವಾರು ತಂತ್ರಗಳನ್ನು ಬಳಸಿದ್ದಾರೆ. ನಾಲ್ಕು ನುಡಿಗಳ ಕೀರ್ತನೆ, ಅದಕ್ಕಿಂತ ಹೆಚ್ಚಿನ ಒಂದು ಸನ್ನಿವೇಶವನ್ನು ಇಡಿಯಾಗಿ ವರ್ಣಿಸುವ ನೀಳ ಕೀರ್ತನೆ, ದೀರ್ಘಕೀರ್ತನೆ, ಜಾನಪದ ಹಾಡುಗಳ ಛಂದಸ್ಸು ಆವರಣ, ಧಾಟಿಗಳ ಸಮುದ್ಧ ಸೂರ-ಇವೆಲ್ಲ ಅಂಶಗಳಿಂದಾಗಿ, ಶ್ರೀವಾದಿರಾಜರು ರಚಿಸಿದ ಸಾಹಿತ್ಯ ಆತ್ಮೀಯವಾಗುತ್ತದೆ. ದಾಸಸಾಹಿತ್ಯದ ಆರಂಭದಲ್ಲಿ ಸಾಮಾನ್ಯರಿಗೆ ಎಲ್ಲ ಜ್ಞಾನವನ್ನೂ ಕನ್ನಡದಲ್ಲಿ ದೊರಕಿಸ ಬೇಕೆನ್ನುವ ಅವರ ಅಪಾರ ಕಾಳಜಿಯ ಅಗಾಧ ಸಾಹಿತ್ಯರಾಶಿ ಹೆಚ್ಚು ಮಹತ್ವ ಪೂರ್ಣವಾಗುತ್ತದೆ. ಶ್ರೀ ವಾದಿರಾಜರಂಥ ಯತಿವರ್ಯರ ಆಶೀರ್ವಾದ ರೂಪದ ಈ ಕೃತಿ ರಾಶಿ, ಎಂದೆಂ ದಿಗೂ ಪ್ರಸ್ತುತವಾಗಿ ನಿಲ್ಲುವಂತದ್ದು.

# ನಮೋ ವ್ಯಾಸಮುನೀಂದ್ರಾಯ

- ಭರತ್ ಎಂ.ಎ.
9480263676

ಕನ್ನಡ ನಾಡಿನಲ್ಲಿ ವೈಷ್ಣವ ಭಕ್ತಿ ಪಂಥದ ಪವರ್ತಕರೆಂದು ಮಾನ್ಯರಾದವರು ಶ್ರೀಮಧ್ವಾಚಾರ್ಯರು. ಇವರು ಪ್ರತಿಪಾದಿಸಿದ ದ್ವೈತ ಸಿದ್ಧಾಂತದಲ್ಲಿ ಅಚಲ ಶ್ರದ್ಧೆಯನ್ನು ಹೊಂದಿ ಕನ್ನಡದಲ್ಲಿ ಹರಿ ಕೀರ್ತನೆಗಳನ್ನು ರಚಿಸಿದವರು ಶ್ರೀಪಾದರಾಜರು. ಶ್ರೀಪಾದ ರಾಜರ ಮಾರ್ಗದಲ್ಲಿಯೇ ಸಾಗಿ ಭಕ್ತಿಪಂಥವನ್ನು ವಿಸ್ತರಿಸಿರುವವರು ವ್ಯಾಸ ರಾಜರು . ಕನ್ನಡನಾಡಿನಲ್ಲಿ ಭಕ್ತಿಪಂಥದ ಹರಿದಾಸ ಸಾಹಿತ್ಯದಲ್ಲಿ ಧ್ರುವತಾರೆಯಂತೆ ಬಂದು ಗುರುಗಳಿಂದಲೂ, ಶಿಷ್ಯ ಪ್ರಶಿಷ್ಯರಿಂದಲೂ ಸ್ತುತಿಸಿಕೊಂಡ ಮಹಾನ್ ಚೇತನ ಶ್ರೀವ್ಯಾಸರಾಜರು.

ವ್ಯಾಸರಾಜರು ಕ್ರಿ.ಶ. ೧೪೪೭ ಪ್ರಭವನಾಮ ಸಂವತ್ಸರದ ವೈಶಾಖಶುದ್ಧ ಸಪ್ತಮಿಯ ಭಾನುವಾರದಂದು ಜನಿಸಿದರು. ತಂದೆ ಬಲ್ಲಣಸುಮತಿ, ತಾಯಿ ಲಕ್ಷ್ಮಮ್ಮ ಅಥವಾ ಲಕ್ಷ್ಮೀದೇವಿ,ಇವರ ಬಾಲ್ಯದ ಹೆಸರು ಯತಿರಾಜ. ಯತಿರಾಜನ ಐದನೆ ವಯಸ್ಸಿನಲ್ಲಿ ಉಪನಯನ ವಾಯಿತು.ಏಳನೇ ವರ್ಷದಲ್ಲಿ ಅಬ್ಬೂರಿನ ಬ್ರಹ್ಮಣ್ಯತೀರ್ಥರು ಸನ್ಯಾಸವನ್ನು ಕೊಟ್ಟು, ವ್ಯಾಸರಾಜತೀರ್ಥರೆಂದು ಆಶ್ರಮ ನಾಮವನ್ನು ನೀಡಿ ಅನುಗ್ರಹಿಸಿದರು. ಮುಂದೆ ತಮ್ಮ ಶಿಷ್ಯನ ಉನ್ನತ ವಿದ್ಯಾಭ್ಯಾಸ ಕ್ಕಾಗಿ ವಿಭುದೇಂದ್ರರ ಶಿಷ್ಯರಾದ ಮುಳಬಾಗಿಲಿನ ಶ್ರೀಪಾದರಾಜರ ಬಳಿ ಕಳುಹಿಸಿದರು. ಮುಂದಿನ ಹನ್ನೆರಡು ವರುಷಗಳ ಕಾಲ ಅಂದರೆ ೧೪೫೪-೧೪೬೭ ತನಕ ಶ್ರೀಪಾದರಾಜರಲ್ಲಿ ವೇದ, ವೇದಾಂತ, ತರ್ಕ, ನ್ಯಾಯಾದಿ ಗ್ರಂಥಗಳ ಅಭ್ಯಾಸವನ್ನು ಮಾಡಿದರು. ಸದಾ ಶ್ರೀಪಾದ ರಾಜರ ಜೊತೆಗೆ ಇದ್ದುಕೊಂಡು ಅವರ ನಡೆ ನುಡಿಗಳಿಂದ ಸ್ಫೂರ್ತಿ ಪಡೆದು ಸಮರ್ಥ ಶಿಲ್ಪಿಯ ಕೈಯಲ್ಲಿ ಪುಟಗೊಂಡು ಸಿದ್ಧವಾದ ಪುತ್ಥಳಿ ಯಂತೆ ವ್ಯಾಸರಾಜರು ನಿಜವಾಗಿಯೂ ಕಲಿಯುಗದ ವ್ಯಾಸರಾಗಿ ರೂಪುಗೊಂಡರು.

ಶ್ರೀ ಪಾದರಾಜರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯ ದಿಂದ ಪ್ರೇರಿತರಾಗಿ ತಾವು ಸಹ ಶ್ರೀಕೃಷ್ಣ, ಸಿರಿಕೃಷ್ಣ ಅಂಕಿತಗಳಿಂದ ಕೃತಿಗಳನ್ನು ರಚಿಸಿದರು.ವ್ಯಾಸರಾಜ ತೀರ್ಥರು ಶ್ರೀಪಾದರಾಜರಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ನಡೆದಾಡುವ ವಿಶ್ವಕೋಶದಂತಿದ್ದರು. ವಿದ್ಯೆಯಲ್ಲಿ ಮೇರುಪರ್ವತದಂತಿದ್ದರು.ಸಾಳುವ ನರಸಿಂಹನು ತನ್ನ ಏಳಿಗೆಗೆ ಕಾರಣರಾದ ಶ್ರೀಪಾದರಾಜರನ್ನು ತನ್ನ ರಾಜ ಗುರುಗಳಾಗಿ ಸ್ವೀಕರಿಸಿ ಗೌರವಿಸಿದನು. ವ್ಯಾಸರಾಜರು ಈಸಮಯದಲ್ಲಿ ತಮ್ಮ ಎರಡನೆ ಉತ್ತರ ಭಾರತ ಯಾತ್ರೆಯಲ್ಲಿ ಬಂಗಾಳಕ್ಕೆ ಬಂದು ಚೈತನ್ಯ ಪರಂಪರೆಯ ಮೂಲ ಪುರುಷರಾದರು. ಈ ಸಮಯದಲ್ಲಿ ವಿಜಯ ನಗರಕ್ಕೆ ಬರಲು ಶ್ರೀ ಪಾದರಾಜರಿಂದ ಆತುರದ ಕರೆಯು ಬಂದು ವ್ಯಾಸರಾಜರು ಶ್ರೀಪಾದರಾಜರ ಸೇವೆಗೆ ವಿಜಯನಗರಕ್ಕೆ ಬಂದರು. ವ್ಯಾಸರಾಜರನ್ನು ಕರೆಸಿಕೊಳ್ಳುವುದರಲ್ಲಿ ಶ್ರೀಪಾದರಾಜರಿಗೆ ಬೇರೆ ಒಂದು ಉದ್ದೇಶವಿತ್ತು. ಅವರಿಗೆ ಈಗ ವಯಸ್ಸಾಗಿತ್ತು. ಸಾಮ್ರಾಜ್ಯದ ರಾಜಗುರು ಪದವಿಯನ್ನು ತರುಣರು, ಸಮರ್ಥರು ಆದ ವ್ಯಾಸ ರಾಜರಿಗೆ ಒಪ್ಪಿಸಿ ತಾವು ತಮ್ಮ ಕಡೆಗಾಲವನ್ನು ಮುಳಬಾಗಿಲಿನಲ್ಲಿ ಕಳೆಯಲು ಆಶಿಸಿದರು.

ವ್ಯಾಸರಾಜರು ವಿಜಯನಗರದ ಇತಿಹಾಸದ ಸಂಕ್ರಮಣ ಕಾಲದಲ್ಲಿ ಬಂದವರು. ಸಾಮ್ರಾಜ್ಯದ ಸಾಳುವ ಹಾಗೂ ತೌಳವ ವಂಶದ ಆರು ಮಂದಿ ಸಾಮ್ರಾಟರಿಗೆ ರಾಜಗುರುಗಳಾಗಿ ಅವರಿಗೆ ಯುಕ್ತವಾದ ಮಾರ್ಗದರ್ಶನ ನೀಡಿದರು. ತಮ್ಮ ಆದರ್ಶ ಜೀವನದಿಂದ ಸಾಮ್ರಾಜ್ಯದ ಜನತೆಗೆ ಅಮೋಘವಾದ ರೀತಿಯಲ್ಲಿ ಸೇವೆ ಸಲ್ಲಿಸಿದರು. ವ್ಯಾಸರಾಯರು ಮಾಡಿದ ಮಹತ್ಕಾರ್ಯಗಳನ್ನು ನಾಲ್ಕು ಮುಖವಾಗಿ ಪರಿಗಣಿಸಬಹುದು. 1. ರಾಜಕೀಯವಾಗಿ 2. ಧಾರ್ಮಿಕ ವಾಗಿ 3. ಸಾಮಾಜಿಕವಾಗಿ ಮತ್ತು 4. ಸಾಂಸ್ಕೃತಿಕವಾಗಿ ಹೀಗೆ ಅವರು ಸಲ್ಲಿಸಿದ ಮಹತ್ ಸೇವೆ ಲೋಕೋತ್ತರವಾದುದು. ಸರ್ವಜ್ಞಾಚಾರ್ಯರ ಗುರು ಪೀಠದಲ್ಲಿ ಬಂದ ಯತಿ ಶ್ರೇಷ್ಠರಲ್ಲಿ ಹಿಂದೆ ಯಾರೂ ಇಷ್ಟು ವ್ಯಾಪಾಕ ರೀತಿಯಲ್ಲಿ ಸೇವೆ ಸಲ್ಲಿಸಿಲ್ಲ ವೆನ್ನಬಹುದು. ವಿಭುಧೇಂದ್ರ ಮಠಕ್ಕೆ ಸುರೇಂದ್ರರ ಕೋರಿಕೆಯಂತೆ ವಿಜಯೀಂದ್ರ ರಂಥ ಶಿಷ್ಯರನ್ನು ಕಾಣಿಕೆ ಇತ್ತರು. ಉಡುಪಿಯ ಪರ್ಯಾಯ ಕ್ರಮವನ್ನು ವ್ಯವಸ್ಥಿತ ಗೊಳಿಸಿದ ವಾದಿರಾಜರನ್ನು ಅಷ್ಟಮಠಗಳಿಗೆ ಕೊಟ್ಟರು.ವ್ಯಾಸರಾಯರು ಅಷ್ಟದ್ವೈತ ವಿದ್ಯಾ ಪೀಠಗಳನ್ನು ಎಂಟು ಸ್ಥಳಗಳಲ್ಲಿ ಸ್ಥಾಪಿಸಿ, ಅವುಗಳಿಗೆ ಯೋಗ್ಯರಾದ ಪಂಡಿತ ಶ್ರೇಷ್ಠರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಸಾಮಾಜಿಕವಾಗಿ ವ್ಯಾಸರಾಯರು ಮಾಡಿದ ಕಾರ್ಯ ಚಿರಸ್ಮರಣೀಯವಾದುದು. ಅವರು ಕಂದಕೂರು ಗ್ರಾಮದ ಬಳಿಯಲ್ಲಿ ವ್ಯಾಸಸಮುದ್ರ ಕೆರೆಯನ್ನು ಕಟ್ಟಿಸಿ ಜನತೆಗೆ ಜೀವನೋಪಾಯವನ್ನು ಕಲ್ಪಿಸಿ ಉಪಕಾರ ಮಾಡಿದರು.

ವ್ಯಾಸರಾಯರುಮಾಡಿದ ಅತಿ ದೊಡ್ಡ ಸಮಾಜ ಕಾರ್ಯ ಎಂದರೆ ತಿರುಪತಿಯಲ್ಲಿ ನಿಂತು ಹೋಗಿದ್ದ ದೇವತಾ ಸೇವೆಗಳನ್ನು ಪುನರ್ ವ್ಯವಸ್ಥೆ ಗೊಳಿಸಿದ್ದು, ಹನ್ನೆರಡು ವರ್ಷಗಳ ಕಾಲ ತಿರುಪತಿಯಲ್ಲಿ ನೆಲೆಸಿ, ತಂತ್ರ ಸಾರಾಗ ಮೋಕ್ತ ಕ್ರಮದಿಂದ ಸ್ವಾಮಿಯನ್ನು ಪೂಜಿಸಿ, ಹಿಂದಿಣ ಅರ್ಚಕ ವಂಶದವರಿಗೆ ಮನಃ ಪೂರ್ವಕವಾಗಿ ಬಿಟ್ಟುಕೊಟ್ಟರು.

ವ್ಯಾಸರಾಜರ ಕನ್ನಡ ಪ್ರೇಮ ಅವರಿಗೆ ಶ್ರೀಪಾದರಾಜರಿಂದ ಬಂದ ಬಳುವಳಿ, ಕನ್ನಡದಲ್ಲಿ ಹರಿನಾಮಗಳನ್ನು ಹಾಡುವ, ಭಜನೆ ಮಾಡುವ ತಮ್ಮನ್ನು ದಾಸರೆಂದು ಕರೆದು ಕೊಳ್ಳುವ ಜನ ಎಲ್ಲ ಜಾತಿಗಳಲ್ಲೂ ಇದ್ದರು. ಅಸಂಘಟಿತವಾದ ಈ ಭಕ್ತರ ಸಮೂಹಕ್ಕೆ ಒಂದು ಸಂಘಟಿತ ರೂಪನೀಡಿ ಅದನ್ನು 'ದಾಸಕೂಟ' ಎಂದು ಕರೆದರು. ಕನ್ನಡದಲ್ಲಿ ಹರಿನಾಮಗಳನ್ನು ರಚಿಸಿ ಹಾಡಿದ ಭಕ್ತರ ಸಮೂಹವೆ 'ದಾಸಕೂಟ' ವ್ಯಾಸರಾಜರ ಔದಾರ್ಯ ಮತ್ತು ಲೋಕೋತ್ತರ ದೃಷ್ಟಿಯಿಂದ ರೂಪು ಗೊಂಡ 'ದಾಸಕೂಟ' ಭಕ್ತಿ ಪಂಥಕ್ಕೆ ಭದ್ರವಾದ ನೆಲೆಗಟ್ಟು ಒದಗಿಸಿತು. ಪುರಂದರ ದಾಸ, ಕನಕದಾಸ, ವಾದಿರಾಜ ವೈಕುಂಠದಾಸರಂಥ ಹರಿದಾಸರಿಂದ ದಾಸಸಾಹಿತ್ಯ ವ್ಯಾಪಕವಾಗಿ ಬೆಳೆಯಿತು. ಹರಿದಾಸ ಸಾಹಿತ್ಯದ ಮೇರು ಪ್ರತಿಭೆಗಳಲ್ಲಿ ಒಬ್ಬರೆಂದು ಗುರುತಿಸಲಾದ ವ್ಯಾಸರಾಜರು ತಮ್ಮ ಗುರುಶಿಷ್ಯರಿಬ್ಬರಿಂದಲೂ ಹೊಗಳಿಸಿ ಕೊಂಡವರು. ಅವರ ಲೋಕಸೇವೆ, ಸನ್ಯಾಸದ ಮೇಲ್ಮೆ ಮತ್ತು ಮಹಿಮಾ ವಿಶೇಷ ಗಳನ್ನು ಅವರ ಸಮಕಾಲೀನರೂ ಮುಂದಿನ ಹರಿದಾಸರು ಕೊಂಡಾಡಿದ್ದಾರೆ. ವ್ಯಾಸರಾಜರ ಸ್ತುತಿ ಹರಿದಾಸರ ಸ್ತುತಿ ಪರಂಪರೆಯಲಿ ಒಂದು ಸಂಪ್ರದಾಯ ರಾಗಿಯೇ ಬಂದಿದೆ.

ಶ್ರೀವ್ಯಾಸರಾಜರನ್ನು, ಅವರು ತೋರಿದ ಮಾರ್ಗದರ್ಶನದಲ್ಲಿ ಹರಿದಾಸ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ಬಹುತೇಕ ಎಲ್ಲಾ ಹರಿದಾಸರು ಅತ್ಯಂತ ಗೌರವಾದರಗಳಿಂದ ಸ್ತುತಿಸಿದ್ದಾರೆ. ಅಷ್ಟೇ ಏಕೆ ಸ್ವತಃ ವ್ಯಾಸರಾಜರ ವಿದ್ಯಾಗುರುಗಳಾದ ಶ್ರೀ ಶ್ರೀಪಾದರಾಜರೇ ತಮ್ಮ ಎರಡು ಕೃತಿಗಳಲ್ಲಿ ಅವರನ್ನು ಆನಂದತುಂದಿಲರಾಗಿ ಕೊಂಡಾಡಿದ್ದಾರೆ. ಶ್ರೀ ವ್ಯಾಸತೀರ್ಥರ ಜೀವಿತಾವಧಿಯ ವಿವಿಧ ಹಂತಗಳನ್ನು ಹರಿದಾಸರು ವಿಸ್ತಾರವಾಗಿ ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ. ಮತ್ತು ತಮ್ಮ ಗುರು ಭಕ್ತಿಯನ್ನು ತೋರಿದ್ದಾರೆ. ಮದ್ವಮತವನ್ನು ಉದ್ಧರಿಸಿದ ಮುನಿಕುಲ ತಿಲಕ ಶ್ರೀ ವ್ಯಾಸ ರಾಜರ ಅಪ್ರತಿಮ ವ್ಯಕ್ತಿತ್ವವನ್ನು ಸಾಕಲ್ಯೇನ ವರ್ಣಿಸಲು ಸಾಧ್ಯವಿಲ್ಲ ಏಕೆಂದರೆ ಆ ವಿರಾಟ್ ಪುರುಷನ ವ್ಯಕ್ತಿತ್ವವನ್ನು ವರ್ಣಿಸಲು, ಗುರು ವರ್ಯ ಶ್ರೀ ಪಾದರಾಜರೆಂದಂತೆ.

ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು
ವ್ಯಾಸಮುನಿರಾಯರ ಸಂನ್ಯಾಸದಿರುವ



# त्रयोविंशः पाठः
# ಇಪ್ಪತ್ತಮೂರನೇಯ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

बालकस्य = ಹುಡುಗನ, ಹುಡುಗನಿಗೆ    कुतः = ಎಕೆ    बालकानाम् = ಹುಡುಗರ, ಹುಡುಗರಿಗೆ    ततः= ಅದರಿಂದ

दन्तः = ಹಲ್ಲು    अतः = ಇದರಿಂದ

प्रार्थनाद्यर्थकम् = ಪ್ರಾರ್ಥನಾದಿಪೂರ್ವಕವಾಗಿ

प्र. खादतु = खादन्तु    म. खाद = खादत    उ. खादामि = खादाम

ತಿನ್ನು, ತಿನ್ನಲಿ = ತಿನ್ನಿರಿ, ತಿನ್ನಲಿ    ನೀನು ತಿನ್ನು = ನೀವು ತಿನ್ನಿರಿ    ತಿನ್ನುತ್ತೇನೆ = ತಿನ್ನುತ್ತೇವೆ

## ಪ್ರಶ್ನೆ

1. बालकस्य दन्ताः नासन्।
2. एते बालकाः अन्नं खादन्तु।
3. त्वमपि झटिति स्नानं कृत्वाऽन्नं खाद।
4. अद्य ममान्नं मास्तु।
5. तर्हि किं खादिष्यसि।
6. फलानि खादिष्यामि।
7. युष्मद्गृहे फलानि सन्ति वा?
8. अनेकफलानि सन्ति।
9. बालकस्य जनकः भोजनम् अकरोद्वा न वा?
10. सः इदानीम् अस्मद्गृहस्य आरात् देवस्य नमस्कारान् करोति।

## ಪ್ರಶ್ನೆ

1. ಹುಡಗನಿಗೆ ಹಲ್ಲುಗಳು ಇಲ್ಲ.
2. ಈ ಹುಡುಗರು ಅನ್ನವನ್ನು ತಿನ್ನಲಿ
3. ನೀನು ಕೂಡ ಕೂಡಲೇ ಸ್ನಾನ ಮಾಡಿ ಅನ್ನವನ್ನು ತಿನ್ನು
4. ಇವತ್ತು ನನಗೆ ಅನ್ನ ಬೇಡ
5. ಹಾಗಾದರೇ ಏನು ತಿನ್ನುವಿ?
6. ಹಣ್ಣುಗಳನ್ನು ತಿನ್ನುತ್ತೇನೆ.
7. ನಿಮ್ಮ ಮನೆಯಲ್ಲಿ ಹಣ್ಣುಗಳಿವೆಯಾ?
8. ಬಹಳಷ್ಟು ಹಣ್ಣುಗಳಿವೆ.
9. ಹುಡುಗನ ತಂದೆಯು ಊಟ ಮಾಡಿದನೋ ? ಇಲ್ಲವೋ?
10. ಅವನು ನಮ್ಮ ಮನೆಯ ಸಮೀಪದಲ್ಲಿ ದೇವರಿಗೆ ನಮಸ್ಕಾರಗಳನ್ನು ಮಾಡುತ್ತಿದ್ದಾನೆ.

## ಉತ್ತರ

1. ನನಗೆ ಹಲ್ಲುಗಳು ಇಲ್ಲ
2. ಆದ್ದರಿಂದಲೇ ಹಣ್ಣುಗಳನ್ನು ತಿನ್ನುವುದಿಲ್ಲ
3. ಆ ಮನೆಗಳು ಯಾರವು?
4. ಆ ಮನೆಗಳು ನಮ್ಮವೇ
5. ನಮ್ಮ ಮನೆಗಳು ಹತ್ತಿರದಲ್ಲೇ ಇವೆ.
6. ಆ ಮಂಚದಲ್ಲಿ ಯಾರು ಇದ್ದಾರೆ?
7. ಆ ಹುಡುಗನ ಅಣ್ಣನು
8. ಈ ಹಣ್ಣನ್ನು ಅವನು ತಿನ್ನಲಿ
9. ಆ ಹಣ್ಣನ್ನು ನೀವು ತಿನ್ನಿರಿ
10. ಇಲ್ಲದಿದ್ದರೇ ಆ ಹಣ್ಣುಗಳನ್ನು ನಾವು ತಿನ್ನುತ್ತೇವೆ.

## ಉತ್ತರ

1. मम दन्ताः न सन्ति?
2. ततः फलानि न खादामि।
3. तानि गृहाणि केषाम्।
4. तानि गृहाणि अस्माकमेव।
5. अस्माकं गृहाणि सविधे एव सन्ति।
6. तस्मिन् मञ्चे के सन्ति?
7. तस्य बालकस्य अग्रजः।
8. इदं फलं सः खादतु।
9. तत् फलं यूयं खादत।
10. नोचेत् तानि फलानि वयं खादामः।

.... ನೀತಿ ಕಥೆ

# ಪ್ರೀತಿಸೋಣ ಎಲ್ಲರನ್ನೂ ಗೆಲ್ಲೋಣ

-ಡಾ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

ಶ್ಯಾಮರಾಯರು ತಮ್ಮ ಸುತ್ತಲೂ ನೆರದಿದ್ದ ಮಕ್ಕಳನ್ನು ನೋಡಿ ನಗುತ್ತ ಕಥೆ ಸುರು ಮಾಡಿದರು. ಮಕ್ಕಳೇ, ಒಬ್ಬ ರಾಜನಿದ್ದ. ಅವನಿಗೆ ಬೇಟೆ ಎಂಬುದು ಚಟವಾಗಿತ್ತು. ತನ್ನೊಡನೆ ರಾಜ್ಯದ ಜನರನ್ನೂ ಕರೆದೊಯ್ಯುತ್ತಿದ್ದ. ಆ ಜನರಿಗೆ ತಮ್ಮ ಜೀವನ ನಿರ್ವಹಣೆಗಾಗಿ ದುಡಿಮೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ರಾಜನಲ್ಲಿ ಹೇಳಲು ಭಯಪಡುತ್ತಿದ್ದರು.

ಒಮ್ಮೆ ಅವರೆಲ್ಲರೂ ಒಂದೆಡೆ ಸೇರಿದರು. ತಮ್ಮ ತಮ್ಮ ಕಷ್ಟಸುಖಗಳನ್ನು ಹೇಳತೊಡಗಿದರು. ರಾಜನ ಬೇಟೆಯಾಸೆಯ ಕಾರಣದಿಂದ ತಾವು ಏನೇನೆಲ್ಲ ಅನುಭವಿಸಬೇಕಾಗಿದೆ ಎಂಬುದೇ ಅಂದಿನ ಚರ್ಚೆಯ ವಿಷಯವಾಗಿತ್ತು. ಕೊನೆಗೆ, ನಮ್ಮ ರಾಜನಿಗೆ ಜಿಂಕೆಗಳ ಬೇಟೆಯೆಂದರೇ ಬಹಳ ಇಷ್ಟ. ರಾಜನಿಗೆ ಗೊತ್ತಾಗದಂತೆ ನಾವೆಲ್ಲ ಕಾಡಿಗೆ ಹೋಗೋಣ. ಒಂದಷ್ಟು ಜಿಂಕೆಗಳನ್ನು ಓಡಿಸಿಕೊಂಡು ಇಲ್ಲಿಗೆ ಬರೋಣ. ಚೆನ್ನಾಗಿ ನಾವೇ ಸಾಕೋಣ. ಜಿಂಕೆಗಳ ಸಂಖ್ಯೆ ಜಾಸ್ತಿಯಾಗುತ್ತದೆ. ರಾಜ ಬೇಟೆ ಎಂದಾಗ ಒಂದಷ್ಟು ಜಿಂಕೆಗಳನ್ನು ನಾವೇ ಕೊಡೋಣ ಎಂಬ ನಿರ್ಧಾರಕ್ಕೆ ಬಂದರು. ಒಂದು ಚಂದದ ಉದ್ಯಾನವನ ನಿರ್ಮಿಸಿದರು. ಕಾಡಿಗೆ ಹೋಗಿ ಜಿಂಕೆಗಳನ್ನು ಓಡಿಸಿಕೊಂಡು ಬಂದರು. ಉದ್ಯಾನ ಸೇರಿಸಿದರು ಕೆಲವು ದಿನಗಳು ಉರುಳಿದಂತೆ ಒಂದು ಜೋಡಿಗೆ ಮರಿ ಜಿಂಕೆ ಜನಿಸಿತು. ಊರವರು ಖುಷಿಪಟ್ಟರು. ಆ ಜಿಂಕೆಮರಿಗೆ ಮೋಹನ ಎಂದು ಹೆಸರಿಟ್ಟರು.

ದಿನಗಳು ಉರುಳುತ್ತಿದ್ದವು ಮೋಹನ ಬೆಳೆಯುತ್ತಿದ್ದ ಅವನೊಡನೆ ಇನ್ನೂ ಹಲವಾರು ಮರಿಗಳು ಸೇರಿ ಆಡುತ್ತಿದ್ದವು. ಆದರೆ ದಿನಗಳೆದಂತೆ ಮೋಹನನ ಗಮನಕ್ಕೆ ಇಂದಿರುವ ಜಿಂಕೆ ನಾಳೆ ಇಲ್ಲದಿರುವುದು ಗಮನಕ್ಕೆ ಬರುತ್ತಿತ್ತು. ಯೋಚಿಸತೊಡಗಿದ. ಗಮನವಿರಿಸಿದ ತಮ್ಮನ್ನು ಪ್ರೀತಿಯಿಂದ ಸಾಕುತ್ತಿದ್ದವರೇ ತಮ್ಮ ರಾಜನಿಗಾಗಿ ಆಗಾಗ್ಗೆ ತಾವು ಸಾಕಿದ ಜಿಂಕೆಗಳನ್ನು ಕೊಟ್ಟು ಕಳುಹಿಸುವುದನ್ನು ಗಮನಿಸಿದ, ನೊಂದ. ಒಮ್ಮೆ ತನ್ನ ಹೆತ್ತವರೊಡನೆ ತಾನೂ ರಾಜನ ಪಾಲಾದ.

ತಮ್ಮ ಪ್ರಯಾಣ ವಧಾಸ್ಥಾನದೆಡೆಗೆ ಎಂದು ಮೋಹನ ತಿಳಿದ. ಹೆದರಲಿಲ್ಲ. ಭೀತಿಯಿಲ್ಲದ ಮಾರುತಿಯಂತಿದ್ದ ಮೋಹನನನ್ನು ರಾಜ ಗಮನಿಸಿದ. ಅಚ್ಚರಿಗೊಳಗಾದ. ಆ ತನಕ ಆತ ಹಿಡಿದು ತಂದಿದ್ದ ಜಿಂಕೆಗಳೆಲ್ಲವೂ ಬಂಧಿಗಳಾದ ಭೀತಿಯಿಂದ ನಡುಗುತ್ತಿದ್ದವು. ಆದರೆ ಈ ಮರಿ ಜಿಂಕೆಯ ಧೈರ್ಯ ರಾಜನನ್ನು ಕೆಣಕಿತು. ಕೇಳಿದ ಮೋಹನನಾಗ, " ರಾಜಾ! ನಿನಗಾಗಿ ನಿನ್ನ ಪ್ರಜೆಗಳು ತಾವು ಸಾಕಿದ ಜಿಂಕೆಗಳನ್ನು ದಾನವಾಗಿ ಕೊಡುತ್ತಿದ್ದಾರೆ. ಹಾಗೆ ಕೊಡುವ ಜಿಂಕೆಗಳನ್ನು ತಮ್ಮ ಮನೆಯ ಮಕ್ಕಳಂತೆ ಅವರೆಷ್ಟು ಪ್ರೀತಿಸಿ ಬೆಳೆಸಿದ್ದಾರೆ ಎಂಬರಿವು ನಿನಗಿದೆಯೇ? ನಿನ್ನ ಬೇಟೆಯಾಸೆಗೆ ಮುಗ್ಧ ಜಿಂಕೆಗಳು ಬಲಿಯಾಗಬೇಕೇ? ಎಂದಿತು.

ಮತ್ತದು,"ರಾಜಾ ನಿನ್ನ ನಾಲಗೆಯ ಚಪಲ ಇನ್ನಾದರೂ ಸಂಯಮದಿಂದಿರಲಿ. ಕೊಂದು ತಿಂದರೆ ನಿನ್ನ ಹೊಟ್ಟೆಯೇನೋ ತುಂಬುತ್ತದೆ. ಆದರೆ ಸತ್ತವರಿಗಾಗಿ ಅಳುವವರ ಬಗ್ಗೆ ನೀನೆಂದಾದರೂ ಯೋಚಿಸಿರುವೆಯಾ? ನಿನ್ನ ಮನೆಯ ಮಕ್ಕಳನ್ನು, ಮನೆಯವರನ್ನು ಯಾರಾದರೂ ಹೊಡೆದು ಕೊಂದು ತಿಂದಿದ್ದರೆ ನಿನಗೇನನ್ನಿಸುತ್ತಿತ್ತು? ಎಂದು ಕೇಳಿತು.

ರಾಜನಿಗೆ ಜ್ಞಾನೋದಯವಾಯಿತು. ತಾನಿನ್ನು ಯಾರನ್ನೂ ಹಿಂಸಿಸನೆಂದು ನಿರ್ಧರಿಸಿದನು. ಮೋಹನನಿಗೆ ವಂದಿಸಿದನು. ತಂದ ಎಲ್ಲಾ ಜಿಂಕೆಗಳನ್ನು ಬಂಧಮುಕ್ತ ಗೊಳಿಸಿದನು. ಆನಂದಪಟ್ಟನು ಜಿಂಕೆಗಳೂ ಆನಂದದಿಂದ ನೆಗೆನೆಗೆದು ತಮ್ಮವರನ್ನು ಕೂಡಿಕೊಂಡವು.


**ನೀತಿ : ಹಿಂಸಿಸುವವರನ್ನು ಪ್ರೀತಿಯಿಂದ ಒಲಿಸಿಕೊಂಡರೆ ಅವರು ಪರಿವರ್ತನೆಗೊಳ್ಳುತ್ತಾರೆ.**



## ಬಾ ಲ ವಿ ನೋ ದಿ ನಿ

### ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

### ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಹೂ, ಚಿಟ್ಟೆ, ಜಡೆ ಬಿಲ್ಲೆಯ ಚೈನ್, ಜುಮಕಿ ಹಾಗೂ ಸೈಡ್ ಮಾಟಿ, ಮೂಕುತಿ, ಬಳೆ

### ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಅ ಕಾ ಕ್ಕೆ ಸೀ ಉ ವೇ ಮ

ರ ದಾ ಹಂ ದ್ದು ನ

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

8



ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.03.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.



**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್

## ರಸಪ್ರಶ್ನೆಗಳು


**ಉತ್ತರಗಳು**

| ಪ್ರಶ್ನೆ | ಉತ್ತರ |
|---|---|
| 1.ಶ್ರೀರಾಮನು ಯಾವ ಮಾಸದಲ್ಲಿ ಜನಿಸಿದನು? | ........................ |
| 2. ಧೀ ಎಂದರೇನು? | ........................ |
| 3. ಯುಗಾದಿ ಹಬ್ಬದಂದು ಏನನ್ನು ತಿನ್ನುತ್ತೇವೆ? | ........................ |
| 4. ಯದುಗಿರಿಯಮ್ಮನವರು ಯಾವ ವಯಸ್ಸಿನಲ್ಲಿ ವೈಕುಂಠ ಸೇರಿದರು? | ........................ |
| 5. ಪರ್ವ ಎಂದರೇನು? | ........................ |
| 6. ಯಾರು ಬೇಟೆಗಾರನ ರೂಪದಲ್ಲಿ ಬರುತ್ತಿದ್ದರು? | ........................ |
| 7.ಹೋಲಿಕಾ ಯಾರ ಸಹೋದರಿ? | ........................ |
| 8. ರಮಾತ್ರಿವಿಕ್ರಮ ದೇವರ ರಥೋತ್ಸವ ಎಂದು ನಡೆಯುತ್ತದೆ? | ........................ |
| 9.ಕೈಕೇಯಿ ಎಷ್ಟು ವರಗಳನ್ನು ದಶರಥನನ್ನು ಕೇಳುವಳು? | ........................ |
| 10.ಅಮ್ಮನವರ ಸನ್ನಿಧಿಯಲ್ಲಿ ಯಾವ ಮರವಿದೆ? | ........................ |
| 11.ಯಾವ ಅಂಕಿತ ನಾಮ ದೊರಕಿದೆ? | ........................ |
| 12.ಶ್ರೀವಾದಿರಾಜರಿಗೆ ಬಾಲ್ಯದಲ್ಲಿ ಏನೆಂದು ನಾಮಕರಣ ಮಾಡಿದರು? | ........................ |
| 13.ಮೋಹನ ಎಂದರೆ ಯಾರು? | ........................ |
| 14. ವೇದಗಳನ್ನು ಕದ್ದವರು ಯಾರು? | ........................ |
| 15. ವಿಷ್ಣುವು ಯಾವ ಅವತಾರವನ್ನು ತಳೆದನು? | ........................ |

ಹೆಸರು :
ಚಂದಾ ಸಂಖ್ಯೆ:
ತಂದೆಯ ಹೆಸರು :
ತಾಯಿಯ ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ:



# ಸ್ತೋತ್ರವನ್ನು ಕಲಿಯೋಣ

## ಭಾವಾರ್ಥ ಸಹಿತ ಶ್ರೀಭಾರತೀಶ ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



ಸದ್ರಾಜಸೂಯ ಹಯಮೇಧ ಪುರಸ್ಸರೇಷ್ಟ್ಯಾ ಶೈವಾಗ್ರ್ಯಗಣ್ಯ
ಮಗಧಾಧಿಪ ಪೂರ್ವ ಹತ್ಯಾ !
ತುಷ್ಟ ಪ್ರತುಷ್ಟ ಯದುನಾಥ ಪದಾಬ್ಜ ಭೃಂಗಶ್ರೀ ಭಾರತೀಶ
ಮಮ ದೇಹಿ ಕರಾವಲಂಬಮ್ ॥೯॥

ಶ್ರೀ ರಾಜಸೂಯ, ಅಶ್ವಮೇಧ ಮುಂತಾದ ಶ್ರೇಷ್ಠ ಯಾಗಗಳನ್ನು ಮಾಡುವುದರ ಮೂಲಕ, ಶೈವಾಗ್ರಗಣ್ಯ ಜರಾಸಂಧನ ವಧೆಯ ಮೂಲಕ, ಸಂತೋಷಗೊಂಡ ಶ್ರೀ ಕೃಷ್ಣನ ಪಾದ ಪದ್ಮಗಳಲ್ಲಿ ದುಂಬಿಯಂತಿರುವ ಶ್ರೀಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.





ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು

.................................

.................................

.................................


.................................


ರಾಮ, ಲಕ್ಷ್ಮೀ, ಹೋಳಿ,ಯುಗಾದಿ ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

ಚಿತ್ರಕಥೆ

# ಮತ್ಸ್ಯಾವತಾರ

ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ. ದ್ವಾರಕನಾಥ್





ಲೋಕಕಲ್ಯಾಣಕ್ಕಾಗಿ ಪ್ರಕಟವಾದ ವೇದಗಳನ್ನು ಸ್ವಾರ್ಥಕ್ಕಾಗಿ ಕದಿಯುವುದು ತಪ್ಪು. ಧರ್ಮ ರಕ್ಷಣೆಗಾಗಿ.... ವಿಷ್ಣುವು ಮತ್ಸ್ಯಾವತಾರವನ್ನು ತಳೆದನು.
ನಾನು ವೇದಗಳನ್ನು ತರುತ್ತೇನೆ ! ಚಿಂತಿಸಬೇಡ ಇಗೋ ನಾನು ಹೋಗುತ್ತಿದ್ದೇನೆ...
ಜಯಂ...ಜಯಂ... ಶ್ರೀಹರಿ
ಸೋಮಕಾ! ವೇದಗಳನ್ನು ತಕ್ಷಣವೇ ನನಗೆ ಸಮರ್ಪಿಸು ಇಲ್ಲದಿದ್ದರೆ ಯುದ್ಧ ಅನಿವಾರ್ಯ....
ಮೀನು.... ನೀನು ನನ್ನ ಜೊತೆ ಯುದ್ಧ ಮಾಡುವೆಯಾ? ನಾನು ಯುದ್ಧಕ್ಕೆ ಸಿದ್ಧ.... ತಲೆ ನಿನ್ನದು ... ದೇಹ ಮೀನಿನದು... ನಿನ್ನ ರೂಪವು ವಿಚಿತ್ರವಾಗಿದೆ.
ಇಬ್ಬರ ನಡುವೆ ಘೋರ ಯುದ್ಧ ನಡೆಯಿತು. ಕೊನೆಯಲ್ಲಿ ವಿಷ್ಣುವು ಚಕ್ರಾಯುಧದಿಂದ ಸೋಮಕನನ್ನು ಕೊಂದನು.
ಶ್ರೀ ಹರಿಯೇ ಕಾಪಾಡು ನನ್ನ ಕಾಪಾಡು
ಬ್ರಹ್ಮ! ವೇದಗಳನ್ನು ಸ್ವೀಕರಿಸು ಸೃಷ್ಟಿಯನ್ನು ಆರಂಭಿಸು...
ಹಾಗೆಯೇ ಶ್ರೀಹರಿ!
ವೇದಗಳನ್ನು ಸ್ವೀಕರಿಸಿದನು ಮತ್ತು ಭಕ್ತಿಯಿಂದ ವಿಷ್ಣುವನ್ನು ಸ್ತುತಿಸಿದನು.
ಓಂ ನಮೋ ಮತ್ಸ್ಯನಾರಾಯಣಾಯ ನಮಃ
ಸರ್ವೇ ಜನಾಃ ಸುಖಿನೋ ಭವಂತು !

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ. ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.


ತಿರುಮಲೆ
ಶ್ರೀ ವೇಂಕಟೇಶ್ವರ ಸ್ವಾಮಿಯವರ
ತೆಪ್ಪೋತ್ಸವಗಳು
03-03-2023
ಶ್ರೀ ಕೋದಂಡರಾಮಸ್ವಾಮಿಯವರಿಗೆ
04-03-2023
ಶ್ರೀ ಕೃಷ್ಣಸ್ವಾಮಿಯವರಿಗೆ
05-03-2023 ರಿಂದ 07-03-2023 ರ ವರೆಗೆ
ಶ್ರೀ ವೇಂಕಟೇಶ್ವರ ಸ್ವಾಮಿಯವರಿಗೆ

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-02-2023 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month

